ಬೆಂಗಳೂರು ಗುರುವಾರ 24 ಸೆಪ್ಟೆಂಬರ್ 2026 I ಸಂಪುಟ 44 I ಸಂಚಿಕೆ 283 ಪುಟ 8 I ಬೆಲೆ 3.00

Sanjevani Kannada Daily I Bangalore I Thursday I 24 September 2026 I Vol: 44 Issue 283 I Pages 8 I RNINo:36667/82 I Rs. 3.00

# ಸಂಜೆವಾಣಿ

1982

ಬೆಂಗಳೂರು - ಹುಬ್ಬಳ್ಳಿ - ಕಲಬುರಗಿ - ಬಳ್ಳಾರಿ - ಮೈಸೂರು - ಮಂಗಳೂರು - ರಾಯಚೂರು - ದಾವಣಗೆರೆ - ಶಿವಮೊಗ್ಗ

www.sanjevani.com contact @sanjevani.com PH: 080 22868882





## ಸಿಲ್ಕ್‌ಬೋರ್ಡ್ ಫ್ಲೈಓವರ್ ಕೆಳಗೆ ಹೊಸ ರೂಪ

# ಪ್ರಯಾಣಿಕರಿಗೆ ಆಸನ, ಫುಟ್‌ಪಾತ್, ಲೈಟಿಂಗ್ ವ್ಯವಸ್ಥೆ

ಬೆಂಗಳೂರು,ಸೆ.24:ಸಿಲ್ಕ್‌ಬೋರ್ಡ್ ಜಂಕ್ಷನ್‌ನ ಫ್ಲೈಓವರ್ ಕೆಳಭಾಗವನ್ನು ಸಾರ್ವಜನಿಕರ ಅನುಕೂಲಕ್ಕೆ ಅಭಿವೃದ್ಧಿಪಡಿಸಲು ಬೆಂಗಳೂರು ದಕ್ಷಿಣ ನಗರ ಪಾಲಿಕೆ ಮುಂದಾಗಿದೆ.

ಈ ಹಿನ್ನೆಲೆಯಲ್ಲಿ ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ಅವರು ಬುಧವಾರ ಸ್ಥಳ ಪರಿಶೀಲನೆ ನಡೆಸಿ, ಬೆಳ್ಳಂದೂರು ಫ್ಲೈಓವರ್ ಕೆಳಭಾಗವನ್ನು ಅಭಿವೃದ್ಧಿಪಡಿಸಿರುವ ಮಾದರಿಯಲ್ಲಿ ಸಿಲ್ಕ್‌ಬೋರ್ಡ್‌ನಲ್ಲೂ ಸಮಗ್ರ ಅಭಿವೃದ್ಧಿ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

**ಪ್ರಯಾಣಿಕರಿಗೆ ಆಸನ, ವಿಶ್ರಾಂತಿ ತಾಣ**

ಸಿಲ್ಕ್‌ಬೋರ್ಡ್ ಪ್ರಮುಖ ಜಂಕ್ಷನ್ ಆಗಿದ್ದು, ಪ್ರತಿನಿತ್ಯ ಸಾವಿರಾರು ಮಂದಿ ಸಂಚರಿಸುತ್ತಾರೆ. ಬಸ್ ಹಾಗೂ ಇತರೆ ವಾಹನಗಳಿಗಾಗಿ ಕಾಯುವ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಆಸನ ವ್ಯವಸ್ಥೆ ಹಾಗೂ ವಿಶ್ರಾಂತಿ ತಾಣ ನಿರ್ಮಿಸುವ ಯೋಜನೆ ರೂಪಿಸುವಂತೆ ಆಯುಕ್ತರು ಪಾಲಿಕೆ ಅಭಿಯಂತರರಿಗೆ ಸೂಚಿಸಿದರು.

ಈ ಪ್ರದೇಶವನ್ನು ಅಚ್ಚುಕಟ್ಟಾಗಿ ಅಭಿವೃದ್ಧಿಪಡಿಸಿ, ಸಾರ್ವಜನಿಕರು ಸುರಕ್ಷಿತವಾಗಿ ಓಡಾಡಲು ಅಗತ್ಯ ವ್ಯವಸ್ಥೆ ಕಲ್ಪಿಸುವಂತೆ ನಿರ್ದೇಶನ ನೀಡಲಾಗಿದೆ.

**ಪಿಲ್ಲರ್‌ಗಳಿಗೆ ವಾಲ್ ಪೇಂಟಿಂಗ್**

ಪಾಲಿಕೆ ಹಾಗೂ ವಾಕಲೂರು ಎನ್‌ಜಿಒ ಸಹಯೋಗದಲ್ಲಿ ಈಗಾಗಲೇ ಬೆಳ್ಳಂದೂರು ಫ್ಲೈಓವರ್ ಕೆಳಭಾಗವನ್ನು ಅಭಿವೃದ್ಧಿಪಡಿಸಲಾಗಿದ್ದು, ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಇದೇ ಮಾದರಿಯಲ್ಲಿ ಸಿಲ್ಕ್‌ಬೋರ್ಡ್ ಫ್ಲೈಓವರ್ ಕೆಳಭಾಗವನ್ನೂ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.

ಈ ವಾರಾಂತ್ಯದಲ್ಲಿ ವಾಕಲೂರು ಎನ್‌ಜಿಒ ವತಿಯಿಂದ ಫ್ಲೈಓವರ್‌ನ ಪಿಲ್ಲರ್‌ಗಳಿಗೆ ಆಕರ್ಷಕ ವಾಲ್ ಪೇಂಟಿಂಗ್ ಕೈಗೊಳ್ಳಲು ಉದ್ದೇಶಿಸಲಾಗಿದೆ. ಸಂಸ್ಥೆಯ ಮುಖ್ಯಸ್ಥ ಅರುಣ್ ಪೈ ಅವರು ಈ ಸಂಬಂಧ ಪಾಲಿಕೆಯ ಸಹಕಾರ ಕೋರಿದ್ದಾರೆ.

**ಕಸ ತೆರವು, ರಾಜಕಾಲುವೆಗೆ ಸ್ಲ್ಯಾಬ್**

ಈ ಹಿಂದೆ ಸಾರ್ವಜನಿಕರು ಕಸ ಸುರಿಯುತ್ತಿದ್ದ ಪರಿಣಾಮ ಅಸ್ವಚ್ಛವಾಗಿದ್ದ ಫ್ಲೈಓವರ್ ಕೆಳಭಾಗವನ್ನು ಸ್ವಚ್ಛಗೊಳಿಸಲಾಗಿದೆ. ನೆಲವನ್ನು ಸಮತಟ್ಟು ಮಾಡಿ, ಸಾರ್ವಜನಿಕರ ಓಡಾಟಕ್ಕೆ ಮುಕ್ತ ಸ್ಥಳ ಕಲ್ಪಿಸುವಂತೆ ಆಯುಕ್ತರು ಸೂಚಿಸಿದರು.

ತೆರೆದಿರುವ ರಾಜಕಾಲುವೆಗಳಿಗೆ ಸ್ಲ್ಯಾಬ್ ಅಳವಡಿಸಿ, ಪಾದಚಾರಿಗಳ ಸಂಚಾರಕ್ಕೆ ಅನುಕೂಲ ಮಾಡಿಕೊಡುವಂತೆ ನಿರ್ದೇಶನ ನೀಡಲಾಗಿದೆ. ಜೊತೆಗೆ ಸಾಕಷ್ಟು ಲೈಟಿಂಗ್ ವ್ಯವಸ್ಥೆ ಕಲ್ಪಿಸಿ, ವಾಹನ ಸಂಚಾರಕ್ಕೂ ಯಾವುದೇ ಅಡಚಣೆಯಾಗದಂತೆ ಅಭಿವೃದ್ಧಿ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ.

**ಮೆಟ್ರೋದಿಂದ ಬಸ್ ನಿಲ್ದಾಣಕ್ಕೆ ಸುಗಮ ಸಂಪರ್ಕ**

ಸಿಲ್ಕ್‌ಬೋರ್ಡ್ ಮೆಟ್ರೋ ನಿಲ್ದಾಣದಿಂದ ಬಿಎಂಟಿಸಿ ಬಸ್ ನಿಲ್ದಾಣದವರೆಗೆ ಪಾದಚಾರಿಗಳಿಗೆ ಅನುಕೂಲವಾಗುವಂತೆ ಫುಟ್‌ಪಾತ್ ಅಭಿವೃದ್ಧಿಪಡಿಸಲು ಸೂಚಿಸಲಾಗಿದೆ. ಮಳೆಗಾಲದಲ್ಲಿ ನೀರು ನಿಲ್ಲದಂತೆ ಸೂಕ್ತ ಡ್ರೈನೇಜ್ ವ್ಯವಸ್ಥೆ ರೂಪಿಸಿ, ಮಳೆನೀರು ಸರಾಗವಾಗಿ ಹರಿದು ಹೋಗುವಂತೆ ಕ್ರಮ ಕೈಗೊಳ್ಳುವಂತೆ ಆಯುಕ್ತರು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

**ಬ್ಲೂಪ್ರಿಂಟ್ ಸಿದ್ಧಪಡಿಸಲು ಸೂಚನೆ**

ಅಭಿವೃದ್ಧಿ ಕಾಮಗಾರಿ ಪೂರ್ಣಗೊಂಡ ಬಳಿಕ ಸ್ಥಳ ಹೇಗೆ ಕಾಣಲಿದೆ ಎಂಬುದರ ಕುರಿತು ವಾಕಲೂರು ಎನ್‌ಜಿಒ ಪ್ರತಿನಿಧಿಗಳು ಹಾಗೂ ಪಾಲಿಕೆಯ ಕಾರ್ಯಪಾಲಕ ಎಂಜಿನಿಯರ್‌ಗಳು ಚರ್ಚಿಸಿ ಸಂಪೂರ್ಣ ಬ್ಲೂಪ್ರಿಂಟ್ ಮತ್ತು ಕಾರ್ಯಸಾಧ್ಯತಾ ಪ್ರಸ್ತಾವನೆ ಸಿದ್ಧಪಡಿಸಿ ಸಲ್ಲಿಸುವಂತೆ ಕೆ.ಎನ್. ರಮೇಶ್ ಸೂಚಿಸಿದ್ದಾರೆ.

ಸ್ಥಳ ಪರಿಶೀಲನೆ ವೇಳೆ ವಾಕಲೂರು ಎನ್‌ಜಿಒ ಮುಖ್ಯಸ್ಥ ಅರುಣ್ ಪೈ ಹಾಗೂ ಪಾಲಿಕೆಯ ಅಭಿಯಂತರರು ಉಪಸ್ಥಿತರಿದ್ದರು.

# ಲಾಲ್‌ಬಾಗ್ ಬಳಿ ನಂದಿನಿ ಮಳಿಗೆ ತೆರವಿಗೆ ಎನ್‌ಆರ್‌ಆರ್ ಆಗ್ರಹ

ಬೆಂಗಳೂರು, ಸೆ.24– ನಗರದ ಐತಿಹಾಸಿಕ ಹಾಗೂ ಪಾರಂಪರಿಕ ತಾಣ ಲಾಲ್‌ಬಾಗ್ ಪಶ್ಚಿಮ ದ್ವಾರದ ಮುಂಭಾಗ ಸ್ಥಾಪಿಸಲಾಗಿರುವ ನಂದಿನಿ ಹಾಲು ಉತ್ಪನ್ನಗಳ ಮಾರಾಟ ಮಳಿಗೆಯನ್ನು ಕೂಡಲೇ ತೆರವುಗೊಳಿಸಬೇಕು ಎಂದು ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಘಟಕದ ಮಾಜಿ ಅಧ್ಯಕ್ಷ ಹಾಗೂ ಬಿಬಿಎಂಪಿಯ ಮಾಜಿ ಆಡಳಿತ ಪಕ್ಷದ ನಾಯಕ ರಮೇಶ್ ಎನ್. ಆರ್. ಆಗ್ರಹಿಸಿದ್ದಾರೆ.




ಈ ಸಂಬಂಧ ಸರ್ಕಾರದ ಮುಖ್ಯ ಕಾರ್ಯದರ್ಶಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಮುಖ್ಯ ಆಯುಕ್ತರು ಹಾಗೂ ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತರಿಗೆ ಸಂಪೂರ್ಣ ದಾಖಲೆಗಳೊಂದಿಗೆ ಮನವಿ ಸಲ್ಲಿಸಿರುವುದಾಗಿ ಅವರು ತಿಳಿಸಿದ್ದಾರೆ.

**ಪ್ರಸ್ತಾವ ತಿರಸ್ಕರಿಸಿದ್ದರೂ ಅನುಮತಿ?**

ಸುಮಾರು 240 ಎಕರೆ ಪ್ರದೇಶದಲ್ಲಿರುವ ಲಾಲ್‌ಬಾಗ್ ಹಲವು ಶತಮಾನಗಳ ಇತಿಹಾಸ ಹೊಂದಿದ್ದು, ಅದರ ಸಂರಕ್ಷಣೆಗೆ ಸಂಬಂಧಿಸಿದ ಕಾನೂನು ಮತ್ತು ನಿಯಮಗಳನ್ನು ಪಾಲಿಸಬೇಕಿದೆ. ಇಂತಹ ಪಾರಂಪರಿಕ ತಾಣದ ಪಶ್ಚಿಮ ದ್ವಾರದ ಮುಂಭಾಗ ನಂದಿನಿ ಹಾಲು ಉತ್ಪನ್ನಗಳ ಮಾರಾಟ ಮಳಿಗೆ ಸ್ಥಾಪಿಸುವ ಸಂಬಂಧ ಬಿಬಿಎಂಪಿಯಿಂದ ಬಂದಿದ್ದ ಪ್ರಸ್ತಾವನೆಯನ್ನು ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕರು 2025ರ ಆಗಸ್ಟ್ 22ರಂದು ತಿರಸ್ಕರಿಸಿದ್ದರು ಎಂದು ರಮೇಶ್ ಆರೋಪಿಸಿದ್ದಾರೆ.

ಆದರೆ, ಬಳಿಕ ಬೆಂಗಳೂರು ಕೇಂದ್ರ ನಗರ ಪಾಲಿಕೆ 2026ರ ಏಪ್ರಿಲ್ 22ರಂದು ಇದೇ ಸ್ಥಳದಲ್ಲಿ ನಂದಿನಿ ಮಳಿಗೆ ಸ್ಥಾಪಿಸಲು ಅನುಮೋದನೆ ನೀಡಿದ್ದು, ವಿಷಯ ಸಂಖ್ಯೆ 01/2026–27ರ ಅಡಿ ನಿರ್ಣಯ ಕೈಗೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ.

**100 ಚದರ ಅಡಿ ಜಾಗ ಹಸ್ತಾಂತರ:**

ಇದಾದ ಬಳಿಕ ಕೇಂದ್ರ ನಗರ ಪಾಲಿಕೆಯ ಜಂಟಿ ಆಯುಕ್ತರು–2 ಅವರು ಜೂನ್ 10ರಂದು ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಕರಾರು ಮಾಡಿಕೊಂಡಿದ್ದಾರೆ. ಜುಲೈ 22ರಂದು ಲಾಲ್‌ಬಾಗ್ ಪಶ್ಚಿಮ ದ್ವಾರದ ಮುಂಭಾಗದ 100 ಚದರ ಅಡಿ ಜಾಗವನ್ನು ಏಒ–ಈಗೆ ಹಸ್ತಾಂತರಿಸಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಈ ಮಧ್ಯೆ, ಲಾಲ್‌ಬಾಗ್ ಪಶ್ಚಿಮ ದ್ವಾರದ ಮುಂಭಾಗ ನಿರ್ಮಿಸಲಾಗಿರುವ ನಂದಿನಿ ಮಳಿಗೆಯನ್ನು ತೆರವುಗೊಳಿಸುವಂತೆ ತೋಟಗಾರಿಕೆ ಇಲಾಖೆಯ ನಿರ್ದೇಶಕರು ಆಗಸ್ಟ್ 10ರಂದು ಆದೇಶಿಸಿದ್ದಾರೆ. ಆದರೂ ಈವರೆಗೆ ಮಳಿಗೆ ತೆರವುಗೊಳಿಸಲು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ರಮೇಶ್ ಆರೋಪಿಸಿದ್ದಾರೆ.

ಮಳಿಗೆ ತೆರವಿಗೆ ಆಗ್ರಹಿಸಿ ಲಾಲ್‌ಬಾಗ್ ನಡಿಗೆದಾರರ ಒಕ್ಕೂಟವು ಆಗಸ್ಟ್ 12ರಂದು ನೂರಾರು ನಡಿಗೆದಾರರ ಸಹಿಗಳೊಂದಿಗೆ ಜಿಬಿಎ ಮುಖ್ಯ ಆಯುಕ್ತರು ಹಾಗೂ ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಿದೆ ಎಂದು ಅವರು ತಿಳಿಸಿದ್ದಾರೆ.

"ಲಾಲ್‌ಬಾಗ್‌ನಂತಹ ಐತಿಹಾಸಿಕ ಪಾರಂಪರಿಕ ತಾಣದ ಸಂರಕ್ಷಣೆ ಎಲ್ಲರ ಜವಾಬ್ದಾರಿಯಾಗಿದೆ. ಈಗಾಗಲೇ ತೋಟಗಾರಿಕೆ ಇಲಾಖೆ ತೆರವಿಗೆ ಸೂಚನೆ ನೀಡಿದ್ದರೂ ಕ್ರಮ ಕೈಗೊಳ್ಳದಿರುವುದು ಪ್ರಶ್ನಾರ್ಹ" ಎಂದು ಎನ್ ಅರ್ ರಮೇಶ್ ಹೇಳಿದ್ದಾರೆ.

**ನ್ಯಾಯಾಲಯದ ಮೆಟ್ಟಿಲೇರುವ ಎಚ್ಚರಿಕೆ:**

ಮಳಿಗೆಯನ್ನು ಕೂಡಲೇ ತೆರವುಗೊಳಿಸುವಂತೆ ಸರ್ಕಾರ ಹಾಗೂ ಜಿಬಿಎ ಅಧಿಕಾರಿಗಳಿಗೆ ಒತ್ತಾಯಿಸಿರುವ ಅವರು, ಈ ವಿಚಾರದಲ್ಲಿ ಕ್ರಮ ಕೈಗೊಳ್ಳದಿದ್ದರೆ ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಕ್ರಮದ ವಿರುದ್ಧ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ, ನಗರದ ೦ಅಒಒ ನ್ಯಾಯಾಲಯ ಹಾಗೂ ರಾಜ್ಯ ಹೈಕೋರ್ಟ್‌ನಲ್ಲಿ ಪ್ರಕರಣ ದಾಖಲಿಸುವುದಾಗಿ ತಿಳಿಸಿದ್ದಾರೆ.

## ಆಧಾರ್ ಕಾರ್ಡ್ ತಿದ್ದುಪಡಿಗಾಗಿ ಜನರ ಪರದಾಟ

ವಿಜಯನಗರ,ಸೆ.24– ಆಧಾರ್ ಕಾರ್ಡ್‌ನಲ್ಲಿ ತಿದ್ದುಪಡಿ ಮಾಡಿಸಿಕೊಳ್ಳಲು ಆಗಮಿಸುತ್ತಿರುವ ಸಾರ್ವಜನಿಕರು ನಿತ್ಯವೂ ಕಚೇರಿಗೆ ಬಂದು ವಾಪಸ್ ತೆರಳುವಂತಾಗಿದ್ದು, ವಿಜಯನಗರ ಜಿಲ್ಲೆಯ ಕಾನಾಹೊಸಹಳ್ಳಿ ನಾಡ ಕಚೇರಿಯಲ್ಲಿ ಜನರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಕಾನಾಹೊಸಹಳ್ಳಿ ನಾಡ ಕಚೇರಿಯಲ್ಲಿ ಆಧಾರ್ ತಿದ್ದುಪಡಿ ಸೇವೆ ಹಲವು ದಿನಗಳಿಂದ ಸಮರ್ಪಕವಾಗಿ ಲಭ್ಯವಾಗುತ್ತಿಲ್ಲ, ಇದರಿಂದ ದೂರದ ಊರುಗಳಿಂದ ಆಗಮಿಸುವ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ.

ಆಧಾರ್ ತಿದ್ದುಪಡಿಗಾಗಿ ಪ್ರತಿದಿನ ಕಚೇರಿಗೆ ಆಗಮಿಸುತ್ತಿರುವ ಜನರಿಗೆ ಸೇವೆ ದೊರೆಯದೆ ನಿರಾಸೆಯಿಂದ ವಾಪಸ್ ತೆರಳುವ ಪರಿಸ್ಥಿತಿ ಎದುರಾಗಿದೆ. ಈ ಹಿನ್ನೆಲೆಯಲ್ಲಿ ಕಚೇರಿ ಸಿಬ್ಬಂದಿಯನ್ನು ಗ್ರಾಮಸ್ಥರು ತರಾಟೆಗೆ ತೆಗೆದುಕೊಂಡು, ಸಮಸ್ಯೆಯನ್ನು ಶೀಘ್ರವಾಗಿ ಬಗೆಹರಿಸುವಂತೆ ಒತ್ತಾಯಿಸಿದರು.

ಇದಕ್ಕೆ ಪ್ರತಿಯಾಗಿ ಕಚೇರಿ ಸಿಬ್ಬಂದಿ ತಾಂತ್ರಿಕ ದೋಷ ಎಂದು ತಿಳಿಸುವ ಪೋಸ್ಟರ್ ಅನ್ನು ಕಚೇರಿಯಲ್ಲಿ ಅಂಟಿಸಿದ್ದಾರೆ. ಆದರೆ ಸಮಸ್ಯೆ ಯಾವಾಗ ಬಗೆಹರಿಯಲಿದೆ ಎಂಬ ಬಗ್ಗೆ ಸ್ಪಷ್ಟ ಮಾಹಿತಿ ದೊರೆಯದಿರುವುದು ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಗಿದೆ.

ಆಧಾರ್ ತಿದ್ದುಪಡಿ ಸೇರಿದಂತೆ ಅಗತ್ಯ ಸೇವೆಗಳಿಗಾಗಿ ಬರುವ ಸಾರ್ವಜನಿಕರ ಸಮಯ ಹಾಗೂ ಹಣ ವ್ಯರ್ಥವಾಗದಂತೆ, ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ತಾಂತ್ರಿಕ ಸಮಸ್ಯೆಯನ್ನು ಪರಿಹರಿಸಿ ಸೇವೆಯನ್ನು ಪುನರಾರಂಭಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

## ಜೆಡಿಎಸ್ ಮುಖಂಡ ಅಂದಾನಪ್ಪ ಮನೆಯ ವಾಚ್‌ಮ್ಯಾನ್ ಆತ್ಮಹತ್ಯೆ

ಬೆಂಗಳೂರು, ಸೆ.24–ಜೆಡಿಎಸ್ ಮುಖಂಡ ಅಂದಾನಪ್ಪ ಅವರ ಮನೆಯಲ್ಲಿ ವಾಚ್‌ಮ್ಯಾನ್ ಕೆಲಸ ಮಾಡುತ್ತಿದ್ದ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಲಗ್ಗೆರೆಯಲ್ಲಿ ನಡೆದಿದೆ.

ಲಗ್ಗೆರೆಯ ನಾಗರಾಜ್ (65) ಆತ್ಮಹತ್ಯೆ ಮಾಡಿಕೊಂಡವರು. ಹಾಸನ ಜಿಲ್ಲೆಯ ಅರಸೀಕೆರೆಯ ನಾಗರಾಜ್ ಲಗ್ಗೆರೆ ಬಳಿಯಿರುವ ಅಂದಾನಪ್ಪ ಮನೆಯಲ್ಲಿ ಕಳೆದ ನಾಲ್ಕೈದು ವರ್ಷಗಳಿಂದ ಕೆಲಸ ಮಾಡುತ್ತಿದ್ದರು.

ಇಂದು ಬೆಳಗ್ಗೆ ಇದ್ದಕ್ಕಿದ್ದಂತೆ ಅಂದಾನಪ್ಪ ಮರಕ್ಕೆ ಶಾಲಿನಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ಘಟನಾ ಸ್ಥಳಕ್ಕೆ ರಾಜಗೋಪಾಲನಗರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

## ಯುವಕನ ಹತ್ಯೆ: ಆರೋಪಿಗೆ ಬಲೆ

ಬೆಂಗಳೂರು,ಸೆ.24–ರಸ್ತೆ ಬದಿಯ ಪೊದೆಯಲ್ಲಿ ಕೊಲೆಯಾಗಿ ಬಿದ್ದಿದ್ದ ಯುವಕನ ಗುರುತನ್ನು ಆನೇಕಲ್ ಪೊಲೀಸರು ಪತ್ತೆಹಚ್ಚಿದ್ದಾರೆ.

ಆನೇಕಲ್ ತಾಲೂಕಿನ ಕರ್ಪೂರು ಗ್ರಾಮದ ನಿವಾಸಿ ಸುಭಾಷ್ ಮೃತಪಟ್ಟವರು. ಆನೇಕಲ್ ತಾಲೂಕಿನ ರಾಮಕೃಷ್ಣಪುರ ರಸ್ತೆಯ ಬದಿಯ ಪೊದೆಯಲ್ಲಿ ಯುವಕನ ಶವ ಪತ್ತೆಯಾಗಿತ್ತು. ತನಿಖೆ ಕೈಗೊಂಡ ಪೊಲೀಸರು ಮೃತನ ಗುರುತನ್ನು ಪತ್ತೆಹಚ್ಚಿದ್ದು, ಸುಭಾಷ್ ಡಕಾಯಿತಿ ಹಾಗೂ ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಎನ್ನಲಾಗಿದೆ.

ಸುಭಾಷ್ ತನ್ನ ಗ್ಯಾಂಗ್‌ನೊಂದಿಗೆ ನಿನ್ನೆ ರಾತ್ರಿ ಆಟೋದಲ್ಲಿ ರಾಮಕೃಷ್ಣಪುರ ರಸ್ತೆಗೆ ಬಂದಿದ್ದ. ಅಲ್ಲಿ ಮದ್ಯದ ಪಾರ್ಟಿ ನಡೆಸಿದ ಬಳಿಕ ಕ್ಷುಲ್ಲಕ ಕಾರಣಕ್ಕೆ ಗ್ಯಾಂಗ್ ಸದಸ್ಯರ ನಡುವೆ ಗಲಾಟೆ ನಡೆದಿದೆ.

ಈ ವೇಳೆ ದೊಣ್ಣೆ ಹಾಗೂ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಸುಭಾಷ್‌ನನ್ನು ಕೊಲೆ ಮಾಡಲಾಗಿದೆ ಎಂದು ಶಂಕಿಸಲಾಗಿದೆ.

ಬಳಿಕ ಆರೋಪಿಗಳು ಆಟೋದಲ್ಲಿ ಸ್ಥಳದಿಂದ ಪರಾರಿಯಾಗಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಸೂರ್ಯನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿಗಳಿಗಾಗಿ ಶೋಧ ಕಾರ್ಯ ನಡೆಸುತ್ತಿದ್ದಾರೆ. ಆರೋಪಿಗಳ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ.

## ಈಜು ಪ್ರತಿಭೆ ಧಿನಿಧಿ ದೇಸಿಂಘುಗೆ ಬಜಾಜ್ ಫಿನ್ಸರ್ವ್ ಬೆಂಬಲ

ಬೆಂಗಳೂರು/ಮುಂಬೈ, ಸೆ.24: ಭಾರತದ ಯುವ ಈಜು ಪ್ರತಿಭೆ, ಪ್ಯಾರಿಸ್–2024 ಒಲಿಂಪಿಕ್ಸ್‌ನ ಅತ್ಯಂತ ಕಿರಿಯ ಭಾರತೀಯ ಕ್ರೀಡಾಪಟು ಧಿನಿಧಿ ದೇಸಿಂಘು ಅವರೊಂದಿಗೆ ಬಜಾಜ್ ಫಿನ್ಸರ್ವ್ ಒಪ್ಪಂದ ಮಾಡಿಕೊಂಡಿದೆ.



ಈಜು, ಟೆನಿಸ್, ಬ್ಯಾಡ್ಮಿಂಟನ್ ಮತ್ತು ಓಟದಂತಹ ಕ್ರೀಡೆಗಳಲ್ಲಿ ಯುವ ಪ್ರತಿಭೆಗಳನ್ನು ಗುರುತಿಸಿ ದೀರ್ಘಾವಧಿಯ ಬೆಂಬಲ ನೀಡುವ ಯೋಜನೆಯ ಭಾಗವಾಗಿ ಈ ಒಪ್ಪಂದ ಮಾಡಿಕೊಳ್ಳಲಾಗಿದೆ.

16 ವರ್ಷದ ಧಿನಿಧಿ 2025ರ ರಾಷ್ಟ್ರೀಯ ಕ್ರೀಡಾಕೂಟದಲ್ಲಿ 11 ಪದಕ, 9 ಚಿನ್ನ ಗೆದ್ದಿದ್ದಾರೆ. 100, 200 ಹಾಗೂ 400 ಮೀಟರ್ ಫ್ರೀಸ್ಟೈಲ್ ವಿಭಾಗಗಳಲ್ಲಿ ರಾಷ್ಟ್ರೀಯ ದಾಖಲೆ ಹೊಂದಿದ್ದಾರೆ. 200 ಮೀಟರ್ ಫ್ರೀಸ್ಟೈಲ್‌ನಲ್ಲಿ ತಮ್ಮದೇ ದಾಖಲೆಯನ್ನು 2:04.24ರಿಂದ 2:01.81ಕ್ಕೆ ಸುಧಾರಿಸಿದ್ದಾರೆ.

ಬಜಾಜ್ ಫಿನ್ಸರ್ವ್‌ನ ಮಾನವ್ ಮಿಯಾನ್ವಾಲ್ ಮಾತನಾಡಿ, ಕ್ರೀಡಾಪಟುಗಳು ಯಶಸ್ಸು ಸಾಧಿಸಿದ ಬಳಿಕವಲ್ಲದೆ, ಪ್ರತಿಭೆ ರೂಪುಗೊಳ್ಳುವ ಆರಂಭಿಕ ಹಂತದಲ್ಲೇ ಬೆಂಬಲಿಸುವುದು ಸಂಸ್ಥೆಯ ಉದ್ದೇಶವಾಗಿದೆ ಎಂದರು.

ಧಿನಿಧಿ ಮಾತನಾಡಿ, ಬಜಾಜ್ ಫಿನ್ಸರ್ವ್‌ನ ಬೆಂಬಲವು ತಮ್ಮ ಆತ್ಮವಿಶ್ವಾಸ ಹೆಚ್ಚಿಸಿದ್ದು, ಭವಿಷ್ಯದಲ್ಲಿ ಇನ್ನಷ್ಟು ಸಾಧನೆ ಮಾಡಿ ಜಾಗತಿಕ ವೇದಿಕೆಯಲ್ಲಿ ಭಾರತವನ್ನು ಪ್ರತಿನಿಧಿಸುವುದು ತಮ್ಮ ಗುರಿಯಾಗಿದೆ ಎಂದು ಹೇಳಿದರು.

## ನಾಳೆ ಜಲಮಂಡಳಿ ಫೋನ್ ಇನ್ ಕಾರ್ಯಕ್ರಮ

ಬೆಂಗಳೂರು,ಸೆ.24–ಬೆಂಗಳೂರು ಜಲಮಂಡಳಿಯ ವತಿಯಿಂದ ಜಲಮಂಡಳಿ ಅಧ್ಯಕ್ಷರಾದ ಡಾ.ಮಂಜುಳ ಎನ್ ಭಾ.ಆ.ಸೇ. ರವರ ಅಧ್ಯಕ್ಷತೆಯಲ್ಲಿ ಸೆಪ್ಟೆಂಬರ್ 25 ರಂದು ಶುಕ್ರವಾರ ಬೆಳಿಗ್ಗೆ 09:30 ರಿಂದ 10:30 ರವರೆಗೆ ನೇರ ಫೋನ್–ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ.

ಸಾರ್ವಜನಿಕರು ತಮ್ಮ ವಲಯ/ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು–ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು.

ಸಾರ್ವಜನಿಕರು ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ: 080–22945119 ಮತ್ತು 080–22229639.

ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆಯನ್ನು ತಿಳಿಸಿ ದೂರನ್ನು ನೀಡಲು ಕೋರಲಾಗಿದೆ. ಸಾರ್ವಜನಿಕರು ಈ ನೇರ ಫೋನ್–ಇನ್ ಕಾರ್ಯಕ್ರಮದ ಸದುಪಯೋಗಪಡಿಸಿಕೊಳ್ಳಲು ಪ್ರಕಟಣೆಯಲ್ಲಿ ಕೋರಿದೆ.

## ನಾಲೆಗೆ ಬಿದ್ದು ಯುವಕ ಸಾವು

ಹಾಸನ,ಸೆ.24–ವೇಗವಾಗಿ ಬೈಕ್‌ನಲ್ಲಿ ಹೋಗುತ್ತಿದ್ದ ಯುವಕನೊಬ್ಬ ಹೇಮಾವತಿ ನಾಲೆಗೆ ಆಯತಪ್ಪಿ ಬಿದ್ದು ಮೃತಪಟ್ಟಿರುವ ದಾರುಣ ಘಟನೆ ಚನ್ನರಾಯಪಟ್ಟಣದಲ್ಲಿ ನಡೆದಿದೆ. ಬೆಸ್ಕಾಂ ನೌಕರನಾಗಿರುವ ಹೇಮಂತ್(24) ಮೃತ ಯುವಕ. ಹೇಮಂತ್ ನಿನ್ನೆ ಸಂಜೆ ಕಚೇರಿ ಪಕ್ಕದಲ್ಲೇ ಹಾದು ಹೋಗಿರುವ ಹೇಮಾವತಿ ನಾಲೆ ಸಮೀಪ ಬೈಕ್‌ನಲ್ಲಿ ಹೊರಟಿದ್ದರು. ಈ ವೇಳೆ ಬೈಕ್ ಸ್ಕಿಡ್ ಆಗಿ ಭಾರಿ ಪ್ರಮಾಣದಲ್ಲಿ ಹರಿಯುತ್ತಿದ್ದ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ.

## ಕೆಲಸದಾಕೆ ಬಂಧನ, 25 ಲಕ್ಷ ಮೌಲ್ಯದ ಚಿನ್ನ ವಶ

ಬೆಂಗಳೂರು,ಸೆ.24– ಕೆಲಸ ಮಾಡುತ್ತಿದ್ದ ಮನೆಯಲ್ಲೇ ಚಿನ್ನಾಭರಣ ಕಳವು ಮಾಡಿದ್ದ ಮನೆಕೆಲಸದಾಕೆಯನ್ನು ಮಡಿವಾಳ ಪೊಲೀಸರು ಬಂಧಿಸಿ 25 ಲಕ್ಷ ಮೌಲ್ಯದ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ತಮಿಳುನಾಡಿನ ವೆಲ್ಲಪುರಂ ಮೂಲದ ಮಡಿವಾಳದ ಮಾರುತಿನಗರದ ಪರಮೇಶ್ವರಿ(33) ಬಂಧಿತ ಆರೋಪಿಯಾಗಿದ್ದು, ಆಕೆಯಿಂದ 25 ಲಕ್ಷ ಮೌಲ್ಯದ 176 ಗ್ರಾಂ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ.

ಮಡಿವಾಳದ ಸೇಂಟ್ ಥಾಮಸ್ ಟೌನ್ ಶಾಂತರಾಜ್ ಅವರು ನೀಡಿದ ದೂರಿನಲ್ಲಿ ಅಕ್ಕನ ಮನೆಯಲ್ಲಿ ಸುಮಾರು ಆರು ವರ್ಷಗಳಿಂದ ಮನೆಕೆಲಸ ಮಾಡಿಕೊಂಡಿದ್ದ ಮಹಿಳೆಯೊಬ್ಬರು, 2025ರ ಜೂನ್ 1ರಿಂದ 2026ರ ಸೆಪ್ಟೆಂಬರ್ 18ರ ಅವಧಿಯಲ್ಲಿ ಹಂತ ಹಂತವಾಗಿ 170 ಗ್ರಾಂ ಚಿನ್ನಾಭರಣಗಳನ್ನು ಕಳವು ಮಾಡಿದ್ದಾರೆ ಎಂದು ತಿಳಿಸಿದ್ದರು.

ಈ ಸಂಬಂಧಿಸಿದಂತೆ ದಾಖಲಿಸಿದ ಪ್ರಕರಣದ ತನಿಖೆಯನ್ನು ವಿವಿಧ ಆಯಾಮಗಳಲ್ಲಿ ಕೈಗೊಂಡು ಖಚಿತ ಮಾಹಿತಿ ಆಧರಿಸಿ ಸೆ. 19ರಂದು ಹೊಸೂರು ಮುಖ್ಯರಸ್ತೆಯ ಮಡಿವಾಳ ಬಸ್ ನಿಲ್ದಾಣದ ಬಳಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ವಿಚಾರಣೆ ವೇಳೆ ಮನೆಯಲ್ಲಿದ್ದ ಚಿನ್ನಾಭರಣಗಳನ್ನು ಕಳವು ಮಾಡಿರುವುದಾಗಿ ಆಕೆ ಒಪ್ಪಿಕೊಂಡಿದ್ದಾಳೆ.

ಬಳಿಕ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ನಾಲ್ಕು ದಿನಗಳ ಕಾಲ ಪೊಲೀಸ್ ಅಭಿರಕ್ಷೆಗೆ ಪಡೆದು ಹೆಚ್ಚಿನ ವಿಚಾರಣೆ ನಡೆಸಲಾಗಿದೆ. ಈ ವೇಳೆ ಕಳವು ಮಾಡಿದ್ದ ಚಿನ್ನಾಭರಣಗಳನ್ನು ಮಡಿವಾಳ ಠಾಣಾ ವ್ಯಾಪ್ತಿಯ ಮಾರುತಿನಗರದಲ್ಲಿರುವ ಜ್ಯುವೆಲ್ಲರಿ ಅಂಗಡಿಯೊಂದರಲ್ಲಿ ಮಾರಾಟ ಮಾಡಿರುವುದಾಗಿ ಮಾಹಿತಿ ನೀಡಿದ್ದಾಳೆ.

ಆಕೆಯ ಮಾಹಿತಿ ಮೇರೆಗೆ ಸೆ. 21ರಂದು ಜ್ಯುವೆಲ್ಲರಿ ಅಂಗಡಿಯಿಂದ 170 ಗ್ರಾಂ ಚಿನ್ನಾಭರಣಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಮಡಿವಾಳ ಪೊಲೀಸ್ ಇನ್ಸ್‌ಪೆಕ್ಟರ್ ಸತೀಶ್ ಬಿ.ಎಸ್. ಮತ್ತವರ ಸಿಬ್ಬಂದಿ ಪ್ರಕರಣವನ್ನು ಭೇದಿಸುವಲ್ಲಿ ಯಶಸ್ವಿಯಾಗಿದೆ.

## ವಿಮಾನದಲ್ಲಿ ಬಂದು ಕಳ್ಳತನ: ಬೆಚ್ಚಿ ಬೀಳಿಸಿದ ಖದೀಮನ ಹಿನ್ನೆಲೆ

ಬೆಂಗಳೂರು, ಸೆ.24–ವಿಲ್ಸನ್ ಗಾರ್ಡನ್ ಪೊಲೀಸರು ಬಂಧಿಸಿರುವ ಕುಖ್ಯಾತ ಮನೆಗಳ್ಳ ತೆಲಂಗಾಣದ ರಂಗಾರೆಡ್ಡಿ ಜಿಲ್ಲೆಯ ನಾನವತ್ ವಿನೋದ್ ಕುಮಾರ್ ಅಲಿಯಾಸ್ ಮೊಹಮ್ಮದ್ ಬಶೀರ್(67) ಹಿನ್ನೆಲೆಯು ಬೆಚ್ಚಿ ಬೀಳಿಸುವಂತಿದೆ.

ವಿಮಾನದಲ್ಲಿ ಬಂದು ಬೆಂಗಳೂರಿನಲ್ಲಿ ಮನೆಗಳ್ಳತನ ಮಾಡಿ, ಮತ್ತೆ ವಿಮಾನದಲ್ಲೇ ವಾಪಸ್ ತೆರಳುತ್ತಿದ್ದ ಬಿ.ಟೆಕ್ ಪದವೀಧರ ನಾನವತ್ ವಿನೋದ್ ಕುಮಾರ್ ಮಧ್ಯಪ್ರದೇಶ, ಆಂಧ್ರಪ್ರದೇಶ ಹಾಗೂ ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳಲ್ಲಿ 30ಕ್ಕೂ ಹೆಚ್ಚು ಮನೆಗಳಲ್ಲಿ ಕಳ್ಳತನ ನಡೆಸಿ. ಕಳ್ಳತನದಿಂದ ಬಂದ ಹಣದಲ್ಲಿ ಐಷಾರಾಮಿ ಜೀವನ ನಡೆಸುತ್ತಿರುವುದು ತನಿಖೆಯಲ್ಲಿ ಪತ್ತೆಯಾಗಿದೆ.

**ಪದವಿ ಓದುವಾಗಲೇ ಕಳ್ಳತನ:**

ಬಿ.ಟೆಕ್ ವ್ಯಾಸಂಗ ಮಾಡುತ್ತಿದ್ದಾಗಲೇ ಕಳ್ಳತನ ಪ್ರಕರಣದಲ್ಲಿ ಸಿಕ್ಕಿಬಿದ್ದಿದ್ದ ಆರೋಪಿಯು ಸುಮಾರು ಒಂದು ವರ್ಷ ಜೈಲಿನಲ್ಲಿದ್ದು, ಬಿಡುಗಡೆಯಾದ ಬಳಿಕ ಸಲೂನ್‌ವೊಂದರಲ್ಲಿ ಕೆಲಸಕ್ಕೆ ಸೇರಿದ್ದನು.

ಸಲೂನ್‌ನಲ್ಲಿ ಕೆಲಸ ಮಾಡುತ್ತಿದ್ದ ಬಾಂಗ್ಲಾದೇಶದ ಯುವತಿಯ ಪರಿಚಯವಾಗಿ, ಬಳಿಕ ಆಕೆಯನ್ನು ಮದುವೆಯಾಗಿ ಆಕೆಯ ಜೊತೆಗೆ ಬಾಂಗ್ಲಾದೇಶಕ್ಕೆ ತೆರಳಿದ್ದ ವಿನೋದ್ ಕುಮಾರ್, ಸುಮಾರು 9 ವರ್ಷಗಳ ಕಾಲ ಅಲ್ಲಿಯೇ ವಾಸವಿದ್ದು, ಅಲ್ಲಿನ ಪೌರತ್ವವನ್ನೂ ಪಡೆದಿದ್ದನು.

**ನಕಲಿ ಪಾಸ್‌ಪೋರ್ಟ್ ಬಳಕೆ:**

ಬಳಿಕ ನಕಲಿ ಪಾಸ್‌ಪೋರ್ಟ್ ಪಡೆದು ಇಟಲಿ ಹಾಗೂ ಜರ್ಮನಿಗೂ ತೆರಳಿದ್ದ ಆರೋಪಿ, ಅಲ್ಲಿ ಅಡುಗೆ ಕೆಲಸ ಮಾಡಿಕೊಂಡಿದ್ದು, ಆ ಕೆಲಸದಿಂದ ತೃಪ್ತನಾಗದೆ ಮತ್ತೆ ಕಳ್ಳತನದ ಹಾದಿ ಹಿಡಿದಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಳೆದ ವರ್ಷ ನೇಪಾಳದ ಮೂಲಕ ಕಳ್ಳಮಾರ್ಗದಲ್ಲಿ ಭಾರತಕ್ಕೆ ವಾಪಸ್ ಬಂದಿದ್ದ ವಿನೋದ್ ಕುಮಾರ್, ಬಳಿಕ ತನ್ನ ಹಳೆಯ ಕಳ್ಳತನದ ವೃತ್ತಿಯನ್ನು ಪುನರಾರಂಭಿಸಿ ವಿಮಾನದಲ್ಲಿ ವಿವಿಧ ನಗರಗಳಿಗೆ ಕಳವು ಮಾಡುತ್ತಿದ್ದನು.

**ವಿಮಾನ ಪ್ರಯಾಣ:**

ಕಳ್ಳತನಕ್ಕಾಗಿ ವಿಮಾನದಲ್ಲಿ ಬೆಂಗಳೂರಿಗೆ ಬರುತ್ತಿದ್ದ ಆರೋಪಿಯು ಕೃತ್ಯ ಎಸಗಿದ ಬಳಿಕ ಮತ್ತೆ ವಿಮಾನದಲ್ಲೇ ಬೇರೆ ನಗರಕ್ಕೆ ತೆರಳುತ್ತಿದ್ದನು. ಬೆಂಗಳೂರಿನಲ್ಲಿ ಕಳ್ಳತನ ನಡೆಸಿದ ಬಳಿಕ ದೆಹಲಿಯಲ್ಲಿದ್ದ ತನ್ನ ಪತ್ನಿಗೆ ಹಣ ನೀಡಲು ತೆರಳುತ್ತಿದ್ದ ವೇಳೆ ವಿಮಾನ ನಿಲ್ದಾಣದಲ್ಲಿ ಪೊಲೀಸರು ಆತನನ್ನು ಬಂಧಿಸಿದ್ದಾರೆ.

ವಿಲ್ಸನ್ ಗಾರ್ಡನ್ ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದು, ಆತನಿಂದ ನಡೆದಿರುವ ಇತರೆ ಕಳ್ಳತನ ಪ್ರಕರಣಗಳ ಬಗ್ಗೆಯೂ ತನಿಖೆ ಮುಂದುವರಿಸಿದ್ದಾರೆ.

## ಮೈಸೂರು ದಸರಾ ಕನ್ನಡ ಪುಸ್ತಕಗಳ ರಿಯಾಯಿತಿ ಮಾರಾಟ ಮೇಳಕ್ಕೆ ಅರ್ಜಿ ಆಹ್ವಾನ

ಬೆಂಗಳೂರು, ಸೆ. 24– ಜಗತ್ತಿನ ಪ್ರಸಿದ್ಧ ಮೈಸೂರು ದಸರಾ ಉತ್ಸವ–2026ರಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮೈಸೂರು ದಸರಾ ಉತ್ಸವ ಸಮಿತಿ, ಮೈಸೂರು ಇವರ ಸಂಯುಕ್ತಾಶ್ರಯದಲ್ಲಿ ದಿನಾಂಕ: 11.10.2026ರಿಂದ 20.10.2026ರವರೆಗೆ "ಮೈಸೂರು ದಸರಾ ಕನ್ನಡ ಪುಸ್ತಕಗಳ ರಿಯಾಯಿತಿ ಮಾರಾಟ ಮೇಳ–2026"ನ್ನು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ, ಹಳೆ ಡಿ.ಸಿ. ಕಚೇರಿ ಎದುರು, ಮೈಸೂರು ಇಲ್ಲಿ ಏರ್ಪಡಿಸಲಾಗುವುದು. ಈ ಪುಸ್ತಕ ಮೇಳದಲ್ಲಿ ಕನ್ನಡ ಪ್ರಕಾಶಕರು / ಮಾರಾಟಗಾರರು ಭಾಗವಹಿಸಬಹುದಾಗಿದ್ದು, ಮಳಿಗೆಯೊಂದಕ್ಕೆ ರೂ.1000–00ಗಳ ಭದ್ರತಾ ಠೇವಣಿ ಡಿ.ಡಿ.ಯನ್ನು ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು –ಅವರ ಹೆಸರಿನಲ್ಲಿ ಡಿಡಿಗಳನ್ನು ಸಲ್ಲಿಸುವುದು.

ಮೇಳದಲ್ಲಿ ಭಾಗವಹಿಸಲು ಇಚ್ಛಿಸುವ ಪ್ರಕಾಶಕರು/ಮಾರಾಟಗಾರರು ನಿಗದಿತ ಅರ್ಜಿ ನಮೂನೆಯನ್ನು ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರಿನ ಕಚೇರಿ ಅಥವಾ ಆಯಾ ಜಿಲ್ಲೆಯಲ್ಲಿರುವ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಛೇರಿಗಳಲ್ಲಿ ಅಥವಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಅಂದರೆ https://kpp.karnataka.gov.inನಲ್ಲಿ ಉಚಿತವಾಗಿ ಪಡೆದುಕೊಳ್ಳಬಹುದಾಗಿದೆ. ಭರ್ತಿಮಾಡಿದ ಅರ್ಜಿಯನ್ನು ಡಿ.ಡಿ.ಯೊಂದಿಗೆ ದಿನಾಂಕ:05.10.2026 ರಂದು ಸಂಜೆ 5.00ರೊಳಗೆ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು ಅವರ ಹೆಸರಿಗೆ ನೊಂದಾಯಿತ ಅಂಚೆ ಅಥವಾ ಮುದ್ದಾಂ ಮೂಲಕ ಸಲ್ಲಿಸಲು ಕೋರಿದೆ. ನಿರ್ಮಿಸಲಾಗುವ ಮಳಿಗೆಗಳನ್ನು ಆದ್ಯತೆಯ ಮೇರೆಗೆ ಹಂಚಿಕೆ ಮಾಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ : ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–560 002 ದೂ:080–22484516 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

## 'ಶಾಮ್ರಾಕ್' ಮಾಲೀಕರ ಮಡಿಲಿಗೆ ಮಹಾರಾಜ ಕಪ್ ಸೇರುವ ನಿರೀಕ್ಷೆ

ಮೈಸೂರು, ಸೆಪ್ಟೆಂಬರ್ 24: ಎಮ್. ರವಿ ರವರ ಜಂಟಿ ಮಾಲೀಕತ್ವದ ಸತೀಶ್ ನರೆಡು ರವರಿಂದ ತರಬೇತಿ ಪಡೆದು ಹೆಸರಾಂತ ಮತ್ತು ನುರಿತ ಜಾಕಿ ಸೂರಜ್ ನರೇಡು ಸವಾರಿ ಮಾಡಲಿರುವ 'ಶಾಮ್ರಾಕ್'

ಕುದುರೆಯು ನಾಳೆ ಶುಕ್ರವಾರ ನಡೆಯಲಿರುವ ಪ್ರತಿಷ್ಠಿತ ರೇಸ್ ಮಹಾರಾಜ' ಕಪ್ 2026 (ಗ್ರೇ –2) ಗೆಲ್ಲುವ ನಿರೀಕ್ಷೆ ಇದೆ .

ಈ ಪ್ರತಿಷ್ಠಿತ ಕಪ್ ಗೆಲ್ಲುವ ಕುದುರೆಯು ತನ್ನ ಮಾಲೀಕರಿಗೆ 18 ಲಕ್ಷ ನಗದು ಹಣ ಮತ್ತು 75 ಸಾವಿರ ಬೆಲೆ ಬಾಳುವ ಟ್ರೋಫಿಯನ್ನು ದೂರಕಿಸಿಕೂಡಲಿದೆ.

ನಾಳೆ ಏಳು ಓಟಗಳನ್ನು ಏರ್ಪಡಿಸಿದ್ದು ಮೊದಲನೇ ಓಟವು ಮಧ್ಯಾಹ್ನ 2.00 ಗಂಟೆಗೆ ಪ್ರಾರಂಭವಾಗಲಿದೆ.

**1. ಜಯನಗರ ಪ್ಲೇಟ್ 1400 ಮೀ**

**ಬ್ರೋಕ್ ಸ್ಟೋನ್ 1 ಅಲ್ಲುರಿಂಗ್ ಬ್ಯೂಟಿ 2 ಮೇಗಾ ಸಕ್ಸಸ್ 3 (6–7–9)**

**2. ವಾಲರೂಸೂ ಪ್ಲೇಟ್ (ಡಿ – 2) 1200 ಮೀ**

**ಗಿಫ್ಟ್ ಆಫ್ ಸೈಲೆನ್ಸ್ 1 ಟ್ರೂ ಗೋಲ್ಡ್ 2 ಕಂಟ್ರೇಸ್ ವಿಶ್ 3 (8–1–4)**

**3. ಶ್ರೀ ಸಿಸಶಾಚಲಂ ಮೆಮೋರಿಯಲ್ ಟ್ರೋಫಿ 1200 ಮೀ**

**ಮಿಸ್ಟಿಕ್ ಚಾರ್ಮ್ 1 ಫಾಲ್ಕನ್ ಫ್ಯೂರಿ 2 ಸೈನೋಸುರ್ 3 (2–3–4)**

**4. ಅರಸ್ ಕಾರ್ ಟ್ರೋಫಿ 1200 ಮೀ**

**ಫ್ಲೈಟ್ ಆನ್ 1 ಸಿಕ್ ಯೋನ್ 2 ಎನ್ ಆರ್ ಐ ಏಸ್ 3 (9–10–5)**

**5. ಮಹಾರಾಜ' ಕಪ್ 2026 (ಗ್ರೇ –2) 1600 ಮೀ**

**ಶಾಮ್ರಾಕ್ 1 ಎಫಿಕೇಸಿ 2 ಪ್ರೊಕೊಫೀವ್ 3 (2–6–3)**

**6. ಅಲೆಕೋನ ಟ್ರೋಫಿ 1600 ಮೀ**

**ರೀಗಲ್ ಅರಿಸ್ಟೋಕ್ರೇಸಿ 1 ಡೈನಾಮಿಕ್ ಫೋರ್ಸ್ 2 ಸ್ಟಾರ್ ಕಾಮೆಟ್ 3 (1–2–5)**

**7. ವಾಲರೂಸೂ ಪ್ಲೇಟ್ (ಡಿ –1) 1200 ಮೀ**

**ಮಿಸ್ಟಿ ವಾರಿಯರ್ 1 ಸನ್ ವೇಲಗೂನ್ 2 ಸ್ಪಾರ್ಕ್ಲಿಂಗ್ ನೈಟ್ 3 (9–4–6)**

**ದಿನದ ಅತ್ಯುತ್ತಮ ಬೆಟ್: ಮಿಸ್ಟಿ ವಾರಿಯರ್**

**ಜಾಕ್ಪಾಟ್ ರೇಸ್ ಗಳು: 3 4 5 6 ಮತ್ತು 7**

**ಮಿನಿ ಜಾಕ್ಪಾಟ್ : 4 5 6 ಮತ್ತು 7**

**1ನೇ ಟ್ರಿಬಲ್: 2 3 ಮತ್ತು 4**

**2ನೇ ಟ್ರಿಬಲ್: 5 6 ಮತ್ತು 7**

ಬೆಂಗಳೂರು ಗುರುವಾರ 24 ಸೆಪ್ಟೆಂಬರ್ 2026 I ಸಂಪುಟ 44 I ಸಂಚಿಕೆ 283 ಪುಟ 8 I ಬೆಲೆ 3.00

Sanjevani Kannada Daily I Bangalore I Thursday I 24 September 2026 I Vol: 44 Issue 283 I Pages 8 I RNI No:36667/82 I Rs. 3.00

# ಸಂಜೆವಾಣಿ

1982

ಬೆಂಗಳೂರು - ಹುಬ್ಬಳ್ಳಿ - ಕಲಬುರಗಿ - ಬಳ್ಳಾರಿ - ಮೈಸೂರು - ಮಂಗಳೂರು - ರಾಯಚೂರು - ದಾವಣಗೆರೆ - ಶಿವಮೊಗ್ಗ

www.sanjevani.com contact @sanjevani.com PH: 080 22868882

Excel
Refrigeration & Bakery Equipment
Bommasandra, Bangalore

ರೋಟ್ರಿ ರ್‍ಯಾಕ್ ಓವೆನ್‌ಗಳು
ಸ್ಪಿರಲ್ ಮಿಕ್ಸರ್ಸ್
ಪ್ಲಾನೆಟರಿ ಮಿಕ್ಸರ್ಸ್
ಇಂಪೋರ್ಟೆಡ್ ಓವೆನ್‌ಗಳು.
ಕಿಚನ್ ಫ್ರೀಜರ್‌ಗಳು
ಜ್ಯೂಸ್ ಮೆಷಿನ್‌ಗಳು
ವರ್ಟಿಕಲ್ ಕೇಕ್ ಡಿಸ್‌ಪ್ಲೇ.
Mob : 9902030007/9900021097

# ರಾಜ್ಯಕ್ಕೆ ಕಾವೇರಿ ಸಂಕಷ್ಟ

## ಪ್ರತಿನಿತ್ಯ 15 ದಿನಗಳ ಕಾಲ 4 ಸಾವಿರ ಕ್ಯುಸೆಕ್ ನೀರು ಹರಿಸಲು ಸಿಡಬ್ಲ್ಯುಆರ್‌ಸಿ ಸೂಚನೆ

The Best Jewellery
•GOLD •SILVER •DIAMOND
BIS 916 HALLMARKED GOLD JEWELLERY

ಚಿನ್ನ ಮತ್ತು ಬೆಳ್ಳಿ ಖರೀದಿಸಲು ಪ್ರತಿಷ್ಠಿತ ಆಭರಣ ಶೋರೂಮ್.
T & C Apply
ನಿಮ್ಮ ಹಳೆಯ ಚಿನ್ನವನ್ನು ನಾವು ಆನ್‌ಲೈನ್ ದರದಲ್ಲಿ ಖರೀದಿಸುತ್ತೇವೆ.
Making Charges Starting from 3%
Benefits
*Pay flexible amounts for 10 months and purchase on 11th month.*50% off on making charges on all gold ornaments.
*This offer will be valid only on the total amount accumulated for 10 months.
#6, 1/1, 11th Main Road Gokula 1st Stage, Bombay Dyeing Road, Opp Comfort Inn Hotel, Yeshwanthpur, Bengaluru- 560 054. Call: 080-41146916 / +91-9686062916

**ನವದೆಹಲಿ, ಸೆ. 24-** ತಮಿಳುನಾಡಿಗೆ ಪ್ರತಿನಿತ್ಯ 15 ದಿನಗಳ ಕಾಲ 4 ಸಾವಿರ ಕ್ಯುಸೆಕ್ ಕಾವೇರಿ ನೀರು ಹರಿಸುವಂತೆ ಕಾವೇರಿ ನೀರು ನಿರ್ವಹಣಾ ಸಮಿತಿ ಸೂಚನೆ ನೀಡುವ ಮೂಲಕ ಕರ್ನಾಟಕಕ್ಕೆ ದೊಡ್ಡ ಆಘಾತ ನೀಡಿದೆ.

ಕಾವೇರಿ ನೀರು ಹಂಚಿಕೆ ಕುರಿತಂತೆ ದೆಹಲಿಯಲ್ಲಿಂದು ಮಹತ್ವದ ಸಿಡಬ್ಲ್ಯುಆರ್‌ಸಿ ಸಭೆ ನಡೆಯಿತು. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಕಚೇರಿಯಲ್ಲಿ ನಡೆದ ಅಧ್ಯಕ್ಷ ವಿನೀತ್ ಗುಪ್ತಾ ನೇತೃತ್ವದಲ್ಲಿ ಸಭೆ ನಡೆಯಿತು.

ಕರ್ನಾಟಕದಿಂದ ಕಾವೇರಿ ನಿಗಮದ ಎಂ.ಡಿ. ಮಹೇಶ್ ಹಾಗೂ ತಮಿಳುನಾಡಿನ ಜಲಸಂಪನ್ಮೂಲ ಅಧಿಕಾರಿಗಳು ಭಾಗವಹಿಸಿದ್ದರು. ಕರ್ನಾಟಕದಲ್ಲಿ ಭೀಕರ ಬರಗಾಲ ಪರಿಸ್ಥಿತಿ ಎದುರಾಗಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ತಮಿಳುನಾಡಿಗೆ ನೀರು ಬೀಡಲು ಸಾಧ್ಯವಿಲ್ಲ ಎಂದು ಕರ್ನಾಟಕ ವಾದ ಮಂಡಿಸಿತು.

ಮತ್ತೊಂದೆಡೆ ತನ್ನ ಪಾಲಿನ ನೀರು ಹರಿಸಬೇಕೆಂದು ತಮಿಳುನಾಡು



ಅಧಿಕಾರಿಗಳು ಪಟ್ಟು ಹಿಡಿದರು. ಆದರೆ ನೀರು ಹರಿಸುವಂತೆ ಸಿಡಬ್ಲ್ಯು ಆರ್‌ಸಿ ಕರ್ನಾಟಕಕ್ಕೆ ಆದೇಶ ನೀಡಿತು.

**ಸುಪ್ರೀಂನಲ್ಲಿ ವಿಚಾರಣೆ ಮುಂದೂಡಿಕೆ**

ಈ ಮಧ್ಯೆ ತಮಿಳುನಾಡು ಕಾವೇರಿ ನೀರು ಹರಿಸುವಂತೆ ಕಾವೇರಿ ನದಿನೀರು ನಿರ್ವಹಣಾ ಪ್ರಾಧಿಕಾರ ನೀಡಿರುವ ಶಿಫಾರಸ್ಸನ್ನು ಪ್ರಶ್ನಿಸಿ, ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಇಂದು ನಡೆಯಿತು.

ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠದ ಮುಂದೆ ನಡೆದ ವಿಚಾರಣೆ ವೇಳೆ ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ವಿಚಾರಣೆಯನ್ನು ಅ. 12ಕ್ಕೆ ಮುಂದೂಡಿತು.

ಕರ್ನಾಟಕದ ಪರ ಹಿರಿಯ ವಕೀಲ ಶ್ಯಾಮ್ ದಿವಾನ್, ರಾಜ್ಯದಲ್ಲಿ ಬರ ಪರಿಸ್ಥಿತಿ ಎದುರಾಗಿದ್ದು, ಸಿಡಬ್ಲ್ಯುಎಂಎ ನಿರ್ದೇಶನದಂತೆ ನೀರು ಬಿಡುಗಡೆ ಮಾಡುತ್ತಿದ್ದರೂ ರಾಜ್ಯಕ್ಕೆ ತೀವ್ರ ಸಂಕಷ್ಟ ಎದುರಾಗಿದೆ ಎಂದು ವಾದಿಸಿದರು.

- » **ಮುಂದಿನ ವಿಚಾರಣೆ: ಅಕ್ಟೋಬರ್ 12**
- » **ಕರ್ನಾಟಕದ ವಾದ: ರಾಜ್ಯದಲ್ಲಿ ಬರ ಪರಿಸ್ಥಿತಿ; : ಲ್ಟ ಆದೇಶ ಪಾಲನೆ**
- » **ತಮಿಳುನಾಡಿನ ವಾದ: ನೀರು ಬಿಡುಗಡೆ ಕೊರತೆಯಿಂದ ಬೆಳೆ ಹಾನಿ**
- » **ತಮಿಳುನಾಡಿನ ಲೆಕ್ಕ: ಸುಮಾರು 20 ಟಿಎಂಸಿ ಕೊರತೆ**
- » **ಕರ್ನಾಟಕದ ಲೆಕ್ಕ: ಸುಮಾರು 16 ಟಿಎಂಸಿ ಕೊರತೆ ಎಂದು ತಮಿಳುನಾಡು ಉಲ್ಲೇಖಿಸಿದ ವಾದ**
- » **ಬಿಳಿಗುಂಡ್ಲುವಿನಲ್ಲಿ 6,000 ಕ್ಯೂಸೆಕ್ ನೀರು ಹರಿಸುವಂತೆ ಸೆಪ್ಟೆಂಬರ್‌ನಲ್ಲಿ ಸೂಚನೆ**

ಕರ್ನಾಟಕದ ಪರ ವಾದ ಮಂಡಿಸಿದ ಶ್ಯಾಮ್ ದಿವಾನ್, ಜಲಾಶಯಗಳಲ್ಲಿನ ನೀರಿನ ಲಭ್ಯತೆ, ಮಳೆ ಕೊರತೆ

### 4 ಸಾವಿರ ಕ್ಯೂಸೆಕ್ ನೀರು ಹರಿಸಲು ಸೂಚನೆ

ಕಾವೇರಿ ನೀರು ಹಂಚಿಕೆ ವಿಚಾರವಾಗಿ ದೆಹಲಿಯ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಕಚೇರಿಯಲ್ಲಿ ಅಧ್ಯಕ್ಷ ವಿನೀತ್ ಗುಪ್ತಾ ನೇತೃತ್ವದಲ್ಲಿ ಸಭೆ ನಡೆಸಲಾಯಿತು. ಕರ್ನಾಟಕದಿಂದ ಕಾವೇರಿ ನೀರಾವರಿ ನಿಗಮದ ಎಂಡಿ ಮಹೇಶ್ ಹಾಗೂ ತಮಿಳುನಾಡು ಅಧಿಕಾರಿಗಳು ಭಾಗಿಯಾಗಿದ್ದರು.

ಸಭೆಯಲ್ಲಿ ಮುಂದಿನ 15 ದಿನಗಳ ಕಾಲ ಪ್ರತಿನಿತ್ಯ 4 ಸಾವಿರ ಕ್ಯೂಸೆಕ್ ನೀರು ಹರಿಸಲು ಕರ್ನಾಟಕಕ್ಕೆ ಸಿಡಬ್ಲ್ಯೂಆರ್‌ಸಿ ಸೂಚನೆ ನೀಡಿದೆ.

ಹಾಗೂ ರಾಜ್ಯದ ಪರಿಸ್ಥಿತಿಯನ್ನು ಅಫಿಡವಿಟ್ ಪರಿಗಣಿಸಿದೆ. ಪ್ರಾಧಿಕಾರದ ನಿರ್ದೇಶನಗಳನ್ನು ಪಾಲಿಸುತ್ತಿದ್ದೇವೆ. ಸಂಕಷ್ಟದ ನಡುವೆಯೂ ಅಗತ್ಯ ಪ್ರಮಾಣದಲ್ಲಿ ನೀರು ಹರಿಸಲು ರಾಜ್ಯ ಪ್ರಯತ್ನಿಸುತ್ತಿದೆ ಎಂದು ತಿಳಿಸಿದರು.

ಮುಂಗಾರು ಹಿಂತಿರುಗುತ್ತಿರುವುದರಿಂದ ಕರ್ನಾಟಕಕ್ಕೆ ಮುಂದಿನ ದಿನಗಳಲ್ಲಿ ಮಳೆ ನಿರೀಕ್ಷೆ ಕಡಿಮೆ. ಮತ್ತೊಂದೆಡೆ ತಮಿಳುನಾಡಿಗೆ ಈಶಾನ್ಯ ಮುಂಗಾರಿನಿಂದ ಮಳೆಯ ಲಾಭ ದೊರೆಯುವ ಸಾಧ್ಯತೆಯಿದೆ ಎಂದು ಅವರು ನ್ಯಾಯಾಲಯದ ಗಮನಕ್ಕೆ ತಂದರು.

**ತಮಿಳುನಾಡಿನ 20 ಟಿಎಂಸಿ ಕೊರತೆ ವಾದ**

ತಮಿಳುನಾಡಿನ ಪರ ಹಿರಿಯ ವಕೀಲ ಸಿ.ಎಸ್. ವೈದ್ಯನಾಥನ್, ಕರ್ನಾಟಕದಿಂದ ನಿರೀಕ್ಷಿತ ಪ್ರಮಾಣದಲ್ಲಿ ನೀರು ದೊರೆ–ಯದ ಕಾರಣ ರಾಜ್ಯಕ್ಕೆ ಸುಮಾರು 20 ಟಿಎಂಸಿ ನೀರಿನ ಕೊರತೆ ಉಂಟಾಗಿದೆ ಎಂದು ವಾದಿಸಿದರು. ಕರ್ನಾಟಕದ ಲೆಕ್ಕಾಚಾರದ ಪ್ರಕಾರ ಈ ಕೊರತೆ ಸುಮಾರು 16 ಟಿಎಂಸಿ ಇದೆ ಎಂದು ಅವರು ತಿಳಿಸಿದರು.

ಪುಟ 7

## ಜ್ಞಾನೇಶ್ ರಾಜೀನಾಮೆಗೆ ಡಿಕೆಶಿ ಆಗ್ರಹ

**ಬೆಂಗಳೂರು, ಸೆ.24-** ಕೇಂದ್ರ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಕೂಡಲೇ ರಾಜೀನಾಮೆ ನೀಡಬೇಕು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆಗ್ರಹಿಸಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಸ್ತುತ ನಡೆಯುತ್ತಿರುವ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ರದ್ದುಪಡಿಸಿ, ಹೊಸದಾಗಿ ಮತದಾರರ ಪಟ್ಟಿ ಪರಿಷ್ಕರಣೆ ನಡೆಸಬೇಕೆಂದು ಒತ್ತಾಯಿಸಿದ್ದಾರೆ.

**ಮತದಾನದ ಹಕ್ಕು ಬದುಕುವ ಹಕ್ಕು :**

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ದೇಶದ ಜನರ ಮತದಾನದ ಹಕ್ಕನ್ನು ರಕ್ಷಿಸಲು ಧ್ವನಿಯೆತ್ತಿದ್ದಾರೆ ಎಂದ ಸಿಎಂ, ಮತದಾನದ ಹಕ್ಕು ಎಂದರೆ ಅದು ಬದುಕುವ ಹಕ್ಕು. ಸಾಮಾನ್ಯ ನಾಗರಿಕರ ಮತದಾನದ ಹಕ್ಕನ್ನು ರಾಜಕೀಯ ದುರುದ್ದೇಶಕ್ಕಾಗಿ ಬಳಸಿಕೊಳ್ಳಲು ಯತ್ನಿಸಲಾಗುತ್ತಿದೆ ಎಂದು ಆರೋಪಿಸಿದರು.

**ಏಕಪಕ್ಷೀಯ ನಿರ್ಧಾರ ಸರಿ ಇಲ್ಲ :**

ಚುನಾವಣಾ ಆಯೋಗದ ಸದಸ್ಯರ ನಡುವಿನ ಭಿನ್ನಾಭಿಪ್ರಾಯಗಳ ಬಗ್ಗೆ ಪ್ರಸ್ತಾಪಿಸಿದ ಅವರು, ಬಹುತೇಕ ಸದಸ್ಯರು ಒಪ್ಪದಿದ್ದಾಗ ಏಕಪಕ್ಷೀಯವಾಗಿ ನಿರ್ಧಾರ ಹೇರುವುದು ಸರಿಯಲ್ಲ. ನೈತಿಕ ಹೊಣೆ ಹೊತ್ತು ಮುಖ್ಯ ಚುನಾವಣಾ ಆಯುಕ್ತರು ಸ್ವಯಂಪ್ರೇರಿತರಾಗಿ ರಾಜೀನಾಮೆ ನೀಡುವುದು ಸೂಕ್ತ ಎಂದರು.

ಫಾರ್ಮ್ 6, 7 ಮತ್ತು 8 ರ ಬಳಕೆ ಹಾಗೂ ಪ್ರಸ್ತುತ ಪರಿಷ್ಕರಣೆ ನಡೆಯುತ್ತಿರುವ ರೀತಿಯ ಬಗ್ಗೆ ಪ್ರಶ್ನಿಸಿದ ಡಿ.ಕೆ. ಶಿವಕುಮಾರ್, ಇದು ಅನಕ್ಷರಸ್ಥರು ಮತ್ತು ಸಮಾಜದ ದುರ್ಬಲ ವರ್ಗದವರ ಮತದಾನದ

ಪುಟ 7

## ಅಡುಗೆ ಎಣ್ಣೆ ಮೇಲಿನ ಆಮದು ಸುಂಕ ಕಡಿತ

**ನವದೆಹಲಿ, ಸೆ.24-** ಹಬ್ಬದ ಋತು ಆರಂಭಕ್ಕೂ ಮುನ್ನ ಕೇಂದ್ರ ಸರ್ಕಾರ ಅಡುಗೆ ಎಣ್ಣೆಗಳ ಮೇಲಿನ ಮೂಲ ಕಸ್ಟಮ್ಸ್ ಸುಂಕವನ್ನು ಗಣನೀಯವಾಗಿ ಕಡಿತಗೊಳಿಸಿದೆ. ತಾಳೆ ಎಣ್ಣೆ, ಸೋಯಾಬೀನ್ ಎಣ್ಣೆ ಹಾಗೂ ಸೂರ್ಯಕಾಂತಿ ಎಣ್ಣೆ ಸೇರಿದಂತೆ ಪ್ರಮುಖ ಖಾದ್ಯ ತೈಲಗಳ ಆಮದು ಸುಂಕ ಪರಿಷ್ಕರಣೆ ಸೆ.24ರಿಂದಲೇ ಜಾರಿಗೆ ಬಂದಿದೆ.

ಕೇಂದ್ರ ಸರ್ಕಾರದ ಅಧಿಸೂಚನೆಯ ಪ್ರಕಾರ, ಕಚ್ಚಾ ಸೂರ್ಯಕಾಂತಿ ಎಣ್ಣೆಯ ಮೇಲಿನ ಮೂಲ ಕಸ್ಟಮ್ಸ್ ಸುಂಕವನ್ನು ಶೇ.10ರಿಂದ ಶೂನ್ಯಕ್ಕೆ ಇಳಿಸಲಾಗಿದೆ. ಸಂಸ್ಕರಿತ ಸೂರ್ಯಕಾಂತಿ ಎಣ್ಣೆಯ ಮೇಲಿನ ಸುಂಕವನ್ನು ಶೇ.32.5ರಿಂದ ಶೇ.22.5ಕ್ಕೆ ಕಡಿತ ಮಾಡಲಾಗಿದೆ.



ಅದೇ ರೀತಿ, ಕಚ್ಚಾ ತಾಳೆ ಎಣ್ಣೆ ಹಾಗೂ ಕಚ್ಚಾ ಸೋಯಾಬೀನ್ ಎಣ್ಣೆಯ ಮೇಲಿನ ಮೂಲ ಕಸ್ಟಮ್ಸ್ ಸುಂಕವನ್ನು ಶೇ.10ರಿಂದ ಶೇ.5ಕ್ಕೆ ಇಳಿಸಲಾಗಿದೆ. ಸಂಸ್ಕರಿತ ತಾಳೆ ಎಣ್ಣೆ ಮತ್ತು ಸಂಸ್ಕರಿತ ಸೋಯಾಬೀನ್ ಎಣ್ಣೆಯ ಮೇಲಿನ ಆಮದು ಸುಂಕವನ್ನು ಶೇ.32.5ರಿಂದ ಶೇ.27.5ಕ್ಕೆ ಇಳಿಸಲಾಗಿದೆ.

ಪುಟ 7

## ಚಲಿಸುತ್ತಿದ್ದ ಬಸ್‌ಗೆ ಬೆಂಕಿ: 9 ಮಂದಿ ಸಜೀವ ದಹನ

**ಗ್ರೇಟರ್ ನೋಯ್ಡಾ, ಸೆ.24-** ನೋಯ್ಡಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ಯಮುನಾ ಎಕ್ಸ್‌ಪ್ರೆಸ್‌ವೇಯಲ್ಲಿ ಇಂದು ಮುಂಜಾನೆ ಚಲಿಸುತ್ತಿದ್ದ ಸ್ಲೀಪರ್ ಪ್ರಯಾಣಿಕರ ಬಸ್‌ಗೆ ಏಕಾಏಕಿ ಬೆಂಕಿ ಹೊತ್ತಿಕೊಂಡು ಸಂಭವಿಸಿದ ಭೀಕರ ದುರಂತದಲ್ಲಿ ಒಂಬತ್ತು ಮಂದಿ ಮೃತಪಟ್ಟಿದ್ದಾರೆ.

ಘಟನೆಯಲ್ಲಿ ಹಲವರು ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಮೃತರಲ್ಲಿ ಎಂಟು ಪುರುಷರು ಹಾಗೂ ಒಬ್ಬ ಮಹಿಳೆ ಸೇರಿದ್ದಾರೆ. ಬಸ್‌ನಲ್ಲಿ ಸುಮಾರು 30ರಿಂದ 40 ಮಂದಿ ಪ್ರಯಾಣಿಕರಿದ್ದರು ಎಂದು ಪ್ರಾಥಮಿಕ ಮಾಹಿತಿ ತಿಳಿಸಿದೆ. ಬೆಳಗಿನ



ಜಾವ ಬಹುತೇಕ ಪ್ರಯಾಣಿಕರು ನಿದ್ರೆಯಲ್ಲಿದ್ದ ಸಂದರ್ಭದಲ್ಲಿ ಬೆಂಕಿ ಕಾಣಿಸಿಕೊಂಡಿದ್ದರಿಂದ, ದುರಂತದ ತೀವ್ರತೆ ಮತ್ತಷ್ಟು ಹೆಚ್ಚಾಯಿತು.

ಬಸ್ ಚಲಿಸುತ್ತಿದ್ದಾಗಲೇ ಬೆಂಕಿ ಕಾಣಿಸಿಕೊಂಡಿದೆ. ಆರಂಭದಲ್ಲಿ ಬೆಂಕಿ ಕಾಣಿಸಿಕೊಂಡಿರುವುದನ್ನು ಗಮನಿಸಿದ ಪ್ರಯಾಣಿಕರು ಉಳಿದವರನ್ನು ಎಚ್ಚರಿಸಲು ಮುಂದಾದರು. ಆದರೆ ಕೆಲವೇ ಕ್ಷಣಗಳಲ್ಲಿ ದಟ್ಟ ಹೊಗೆ ಬಸ್‌ನೊಳಗೆ ವ್ಯಾಪಿಸಿತು.

ಹೊಗೆ ಆವರಿಸಿದ್ದರಿಂದ ಪ್ರಯಾಣಿಕರಿಗೆ ಹೊರಗಿನ ಪರಿಸ್ಥಿತಿ ಸ್ಪಷ್ಟವಾಗಿ ಕಾಣುತ್ತಿರಲಿಲ್ಲ. ಉಸಿರಾಟಕ್ಕೂ ತೊಂದರೆಯಾಯಿತು. ಜೀವ ಉಳಿಸಿಕೊಳ್ಳಲು ಪ್ರಯಾಣಿಕರು ಬಸ್‌ನಿಂದ ಹೊರಬರಲು ಬಾಗಿಲಿನತ್ತ ಧಾವಿಸಿದರು. ಈ ವೇಳೆ ಗೊಂದಲ ಹಾಗೂ ನೂಕುನುಗ್ಗಲು ಉಂಟಾಯಿತು.

**ನೋಯ್ಡಾದಲ್ಲಿ ಘಟನೆ**

ಬಸ್‌ನಲ್ಲಿದ್ದ ಎಲ್ಲರೂ ಏಕಕಾಲದಲ್ಲಿ ಹೊರಬರಲು ಪ್ರಯತ್ನಿಸಿದ್ದರಿಂದ ಪರಿಸ್ಥಿತಿ ಮತ್ತಷ್ಟು ಗಂಭೀರವಾಯಿತು. ಕೆಲವರು ಬಸ್‌ನಿಂದ ಹೊರಬರುವಲ್ಲಿ ಯಶಸ್ವಿಯಾದರೆ, ಇನ್ನು ಕೆಲವರು ಒಳಗೆ ಸಿಲುಕಿ–

ಪುಟ 7

## ರಾಜ್ಯದಲ್ಲಿರುವುದು ರಿಯಲ್ ಎಸ್ಟೇಟ್ ಸರ್ಕಾರ: ಸುನೀಲ್ ಟೀಕೆ

**ಬೆಂಗಳೂರು, ಸೆ. 24-** ರಾಜ್ಯದಲ್ಲಿರುವುದು ರೈತಪರ ಸರ್ಕಾರವಲ್ಲ, ರಿಯಲ್ ಎಸ್ಟೇಟ್ ಸರ್ಕಾರ ಎಂದು ಬಿಜೆಪಿ ಸದಸ್ಯ ಸುನಿಲ್‌ಕುಮಾರ್ ವಿಧಾನಸಭೆಯಲ್ಲಿಂದು ಹೇಳಿದರು.



ವಿಧಾನಸಭೆ ಅಧಿವೇಶನದಲ್ಲಿ ಮಾತನಾಡುತ್ತಿರುವ ಬಿಜೆಪಿ ಶಾಸಕ ಸುನೀಲ್ ಕುಮಾರ್.

ರಾಜ್ಯದ ಬರ ಪರಿಸ್ಥಿತಿಯ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಈ ಸರ್ಕಾರದ ಆದ್ಯತೆ ಅನ್ನದಾತ ಅಲ್ಲ, ರಿಯಲ್ ಎಸ್ಟೇಟ್. ಈ ಸರ್ಕಾರ ಬಂದಾಗಿನಿಂದ ವ್ಯಾಪಾರ, ವ್ಯವಹಾರದಲ್ಲೇ ಮುಳುಗಿದೆ. ರೈತರು ಗುಳೆ ಹೋಗಿದ್ದಾರೆ. ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆ ಬಗ್ಗೆ ಗಮನವೇ ಕೊಟ್ಟಿಲ್ಲ ಎಂದು ದೂರಿದರು.

ರಾಜ್ಯದಲ್ಲಿ ಆರ್ಥಿಕ ಪರಿಸ್ಥಿತಿ ಸಂಪೂರ್ಣ ಕೆಟ್ಟಿದೆ. ಇದೊಂದು ಝೀರೋ ಬ್ಯಾಲೆನ್ಸ್ ಸರ್ಕಾರ. ಮುಂದಿನ ದಿನಗಳಲ್ಲಿ ಈ ಸರ್ಕಾರವನ್ನು ಜನ ಮನೆಗೆ ಕಳುಹಿಸುತ್ತಾರೆ ಎಂದು ಹೇಳಿದರು.

ದೇಶದಲ್ಲೇ ಅದರಲ್ಲೂ ರಾಜ್ಯದಲ್ಲಿ ಎಲ್‌ನಿನೋದಿಂದ ಮುಂಗಾರು ಮಳೆ ಕಡಿಮೆಯಾಗಿ ಬರ ಪರಿಸ್ಥಿತಿ ಸೃಷ್ಟಿಯಾಗಬಹುದು ಎಂದು ಹವಾಮಾನ ತಜ್ಞರು ಏಪ್ರಿಲ್‌ನಲ್ಲೇ ಮುನ್ನೆಚ್ಚರಿಕೆ ಕೊಟ್ಟಿದ್ದರು. ಆದರೆ ರಾಜ್ಯ ಸರ್ಕಾರ ಅಧಿಕಾರ ಹಸ್ತಾಂತರ, ನೂತನ ಸಿಎಂ ಪ್ರಮಾಣ ವಚನ, ಸಚಿವ ಸಂಪುಟ ರಚನೆಯಲ್ಲೇ ಮೂರು ತಿಂಗಳು ಕಳೆದು ಬಿಟ್ಟಿತು. ಬರ ಪರಿಸ್ಥಿತಿ ಎದುರಿಸಲು

ಪುಟ 7

## ತ.ನಾಡಿಗೆ ನೀರು ಬಿಡುವುದು ಕಷ್ಟ: ಸಿಎಂ

**ಚಿತ್ರದುರ್ಗ, ಸೆ. 24-** ಕಾವೇರಿ ನದಿಯಲ್ಲಿ ಒಳ ಹರಿವು ಕಡಿಮೆ ಆಗಿರುವುದರಿಂದ ತಮಿಳುನಾಡಿಗೆ ನೀರು ಬಿಡುವುದು ಕಷ್ಟ. ಈ ಬಗ್ಗೆ ನಾವು ಅಪೀಲ್ ಹಾಕುತ್ತಿದ್ದೇವೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಜಿಲ್ಲೆಯ ಸಿರಿಗೆರೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಬಹುತೇಕ ಕಡೆಗಳಲ್ಲಿ ಮಳೆ ಇಲ್ಲ. ಇದರಿಂದ ನೀರಿನ ಕೊರತೆ ಹೆಚ್ಚಾಗಿದೆ. ನೀರು ಇದ್ದರೆ ಬಿಡುತ್ತೇವೆ. ಇಲ್ಲದಿದ್ದರೆ ಏನು ಮಾಡುವುದು ಎಂದು ಪ್ರಶ್ನಿಸಿದ ಅವರು, ಇಂದು ಸಂಜೆ ಕಾವೇರಿ ವಿಚಾರವಾಗಿ ಚರ್ಚೆ ಮಾಡಲಾಗುವುದು ಎಂದರು.

ಪುಟ 7

ಚಿರಸ್ಮರಣೆ



ಶ್ರೀ ಗವಿರಂಗಪ್ಪ (ರಂಗಪ್ಪ)
ಬೆಂಗಳೂರು ಡೈರಿ
ಜನನ : 2-4-1942 ನಿಧನ: 24-09-2011
15ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಗಿರಿಯಮ್ಮ
ನಿಧನ: 04-11-2012
14ನೇ ವರ್ಷದ ಪುಣ್ಯಸ್ಮರಣೆ

ನಿಮ್ಮ ಆದರ್ಶವೇ ನಮಗೆ ದಾರಿ ದೀಪವಾಗಿದೆ.
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ನಾವು ನಡೆಯುತ್ತಿದ್ದೇವೆ.
ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇನೆ.

ಇಂತಿ ದುಃಖತಪ್ತರು:
ಬಿ.ಆರ್.ರಾಮು (ರಂಗ ರಾಮೇಗೌಡ), ಪದ್ಮನಾಭನಗರ
ಮಾಜಿ ನಿರ್ದೇಶಕರು - ಬಿ.ಎಂ.ಟಿ.ಸಿ., ಕರ್ನಾಟಕ ಸರ್ಕಾರ
ಅಧ್ಯಕ್ಷರು - ಶ್ರೀ ಲಕ್ಷ್ಮೀ ವೆಂಕಟೇಶ್ವರ ದೇವಸ್ಥಾನ, ತ್ಯಾಗರಾಜನಗರ, ಬೆಂಗಳೂರು-560 028.
ಹಾಗೂ ಕುಟುಂಬ ವರ್ಗ

## ನಂದಿನಿ ಹಾಲು ದರ ಏರಿಕೆ ನಿಶ್ಚಿತ

**ಬೆಂಗಳೂರು, ಸೆ.24 -** ರಾಜ್ಯದ 16 ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಬೇಡಿಕೆಗೆ ಮಣಿದಿರುವ ರಾಜ್ಯ ಸರ್ಕಾರ ಹಾಲಿನ ದರವನ್ನು ಲೀಟರ್‌ಗೆ 4 ರಿಂದ 5 ರೂಪಾಯಿ ಹೆಚ್ಚಿಸಲು ಸಾಧ್ಯತೆ ಇದ್ದು, ನಾಳಿನ ಕರ್ನಾಟಕ ಹಾಲು ಮಹಾಮಂಡಳಿ ಸಭೆಯ ನಂತರ ದರ ಹೆಚ್ಚಳದ ಅಧಿಕೃತ ಆದೇಶ ಹೊರಬೀಳುವ ನಿರೀಕ್ಷೆ ಇದೆ.

ಹಾಲಿನ ದರ ಪರಿಷ್ಕರಣೆ ಸಂಬಂಧ ಅಧಿಕೃತವಾಗಿ ಪ್ರಸ್ತಾವನೆ ಸಲ್ಲಿಸುವಂತೆ ಮುಖ್ಯಮಂತ್ರಿ ರಾಜ್ಯ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಕ್ಕೆ



ಸೂಚಿಸಿದ್ದಾರೆನ್ನಲಾಗಿದೆ, ಇದರ ಹಿನ್ನೆಲೆಯಲ್ಲಿ ನಾಳಿನ ಕರ್ನಾಟಕ ಹಾಲು ಮಹಾಮಂಡಳಿ ಸಭೆಯಲ್ಲಿ ದರ ಹೆಚ್ಚಳದ ರೂಪುರೇಷೆ ಕುರಿತು ಚರ್ಚೆಯಾಗಲಿದ್ದು, ಸಭೆಯಲ್ಲಿ ನಿರ್ಣಯ ಕೈಗೊಂಡ ಬಳಿಕ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸಲಿದ್ದು, ಕೆಎಂಎಫ್‌ನ ಪ್ರಸ್ತಾವನೆಗೆ ಸರ್ಕಾರ ಅನುಮೋದನೆ ನೀಡಿದ ನಂತರವೇ ಹೊಸ ದರ ಜಾರಿಗೆ ಬರುವ ದಿನಾಂಕ ಹಾಗೂ ಪರಿಷ್ಕೃತ ದರದ ಕುರಿತು ಅಧಿಕೃತ ಆದೇಶ ಹೊರಬೀಳಲಿದೆ.

ಹಾಲಿನ ಮಾರಾಟ ದರವನ್ನು ಲೀಟರ್‌ಗೆ 8 ರಿಂದ 10 ರೂ. ಮತ್ತು ಹೈನುಗಾರರಿಗೆ ನೀಡುವ ಪ್ರೋತ್ಸಾಹಧನವನ್ನು 8 ರೂ.ಗೆ ಹೆಚ್ಚಳ ಮಾಡುವಂತೆ ಒತ್ತಾಯಿಸಿ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಪ್ರತಿನಿಧಿಗಳು ರೈತರೊಂದಿಗೆ ಪ್ರತಿಭಟನೆ ನಡೆಸಿ ಬಳಿಕ ಸಿಎಂ ಡಿಕೆ ಶಿವಕುಮಾರ್‌ಗೂ ಮನವಿ ಮಾಡಿದ್ದರು.

ಪುಟ 7

## ರಾಜ್ಯಕ್ಕೆ ಬರ ಪರಿಹಾರ ನೀಡುವುದು ಮೋದಿ ಕರ್ತವ್ಯ: ಸಿಎಂ

**ಬೆಂಗಳೂರು, ಸೆ. 24-** "ಕರ್ನಾಟಕದಲ್ಲಿ 200ಕ್ಕೂ ಹೆಚ್ಚು ತಾಲ್ಲೂಕುಗಳು ಬರಕ್ಕೆ ತತ್ತರಿಸಿದ್ದು, ರೈತರ ಬೆಳೆಗಳು ನಾಶವಾಗಿವೆ. ವಿದ್ಯುತ್ ಉತ್ಪಾದನೆ ಕುಸಿದಿದೆ. ನೀರಿನ ಅಭಾವ ಹೆಚ್ಚಾಗಿದೆ. ಹೀಗಾಗಿ ಕರ್ನಾಟಕಕ್ಕೆ ನೆರವು ನೀಡುವುದು ಪ್ರಧಾನಮಂತ್ರಿಗಳ ಕರ್ತವ್ಯ" ಎಂದು ಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ಸದಾಶಿವನಗರ ನಿವಾಸದ ಬಳಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, "ಸರ್ವಪಕ್ಷ ನಿಯೋಗ ದೆಹಲಿಗೆ ಹೋಗಲಿದೆ, ಪ್ರಧಾನಮಂತ್ರಿಗಳ ಭೇಟಿಗೆ ಸಮಯಾವಕಾಶ ಕೇಳಿದ್ದು, ಉಪಮುಖ್ಯಮಂತ್ರಿಗಳು ಬರ ಪರಿಸ್ಥಿತಿಯ ಆಳವಾದ ಅಧ್ಯಯನ ಮಾಡಿದ್ದಾರೆ. ಈಗ ಮಧ್ಯಂತರ ಪರಿಹಾರ ನೀಡಿ, ನಂತರ ಬರ ಅಧ್ಯಯನ ಮಾಡಿ ಹೆಚ್ಚು ಪರಿಹಾರ ನೀಡಬೇಕು. ವಿರೋಧ ಪಕ್ಷಗಳ ನಾಯಕರು ಹಾಗೂ ಸಂಸದರು ನಮಗೆ ನೆರವು ನೀಡುವ ವಿಶ್ವಾಸವಿದೆ. ಕರ್ನಾಟಕಕ್ಕೆ ನೆರವು ನೀಡಬೇಕಾಗಿರುವುದು ಪ್ರಧಾನಮಂತ್ರಿಗಳ ಕರ್ತವ್ಯ. ಬೇರೆ ರಾಜ್ಯಗಳು

ಪುಟ 7

ಚಿನಿವಾರಪೇಟೆ - ಮುಂಬೈ, ಸೆಪ್ಟೆಂಬರ್ 24: ಚಿನ್ನ: ಅಪರಂಜಿ - 24 ಕ್ಯಾರೆಟ್ 10 ಗ್ರಾಂ । 1,54,420 । 22 ಕ್ಯಾರೆಟ್ - 10 ಗ್ರಾಂ 1,41,550 । ಬೆಳ್ಳಿ: 1 ಕೆ.ಜಿ. - 3,20,000

# ಬಂಗಾಳದಲ್ಲಿ 250 ಮದರಸಗಳಿಗೆ ಬೀಗ



ಕೋಲ್ಕತ್ತಾ, ಸೆ.24: ಕಡಿಮೆ ವಿದ್ಯಾರ್ಥಿ ದಾಖಲಾತಿ ಹಾಗೂ ಮೂಲಸೌಕರ್ಯಗಳ ಕೊರತೆಯನ್ನು ಆಧರಿಸಿ ಪಶ್ಚಿಮ ಬಂಗಾಳದಲ್ಲಿ ಸರ್ಕಾರದಿಂದ ಮಾನ್ಯತೆ ಪಡೆದಿರುವ ಸುಮಾರು 250 ಖಾಸಗಿ ಮದರಸಾಗಳನ್ನು ಡಿಸೆಂಬರ್ ಬಳಿಕ ಹಂತ ಹಂತವಾಗಿ ಮುಚ್ಚಲು ರಾಜ್ಯ ಸಚಿವ ಸಂಪುಟ ತಾತ್ವಿಕ ಒಪ್ಪಿಗೆ ನೀಡಿದೆ.

ಬುಧವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಪ್ರಸ್ತುತ ಈ ಮದರಸಾಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕಡಿಮೆ ಸಂಖ್ಯೆಯ ವಿದ್ಯಾರ್ಥಿಗಳ ಶಿಕ್ಷಣಕ್ಕೆ ತಕ್ಷಣ ತೊಂದರೆಯಾಗದಂತೆ ಡಿಸೆಂಬರ್‌ವರೆಗೆ ತರಗತಿಗಳನ್ನು ಮುಂದುವರಿಸಲು ಅವಕಾಶ ನೀಡಲಾಗುವುದು. ಬಳಿಕ ಆಡಳಿತಾತ್ಮಕ ಪ್ರಕ್ರಿಯೆ ಪೂರ್ಣಗೊಳಿಸಿ ಮದರಸಾಗಳನ್ನು ಮುಚ್ಚಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯದ ಅಲ್ಪಸಂಖ್ಯಾತ ವ್ಯವಹಾರ ಮತ್ತು ಮದರಸಾ ಶಿಕ್ಷಣ ಇಲಾಖೆಯು ನಡೆಸಿದ ರಾಜ್ಯವ್ಯಾಪಿ ಪರಿಶೀಲನೆಯ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ. ಪರಿಶೀಲನೆಯಲ್ಲಿ ಕೆಲವು ಮದರಸಾಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಅತ್ಯಂತ ಕಡಿಮೆ ಅಥವಾ ಅತಿ ಕ್ಷುಲ್ಲಕವಾಗಿರುವುದು ಹಾಗೂ ಅಗತ್ಯ ಮೂಲಸೌಕರ್ಯಗಳ ಕೊರತೆ ಕಂಡುಬಂದಿದೆ.ಇದಕ್ಕೂ ಮುನ್ನ ಅಗತ್ಯ ಅನುಮತಿ ಹಾಗೂ ಮಾನ್ಯತೆ ಇಲ್ಲದೆ ಕಾರ್ಯನಿರ್ವಹಿಸುತ್ತಿದ್ದ 252 ಮದರಸಾಗಳನ್ನು ಮುಚ್ಚುವಂತೆ ಸರ್ಕಾರ ಆದೇಶಿಸಿತ್ತು. ಸುಮಾರು 100 ಮದರಸಾಗಳಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ.

ಜೂನ್ ಆರಂಭದಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನಡೆಸಿದ ಸ್ಥಳ ಪರಿಶೀಲನೆಯಲ್ಲಿ ಮದರಸಾಗಳ ಮೂಲಸೌಕರ್ಯ, ಅನುಮತಿ, ಆಡಳಿತ ವ್ಯವಸ್ಥೆ ಸೇರಿದಂತೆ ಹಲವು ಅಂಶಗಳನ್ನು ಪರಿಶೀಲಿಸಲಾಗಿತ್ತು. ಅಗತ್ಯ ಅನುಮತಿ ಹೊಂದಿರುವ ಮದರಸಾಗಳಿಗೆ ಕಾರ್ಯನಿರ್ವಹಿಸಲು ಅವಕಾಶ ನೀಡಲಾಗುವುದು ಎಂದು ಅಲ್ಪಸಂಖ್ಯಾತ ವ್ಯವಹಾರ ಮತ್ತು ಮದರಸಾ ಶಿಕ್ಷಣ ಸಚಿವ ಕ್ಷುದಿರಾಮ್ ಟುಡು ತಿಳಿಸಿದ್ದಾರೆ.ಕಾರಣ ಕೇಳಿ ನೋಟಿಸ್ ಪಡೆದಿರುವ ಸಂಸ್ಥೆಗಳ ಉತ್ತರಗಳನ್ನು ಪರಿಶೀಲಿಸಿದ ಬಳಿಕ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.

ರಾಜ್ಯದಲ್ಲಿ ಸರ್ಕಾರದ ನೋಂದಣಿ ಇಲ್ಲದೆ ಕಾರ್ಯನಿರ್ವಹಿಸುತ್ತಿರುವ ಸುಮಾರು 2,500 ಮದರಸಾಗಳ ಮೇಲೂ ಸರ್ಕಾರದ ಗಮನವಿದೆ. ಮುಂದಿನ ಹಂತದಲ್ಲಿ ಇವುಗಳ ವಿರುದ್ಧವೂ ಹಂತ ಹಂತವಾಗಿ ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಡಿಮೆ ದಾಖಲಾತಿ, ಮೂಲಸೌಕರ್ಯ ಕೊರತೆ, ಅನುಮತಿ ಹಾಗೂ ನೋಂದಣಿ ಸಮಸ್ಯೆಗಳು ಸೇರಿದಂತೆ ವಿವಿಧ ಅಂಶಗಳ ಆಧಾರದ ಮೇಲೆ ಮದರಸಾಗಳ ಕಾರ್ಯನಿರ್ವಹಣೆಯನ್ನು ಸರ್ಕಾರ ಪರಿಶೀಲಿಸುತ್ತಿದೆ.

ಮದರಸಾಗಳ ಕುರಿತ ನಿರ್ಧಾರದ ಜತೆಗೆ ವಿವಿಧ ಸರ್ಕಾರಿ ಇಲಾಖೆಗಳಲ್ಲಿನ ಸುಮಾರು 1.51 ಲಕ್ಷ ಹುದ್ದೆಗಳ ನೇಮಕಾತಿಗೆ* ಸಚಿವ ಸಂಪುಟ ಅನುಮೋದನೆ ನೀಡಿದೆ.ಇದರಲ್ಲಿ ಪಶ್ಚಿಮ ಬಂಗಾಳ ಪೊಲೀಸ್ ಇಲಾಖೆಯಲ್ಲಿ 12,000 ಹಾಗೂ ಕೋಲ್ಕತ್ತಾ ಪೊಲೀಸ್ ಇಲಾಖೆಯಲ್ಲಿ 4,000 ಹುದ್ದೆಗಳು ಸೇರಿದ್ದು, ಒಟ್ಟು 16,000 ಪೊಲೀಸ್ ಸಿಬ್ಬಂದಿ ನೇಮಕಕ್ಕೆ ಪ್ರಸ್ತಾವಿಸಲಾಗಿದೆ. ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಮೂಲಕ ಸರ್ಕಾರಿ ಸೇವೆಗಳ ವಿತರಣೆಗೆ ತೊಂದರೆಯಾಗದಂತೆ ನೋಡಿಕೊಳ್ಳುವುದು ಸರ್ಕಾರದ ಉದ್ದೇಶವಾಗಿದೆ. ನೇಮಕಾತಿ ಪ್ರಕ್ರಿಯೆಗೆ ಅಡ್ಡಿಯಾಗಿರುವ ಸಮಸ್ಯೆಗಳನ್ನು ಗುರುತಿಸಿ ಪರಿಹರಿಸುವಂತೆ ಇಲಾಖೆಗಳ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಪೂರ್ವ ಮೇದಿನಿಪುರ ಜಿಲ್ಲೆಯ ನಿಮ್ತೌರಿಯಲ್ಲಿ ಹೊಸ ತಿದ್ದುಪಡಿ ಗೃಹ ಸ್ಥಾಪಿಸುವ ಪ್ರಸ್ತಾವನೆಗೂ ಸಚಿವ ಸಂಪುಟ ಅನುಮೋದನೆ ನೀಡಿದೆ.ಇದಲ್ಲದೆ ಆಯುಷ್ ಇಲಾಖೆಗೆ ಪ್ರತ್ಯೇಕ ಇಲಾಖಾ ಸ್ಥಾನಮಾನ ನೀಡಲು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಗ್ರಂಥಾಲಯ ಅನುದಾನ ಯೋಜನೆಯಡಿ ಆಶ್ರಮ ವಸತಿ ನಿಲಯಗಳಿಗೆ ನೀಡಲಾಗುವ ಅನುದಾನವನ್ನು 1,800ರಿಂದ 3,300ಕ್ಕೆ ಹೆಚ್ಚಿಸಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ.

# ಎಂಬೆಸ್ಸಿ ಒರಿಜಿನ್ಸ್ ಅನಾವರಣ

ಬೆಂಗಳೂರು, ಸೆ.24: ಎಂಬೆಸ್ಸಿ ಡೆವಲಪ್‌ಮೆಂಟ್ಸ್ ಲಿಮಿಟೆಡ್ ಉತ್ತರ ಬೆಂಗಳೂರಿನಲ್ಲಿ 85 ಎಕರೆ ವಿಸ್ತೀರ್ಣದ 'ಎಂಬೆಸ್ಸಿ ಒರಿಜಿನ್ಸ್' ಬೃಹತ್ ವಸತಿ ಯೋಜನೆಯನ್ನು ಅನಾವರಣಗೊಳಿಸಿದೆ. ಸುಮಾರು 4,450 ಕೋಟಿ ಮೌಲ್ಯದ ಈ ಯೋಜನೆಯಲ್ಲಿ 'ಎಂಬೆಸ್ಸಿ ರಿವರ್ಸೈನ್' ಮತ್ತು 'ಎಂಬೆಸ್ಸಿ ಸೌತ್ ರಿಸರ್ವ್' ಎಂಬ ಎರಡು ವಸತಿ ಯೋಜನೆಗಳು ಒಳಗೊಂಡಿವೆ.

ಎಂಬೆಸ್ಸಿ ರಿವರ್ಸೈನ್‌ನಲ್ಲಿ 217 ವಿಲ್ಲಾಗಳು ಹಾಗೂ ಎಂಬೆಸ್ಸಿ ಸೌತ್ ರಿಸರ್ವ್‌ನಲ್ಲಿ 855 ಅಪಾರ್ಟ್‌ಮೆಂಟ್‌ಗಳಿದ್ದು, ಎರಡೂ ಯೋಜನೆಗಳಿಗೆ ರೇರಾ ಅನುಮೋದನೆ ದೊರೆತಿದೆ. ಒಟ್ಟಾರೆ 26 ಲಕ್ಷ ಚದರ ಅಡಿಗೂ ಅಧಿಕ ಮಾರಾಟಯೋಗ್ಯ ವಸತಿ ಪ್ರದೇಶ ಇಲ್ಲಿ ಲಭ್ಯವಾಗಲಿದೆ.

ಯೋಜನೆಯ ವಿನ್ಯಾಸದಲ್ಲಿ 'ನ್ಯಾಚುರಲ್ ಇಂಟೆಲಿಜೆನ್ಸ್' ಪರಿಕಲ್ಪನೆಗೆ ಒತ್ತು ನೀಡಲಾಗಿದ್ದು, ಸ್ಥಳದಲ್ಲಿರುವ ಸುಮಾರು 4,000 ಮರಗಳನ್ನು ಸಂರಕ್ಷಿಸಲಾಗಿದೆ. ನೈಸರ್ಗಿಕ ಜಲಮೂಲಗಳು, ಭೂಸ್ವರೂಪ ಹಾಗೂ ಹಸಿರು ಪ್ರದೇಶಗಳನ್ನು ಆಧರಿಸಿ ಯೋಜನೆಯ ಲ್ಯಾಂಡ್‌ಸ್ಕೇಪ್ ರೂಪಿಸಲಾಗಿದೆ. ಯಲಹಂಕದ ಉತ್ತರ ಭಾಗದಲ್ಲಿರುವ ಈ ಯೋಜನೆಯು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಸುಮಾರು 20 ನಿಮಿಷಗಳ ಪ್ರಯಾಣದ ಅಂತರದಲ್ಲಿದೆ. ಬೆಂಗಳೂರಿನ ಪ್ರಮುಖ ವಾಣಿಜ್ಯ ಪ್ರದೇಶಗಳಿಗೂ ಉತ್ತಮ ಸಂಪರ್ಕ ಹೊಂದಿದೆ.ಎಂಬೆಸ್ಸಿ ಡೆವಲಪ್‌ಮೆಂಟ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಆದಿತ್ಯ ವಿರ್ವಾನಿ ಮಾತನಾಡಿ, "ಕೃತಕ ಬುದ್ಧಿಮತ್ತೆಯ ಜತೆಗೆ ನೈಸರ್ಗಿಕ ಬುದ್ಧಿಮತ್ತೆಯ ಮೇಲೂ ನಂಬಿಕೆ ಇಟ್ಟು ಯೋಜನೆಯನ್ನು ರೂಪಿಸಲಾಗಿದೆ. ಇಲ್ಲಿನ ನೈಸರ್ಗಿಕ ಪರಿಸರವೇ ಯೋಜನೆಯ ವಿನ್ಯಾಸಕ್ಕೆ ಆಧಾರವಾಗಿದೆ" ಎಂದು ತಿಳಿಸಿದ್ದಾರೆ.

# ಬ್ಲ್ಯಾಕ್ ಮೇಲ್ ಆರೋಪ: ಗೃಹಿಣಿ ಆತ್ಮಹತ್ಯೆ, ಮೂವರ ವಿರುದ್ಧ ಎಫ್‌ಐಆರ್

ಮೈಸೂರು, ಸೆ.24: ಅಕ್ರಮ ಸಂಬಂಧದ ವಿಚಾರದಲ್ಲಿ ಬ್ಲ್ಯಾಕ್ ಮೇಲ್ ಮಾಡಲಾಗುತ್ತಿತ್ತು ಎಂಬ ಆರೋಪದ ಹಿನ್ನೆಲೆಯಲ್ಲಿ ಗೃಹಿಣಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ ಲಕ್ಕನಕೊಪ್ಪಲು ಗ್ರಾಮದಲ್ಲಿ ನಡೆದಿದೆ.

ಮೃತರನ್ನು ಗ್ರಾಮದ ಕಾಂತಾ ಅವರ ಪತ್ನಿ ಎಂ.ಆರ್. ಸಂಧ್ಯಾ ಎಂದು ಗುರುತಿಸಲಾಗಿದೆ. ಇದೇ ಗ್ರಾಮದ ವಿಕಾಸ್ ಎಂಬಾತನೊಂದಿಗೆ ಸಂಧ್ಯಾ ಅವರಿಗೆ ಪರಿಚಯವಿತ್ತು ಎನ್ನಲಾಗಿದ್ದು, ಮೊಬೈಲ್ ನಲ್ಲಿದ್ದ ಸಂದೇಶ ಮತ್ತು ವಿಡಿಯೋ ಇಟ್ಟುಕೊಂಡು ಬ್ಲ್ಯಾಕ್ ಮೇಲ್ ಮಾಡಲಾಗುತ್ತಿತ್ತು ಎಂದು ಕುಟುಂಬದವರು ಆರೋಪಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಸಂಧ್ಯಾ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ತಿಳಿದುಬಂದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ವಿಕಾಸ್, ಕುಮಾರ್ ಮತ್ತು ವಸಂತ ಎಂಬ ಮೂವರ ವಿರುದ್ಧ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಬಂಡವಾಳ ಹೂಡಿಕೆ: ಸಣ್ಣ ಉದ್ಯಮಿಗಳಿಗೆ ಮನವರಿಕೆಗೆ ಕಾಶಪ್ಪನವರ್ ಸೂಚನೆ

ಬೆಂಗಳೂರು, ಸೆ.24: – ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ಯಮಿಗಳ ಇಲಾಖೆಯಲ್ಲಿರುವ ಅವಕಾಶಗಳ ಕುರಿತು ಬಂಡವಾಳ ಹೂಡಿಕೆ ಮಾಡಲು ಉದ್ಯಮಿಗಳಿಗೆ ಮನವರಿಕೆ ಮಾಡಿಕೊಡಬೇಕೆಂದು ಸಚಿವ ವಿಜಯಾನಂದ ಕಾಶಪ್ಪನವರ ಅಧಿಕಾರಿಗಳಿಗೆ ಸಲಹೆ ಸೂಚಿಸಿದ್ದಾರೆ.

ಈ ಸಂಬಂಧ ವಿಕಾಸಸೌಧದಲ್ಲಿ ಸಣ್ಣ ಮತ್ತು ಸಾರ್ವಜನಿಕ ಉದ್ಯಮಗಳ ಇಲಾಖೆಯ ಸಹಾಯಕ ನಿರ್ದೇಶಕ( ೦ಆ)ರನ್ನು ಭೇಟಿ ಮಾಡಿ ಇಲಾಖೆ ಸ್ಥಿತಿಗತಿ ಕುರಿತು ಮಾತುಕತೆ ನಡೆಸಿದರು.

ಸಣ್ಣ ಮತ್ತು ಸಾರ್ವಜನಿಕ ಉದ್ಯಮಗಳ ಇಲಾಖೆಯಲ್ಲಿ ಬಂಡವಾಳ ಹೂಡಿಕೆ ಮಾಡಲು ಸಾಕಷ್ಟು ಅವಕಾಶಗಳಿವೆ. ಇಲಾಖೆಯಲ್ಲಿರುವ ಹೊಸ ಯೋಜನೆಗಳ ಬಗ್ಗೆ ಉದ್ಯಮಿಗಳಿಗೆ ಮನವರಿಕೆ

ಮಾಡಿಕೊಡಬೇಕು. ಕೆಲವರಿಗೆ ಇದರ ಬಗ್ಗೆ ಮಾಹಿತಿ ಇರುವುದಿಲ್ಲ ಅಧಿಕಾರಿಗಳು ಈ ಕುರಿತು ಹೆಚ್ಚಿನ



ಕಾಳಜಿ ವಹಿಸಬೇಕೆಂದು ಕಿವಿಮಾತು ಹೇಳಿದರು.

ಸರ್ಕಾರ ಜಾರಿಗೆ ತಂದಿರುವ ಹೊಸ ಯೋಜನೆಗಳು ಬಂಡವಾಳ ಹೂಡಿಕೆಯಿಂದ ಸಿಗಬಹುದಾದ ಅನುಕೂಲಗಳು, ಉದ್ಯೋಗಗಳ ಸೃಷ್ಟಿ, ಮೂಲಭೂತ ಸೌಕರ್ಯಗಳು, ಇತ್ಯಾದಿ ಅಂಶಗಳ ಬಗ್ಗೆ ಮನವರಿಕೆ ಮಾಡಿಕೊಡಿ. ಇದರಿಂದ ಸಣ್ಣ ಉದ್ಯಮಿಗಳು ಬಂಡವಾಳ ಹೂಡಿಕೆ ಮಾಡಲು ಮುಂದೆ ಬರುತ್ತಾರೆ ಎಂದು ಹೇಳಿದರು.

ರಾಜ್ಯ ಸರ್ಕಾರ ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಸಾಕಷ್ಟು ಸಬ್ಸಿಡಿಯನ್ನು ನೀಡುತ್ತದೆ .ಇಲಾಖೆಯಲ್ಲಿ ಈ ಬಗ್ಗೆ ಹೆಚ್ಚಿನ ಪ್ರಚಾರದ ಅಗತ್ಯವಿದೆ ಎಂದು ಅಭಿಪ್ರಾಯ ಪಟ್ಟರು.

ವಾಸ್ತವವಾಗಿ ದೇಶದಲ್ಲಿ ಯಾವುದೇ ರಾಜ್ಯಗಳು ಸಣ್ಣ ಕೈಗಾರಿಕೆಗಳಿಗೆ ನೀಡದಷ್ಟು ಪ್ರೋತ್ಸಾಹವನ್ನು ನಮ್ಮ ಕಾಂಗ್ರೆಸ್ ಸರ್ಕಾರ ನೀಡುತ್ತದೆ. ಹೀಗಾಗಿಯೇ ಈಗಲೂ ನಾವು ಇತರರಿಗಿಂತಲೂ ಮುಂದೆ ಇದ್ದೇವೆ ಎಂದು ತಿಳಿಸಿದರು.

ಸಣ್ಣ ಕೈಗಾರಿಕೆಗಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ತಮಗೆ ಸಂಪೂರ್ಣವಾದ ಅರಿವಿದೆ. ಒಂದೇ ಹಂತದಲ್ಲಿ ಇವೆಲ್ಲವನ್ನೂ ಪರಿಹರಿಸಲು ಸಾಧ್ಯವಿಲ್ಲ. ಹಂತಹಂತವಾಗಿ ಕಾಲಮಿತಿಯೊಳಗೆ ಬಗೆಹರಿಸಿಕೊಳ್ಳುವ ಭರವಸೆಯನ್ನು ಸಚಿವರು ನೀಡಿದರು.

ಇಲಾಖೆಯ ಜವಾಬ್ದಾರಿ ವಹಿಸಿಕೊಂಡ ನಂತರ ಈಗಾಗಲೇ ಅಧಿಕಾರಿಗಳ ಜೊತೆ ಹಲವು ಸುತ್ತಿನ ಮಾತುಕತೆ ಸಭೆ ನಡೆಸಲಾಗಿದೆ. ಸಮಸ್ಯೆಗಳು ಪರಿಹರಿಸುವ ಬಗ್ಗೆ ತಾವು ವಿಶೇಷವಾದ ಕಾಳಜಿಯನ್ನು ಹೊಂದಿದ್ದೇನೆ .ಒಂದೇ ಹಂತದಲ್ಲಿ ಎಲ್ಲವೂ ಬಗೆಹರಿಸಲು ಸಾಧ್ಯವಿಲ್ಲ. ಸಂಪನ್ಮೂಲದ ಇತಿಮಿತಿಗಳಿಗೆ ಪರಿಹರಿಸುವ ಇಂಗಿತವನ್ನು ವ್ಯಕ್ತಪಡಿಸಿದರು.

# ಬಾಲಕಿ ಮೇಲೆ ದೌರ್ಜನ್ಯ: ನಾಲ್ವರ ಸೆರೆ

ಸಮಸ್ತೀಪುರ,ಸೆ.24:–ಬಿಹಾರದಲ್ಲಿ ಅಪ್ರಾಪ್ತ ಬಾಲಕಿಯರ ಮೇಲಿನ ದೌರ್ಜನ್ಯದ ಸರಣಿ ಘಟನೆಗಳು ಜನರನ್ನು ಬೆಚ್ಚಿಬೀಳಿಸಿದ್ದು, ಜಮುಯಿ ಘಟನೆಯ ಕಹಿ ನೆನಪು ಮಾಸುವ ಮುನ್ನವೇ ಸಮಸ್ತೀಪುರದಲ್ಲಿ ಮತ್ತೊಂದು ಆಘಾತಕಾರಿ ಪ್ರಕರಣ ಬೆಳಕಿಗೆ ಬಂದಿದೆ. ಸಾರ್ವಜನಿಕ ರಸ್ತೆಯಲ್ಲೇ ಅಪ್ರಾಪ್ತ ಬಾಲಕಿಯೊಬ್ಬಳಿಗೆ ಕಿರುಕುಳ ನೀಡಿದ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ರಾಜ್ಯಾದ್ಯಂತ ತೀವ್ರ ಆಕ್ರೋಶದ ಅಲೆಯನ್ನೇ ಎಬ್ಬಿಸಿದೆ.



ಈ ದುರ್ಘಟನೆಯು ಸಮಸ್ತೀಪುರದ ಕರ್ಪೂರಿಗ್ರಾಮ ಪೊಲೀಸ್ ಠಾಣೆ ವ್ಯಾಪ್ತಿಯ ಜಗತ್‌ಸಿಂಗ್‌ಪುರ ಗ್ರಾಮದ ಹತ್ತಿರದ ಬೈಪಾಸ್ ರಸ್ತೆಯಲ್ಲಿ ಸಂಭವಿಸಿದೆ. ಬಾಲಕಿಯು ತನ್ನ ಸ್ನೇಹಿತನೊಂದಿಗೆ ರಸ್ತೆಬದಿಯಲ್ಲಿ ಛಾಯಾಚಿತ್ರ ತೆಗೆದುಕೊಳ್ಳುತ್ತಿದ್ದಾಗ, ಅಲ್ಲಿಗೆ ಬಂದ ಕಿಡಿಗೇಡಿಗಳ ಗುಂಪೊಂದು ಅವರಿಬ್ಬರನ್ನು ಮುತ್ತಿಗೆ ಹಾಕಿದೆ. ಬಾಲಕಿಯು ಎಷ್ಟೇ ಬೇಡಿಕೊಂಡರೂ ಆಕೆಗೆ ರಸ್ತೆಯಲ್ಲೇ ದೈಹಿಕವಾಗಿ ಹಾಗೂ ಮಾನಸಿಕವಾಗಿ ಕಿರುಕುಳ ನೀಡಿದ್ದು, ಆಕೆಯ ಕೈಹಿಡಿದು ಎಳೆದಾಡಿ ಅಸಭ್ಯವಾಗಿ ವರ್ತಿಸಿದ್ದಾರೆ.

ವೈರಲ್ ಆದ ಐವತ್ತಾರು ಸೆಕೆಂಡುಗಳ ವಿಡಿಯೋ ತುಣುಕನ್ನು ಗಮನಿಸಿದ ಪೊಲೀಸರು ತಕ್ಷಣವೇ ತನಿಖೆ ಆರಂಭಿಸಿ, ಈ ಕೃತ್ಯದಲ್ಲಿ ಭಾಗಿಯಾಗಿದ್ದ ನಾಲ್ವರು ಮುಖ್ಯ ಆರೋಪಿಗಳನ್ನು ಬಂಧಿಸಿದ್ದಾರೆ. ಈ ರೀತಿಯ ಸಮಾಜಘಾತುಕ ಕೃತ್ಯಗಳಲ್ಲಿ ತೊಡಗುವವರ ವಿರುದ್ಧ ಯಾವುದೇ ಮುಲಾಜಿಲ್ಲದೆ ಅತ್ಯಂತ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸ್ ಇಲಾಖೆಯ ಉನ್ನತಾಧಿಕಾರಿಗಳು ಭರವಸೆ ನೀಡಿದ್ದಾರೆ.

# ಬಸ್ ನಿಲ್ದಾಣ ಕಾಮಗಾರಿಗೆ ಚಾಲನೆ




ಕೆ.ಆರ್.ಪುರ, ಸೆ.24:– ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಕೆ.ಆರ್.ಪುರ ಬಸ್ ನಿಲ್ದಾಣದ 87ಲಕ್ಷ ವೆಚ್ಚದ ನಿರ್ಮಾಣ ಕಾಮಗಾರಿಗೆ ಶಾಸಕ ಬಿ.ಎ.ಬಸವರಾಜ ಅವರು ಚಾಲನೆ ನೀಡಿದರು.

ಚಾಲನೆ ನೀಡಿ ಮಾತನಾಡಿದ ಶಾಸಕ ಬಿ.ಎ.ಬಸವರಾಜ ಅವರು ರಾಜ್ಯ ಸರ್ಕಾರ ಶಾಸಕರಿಗೆ ಅನುದಾನ ನೀಡುವಲ್ಲಿ ಸಂಪೂರ್ಣ ವಿಫಲವಾಗಿದ್ದು, ಇದು ಅಭಿವೃದ್ಧಿ ಕಾಮಗಾರಿಯ ಹಿನ್ನಡೆಗೆ ಪ್ರಮುಖ ಕಾರಣವಾಗಿದೆ ಎಂದು ಹೇಳಿದರು.

ಸರ್ಕಾರಿ ಆಸ್ಪತ್ರೆ ನಿರ್ಮಾಣವಾಗಿ ವರ್ಷಗಳೆ ಕಳೆದರೂ ಈ ಸರ್ಕಾರಕ್ಕೆ ಉದ್ಘಾಟನೆ ಮಾಡುವಷ್ಟು ಸಮಯವಿಲ್ಲ ಎಂದು ದೂರಿದರು.

ಬಿಜೆಪಿ ಸರ್ಕಾರ ಇರುವಾಗ ಮೇಲುಸೇತುವೆ ನಿರ್ಮಾಣ ಮಾಡಲು ಬಜೆಟ್ ನಲ್ಲಿ ಅನುಮೊದನೆ ಮಾಡಿದ್ದೆ ಆದರೆ ಈ ಸರ್ಕಾರ ಕೈಬಿಟ್ಟಿದೆ ಎಂದರು.

ಸಂತೆ ಕಾಂಪ್ಲೆಕ್ಸ್ ಕಟ್ಟಡ ನಿರ್ಮಾಣ ಮಾಡಲು 50 ಕೋಟಿ ಅನುದಾನ ತಂದಿದ್ದೆ ಆದರೆ ಯರೋ ಕೋರ್ಟಿನಲ್ಲಿ ತಡೆಯಾಜ್ಞೆ ತಂದಿದ್ದಾರೆ ಯಾವುದೇ ಒಂದು ಒಳ್ಳೆಯ ಕೆಲಸ ಮಾಡಲು ಹೋದರು ಅಡೆತಡೆಗಳನ್ನು ತರುತ್ತಾರೆ ಎಂದರು.

ಕಳೆದ ಮೂರು ವರ್ಷಗಳಲ್ಲಿ ಅನುದಾನಕ್ಕೆ ಅಲೆದಾಡುವ ಪರಿಸ್ಥಿತಿ ಆಗಿದೆ.ನಮ್ಮ ಕ್ಷೇತ್ರಕ್ಕೆ 500–1ಸಾವಿರ ಕೋಟಿ ಬೇಕು ಕೊಟ್ಟರೆ ಹಗಲು ರಾತ್ರಿ ನಾನು ನಮ್ಮ ಮುಖಂಡರು ಸೇರಿ ಕೆಲಸ ಮಾಡುತ್ತೇವೆ. ಕೊಟ್ಟಿರು ಹಣದಲ್ಲಿ ತುಂಬಾ ಅವಶ್ಯಕತೆ ಇರುವ ಕಾಮಗಾರಿ ಮಾಡಲಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಪಾಲಿಕೆ ಸದಸ್ಯರಾದ ಶ್ರೀಕಾಂತ್,ಜಯಪ್ರಕಾಶ್ ಮುಖಂಡರಾದ ಕೆ.ಹೇಮಂತ್, ರಾಜೇಂದ್ರ, ಶ್ರೀರಾಮ್, ಶ್ರೀನಿವಾಸ್, ಗಿರೀಶ್, ಮಾರುತಿ,ಕೃಷ್ಣ, ಮತ್ತಿತರರು ಇದ್ದರು.

# ಸುರೇಶ್‌ಗೌಡ ಎನ್.ಶ್ರೀನಿವಾಸ್ ಸೇರಿ ನೂರಾರು ಕಾರ್ಯಕರ್ತರು ಕಾಂಗ್ರೆಸ್ ಪಕ್ಷ ಸೇರ್ಪಡೆ




ಬೆಂಗಳೂರು. ಸೆ.24:–ಮಾಜಿ ಸಂಸದ ರಾಜೀವ್ ಗೌಡ, ಕಾಂಗ್ರೆಸ್ ಮುಖಂಡರಾದ ಬಿ.ಕೆ.ಶಿವರಾಂ,ಮಲ್ಲೇಶ್ವರಂ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಅನೂಪ್ ಅಯ್ಯಂಗಾರ್, ಮಾಜಿ ನೆ.ಲ.ನರೇಂದ್ರಬಾಬು,

ಬಿ.ಕೆ.ಹರಿಪ್ರಸಾದ್ ರವರು ಮಾತವಾಡಿ ಮಲ್ಲೇಶ್ವರಂ ವಿಧಾನಸಭಾಕ್ಷೇತ್ರದ ಎರಡು ಪ್ರಮುಖ ಮುಖಂಡರುಗಳಾದ ಸುರೇಶ್ ಗೌಡ, ಎನ್.ಶ್ರೀನಿವಾಸ್ ರವರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗುತ್ತಿದ್ದಾರೆ ಮಾತ್ರ ಪಕ್ಷಕ್ಕೆ ಬಂದಿರುವುದು ಸಂತೋಷದಾಯವಾಗಿದೆ.

ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರಕ್ಕೆ ಯಾರು ಅಭಿವೃದ್ಧಿ ಮಾಡಿದ್ದಾರೆ ಎಂಬುದು ಚಿಂತನೆ ಮಾಡಬೇಕು. ಮುಖ್ಯಮಂತ್ರಿ ಎಸ್.ಎಂ.ಕೃಷ್ಣರವರ ಆಡಳಿತದ ಅವಧಿಯಲ್ಲಿ ಸ್ಯಾಂಕಿ ಕೆರೆ ಅಭವೃದ್ಧಿಪಡಿಸಲಾಯಿತು. ಬಿಜೆಪಿ ಪಕ್ಷದವರು ಏನು ಸಾಧನೆ ಮಾಡಿಲ್ಲ.

ಸುರೇಶ್ ಗೌಡ ಮತ್ತು ಎನ್.ಶ್ರೀನಿವಾಸ್ ರವರ ಜೊತೆಯಲ್ಲಿ ಅಪಾರ ಬೆಂಬಲಿಗರು ಸೇರಿದ್ದಾರೆ ಮಲ್ಲೇಶ್ವರಂ ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚು ಬಂದಿದೆ. ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರ ವೈಟ್ ಕಾಲರ್ ಇರುವ ಜನರು ಕಾಂಗ್ರೆಸ್ ಪಕ್ಷಕ್ಕೆ ಬರುವುದಿಲ್ಲ ಎಂದು ತಿಳಿದಿಕೊಂಡಿದ್ದೇ. ಅದರೆ ಇಂದು ಕಾಂಗ್ರೆಸ್ ಪಕ್ಷಕ್ಕೆ ಸೇರಿರುವುದು ನೋಡಿದರೆ ಜನರು ಬದಲಾವಣೆ ಬಯಸಿದ್ದಾರೆ ಎಂದು ತಿಳಿಯುತ್ತದೆ.

ಕಾಂಗ್ರೆಸ್ ಪಕ್ಷದ ಇತಿಹಾಸ ಅರಿತುಕೊಳ್ಳಬೇಕು. ಭಾರತೀಯ ಜನತಾ ಪಾರ್ಟಿ ಅಧಿಕಾರಕ್ಕೆ ಬಂದಮೇಲೆ ಜಾತಿ, ಕೋಮುವಾದ ಹೆಚ್ಚಾಗಿದೆ ಸಂವಿಧಾನವನ್ನು ಬುಡಮೇಲು ಮಾಡುತ್ತಿದ್ದಾರೆ.ಸ್ವಾತಂತ್ರ್ಯ ಕೊಟ್ಟರು, ಸಾಮಾನತೆ, ಸರ್ವರಿಗೂ ಸಮಬಾಳು, ಸರ್ವರಿಗೂ ಪಾಲು ಎಂಬ ಸಿದ್ಧಾಂತದಲ್ಲಿ ಎಲ್ಲರು ಕಾಂಗ್ರೆಸ್ ಪಕ್ಷ ಕಟ್ಟಬೇಕು ಎಂದು ಹೇಳಿದರು.

ಅನೂಪ್ ಅಯ್ಯಂಗಾರ್ ರವರು ಮಾತನಾಡಿ ಕಾಂಗ್ರೆಸ್ ಪಕ್ಷ ಬಡವರ ಪರ, ಎಲ್ಲ ಧರ್ಮ ಜಾತಿಯವರನ್ನ ಸರಿಸಮಾನವಾಗಿ ಕಾಣುವ ಪಕ್ಷ.

ಗ್ಯಾರಂಟಿ ಯೋಜನೆ ಮತ್ತು ಅಭಿವೃದ್ಧಿ ಯೋಜನೆಗಳಿಂದ ಜನರು ಕಾಂಗ್ರೆಸ್ ಪಕ್ಷಕ್ಕೆ ಸೇರುತ್ತಿದ್ದಾರೆ. ಮಲ್ಲೇಶ್ವರಂ ವಿಧಾನಸಭಾ ಪ್ರಜ್ಞಾವಂತ ಮತ್ತು ಬುದ್ಧಿವಂತರು ಇರುವ ಪಕ್ಷ ಇಂದು ಸಾವಿರಾರು ಸಂಖ್ಯೆಯಲ್ಲಿ ಕಾಂಗ್ರೆಸ್ ಪಕ್ಷ ಸೇರ್ಪಡೆಯಾಗುತ್ತಿದ್ದಾರೆ ಇದರ ಅರ್ಥ ಜನರು ಬದಲಾವಣೆ ಬಯಸಿದ್ದಾರೆ. ಮುಂಬರುವ ಪಾಲಿಕೆ ಮತ್ತು ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಜಯಭೇರಿ ಬಾರಿಸಲಿದೆ ಎಂದು ಹೇಳಿದರು.

# ಜೀವಾವಧಿ ಶಿಕ್ಷೆಯ ಭೀತಿಯಲ್ಲಿ ಕ್ರಿಕೆಟಿಗ ರಾಬಿನ್ ದಾಸ್

ಲಂಡನ್,ಸೆ.24– ಎಸೆಕ್ಸ್ ಕೌಂಟಿ ಕ್ರಿಕೆಟ್ ತಂಡದ 24 ವರ್ಷದ ಇಂಗ್ಲೆಂಡ್ ಕ್ರಿಕೆಟಿಗ ರಾಬಿನ್ ದಾಸ್ ವಿರುದ್ಧ ಎರಡು ಅತ್ಯಾಚಾರ ಆರೋಪಗಳು ಹೊರಿಸಲ್ಪಟ್ಟಿದ್ದು, ಅವರು ಜೀವಾವಧಿ ಶಿಕ್ಷೆಯ ಭೀತಿಯನ್ನು ಎದುರಿಸುತ್ತಿದ್ದಾರೆ. ಮಾರ್ಚ್ 30, 2024 ರಂದು ಬ್ರಿಕ್ಸ್ಟನ್‌ನಲ್ಲಿ ಮಹಿಳೆಯೊಬ್ಬರು ನೀಡಿದ ಅತ್ಯಾಚಾರ ದೂರಿನ ಆಧಾರದ ಮೇಲೆ ಮೆಟ್ರೋಪಾಲಿಟನ್ ಪೊಲೀಸರು 2025 ರಂದು ಅವರನ್ನು ಬಂಧಿಸಿದ್ದರು. ಪ್ರಕರಣದ ಸಂತ್ರಸ್ತೆ ಮಹಿಳೆಗೆ ತಜ್ಞ ಅಧಿಕಾರಿಗಳು ಅಗತ್ಯ ಬೆಂಬಲವನ್ನು ನೀಡುತ್ತಿದ್ದಾರೆ. ಈ ಬಂಧನದ ಬಳಿಕ, ಜುಲೈ 23, 2026 ರಂದು ಅವರ ಮೇಲೆ ಮತ್ತೊಂದು ಅಪರಾಧದ ಆರೋಪವನ್ನು ಸಹ ಹೊರಿಸಲಾಗಿದೆ.



ಈ ಗಂಭೀರ ಆರೋಪಗಳನ್ನು ಎದುರಿಸುತ್ತಿರುವ ರಾಬಿನ್ ದಾಸ್ ಅವರು ಅಕ್ಟೋಬರ್ 9 ರಂದು ಇನ್ನರ್ ಲಂಡನ್ ಕ್ರೌನ್ ನ್ಯಾಯಾಲಯಕ್ಕೆ ಹಾಜರಾಗಲಿದ್ದಾರೆ. ಕಾನೂನಿನ ಪ್ರಕಾರ ಅತ್ಯಾಚಾರ ಪ್ರಕರಣಕ್ಕೆ ಗರಿಷ್ಠ ಶಿಕ್ಷೆಯಾಗಿ ಜೀವಾವಧಿ ಜೈಲು ಶಿಕ್ಷೆ ವಿಧಿಸಲು ಅವಕಾಶವಿರುವುದರಿಂದ, ಈ ಆರೋಪಗಳು ನ್ಯಾಯಾಲಯದಲ್ಲಿ ಸಾಬೀತಾದರೆ ರಾಬಿನ್ ದಾಸ್ ಅವರ ಕ್ರಿಕೆಟ್ ವೃತ್ತಿಜೀವನ ಮಾತ್ರವಲ್ಲದೆ ಇಡೀ ಜೀವನವೇ ಅಂತ್ಯಗೊಳ್ಳುವ ಸಾಧ್ಯತೆಯಿದೆ.

2020 ರಲ್ಲಿ ಎಸೆಕ್ಸ್ ತಂಡದ ಪರವಾಗಿ ವೃತ್ತಿಪರ ಕ್ರಿಕೆಟ್‌ಗೆ ಪಾದಾರ್ಪಣೆ ಮಾಡಿದ ರಾಬಿನ್ ದಾಸ್, ಇಲ್ಲಿಯವರೆಗೆ ಕೌಂಟಿ ಕ್ರಿಕೆಟ್‌ನಲ್ಲಿ ಒಟ್ಟು 62 ಪಂದ್ಯಗಳನ್ನು ಆಡಿದ್ದಾರೆ. ಇನ್ನು 2022 ರಲ್ಲಿ ಲಾರ್ಡ್ಸ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ನಡೆದ ಟೆಸ್ಟ್ ಪಂದ್ಯದ ವೇಳೆ ಇಂಗ್ಲೆಂಡ್ ರಾಷ್ಟ್ರೀಯ ತಂಡದ ಪರವಾಗಿ ಸಬ್–ಫೀಲ್ಡರ್ ಆಗಿ ಮೈದಾನಕ್ಕಿಳಿದಿದ್ದರಾದರೂ, ಅವರು ಇನ್ನೂ ಅಧಿಕೃತವಾಗಿ ಅಂತರರಾಷ್ಟ್ರೀಯ ಪದಾರ್ಪಣೆ ಮಾಡಿಲ್ಲ.

ಕಳೆದ ವರ್ಷದ ನವೆಂಬರ್‌ನಲ್ಲಿ ಎಸೆಕ್ಸ್ ಕೌಂಟಿ ಕ್ಲಬ್‌ನಿಂದ ರಾಬಿನ್ ದಾಸ್‌ಗೆ ಹೊಸ ಒಪ್ಪಂದದ ಆಫರ್ ನೀಡಲಾಗಿತ್ತು. ಆದರೆ ಪ್ರಸ್ತುತ ರಾಬಿನ್ ದಾಸ್ ನ್ಯಾಯಾಲಯಕ್ಕೆ ಹಾಜರಾಗಿರುವುದನ್ನು ಎಸೆಕ್ಸ್ ಕೌಂಟಿ ಕ್ರಿಕೆಟ್ ಕ್ಲಬ್ ದೃಢಪಡಿಸಿದ್ದು, ಈ ಘಟನೆಯು ಕ್ಲಬ್‌ನ ಯಾವುದೇ ಚಟುವಟಿಕೆಗಳಿಗೆ ಸಂಬಂಧಿಸಿದ್ದಲ್ಲ ಎಂದು ಸ್ಪಷ್ಟಪಡಿಸಿದೆ. ಅಲ್ಲದೆ, ಈ ಕಾನೂನು ಪ್ರಕ್ರಿಯೆಯಲ್ಲಿ ಕ್ಲಬ್ ಎಲ್ಲಾ ಸೂಕ್ತ ನಿಯಮಗಳು ಹಾಗೂ ಮಾರ್ಗದರ್ಶನಗಳನ್ನು ಸಂಪೂರ್ಣವಾಗಿ ಅನುಸರಿಸಲಿದೆ ಎಂದು ತಿಳಿಸಿದೆ.

# ಪ್ರತಾಪ್ ಸಿಂಹ ಬಂಧನಕ್ಕೆ ಆಗ್ರಹಿಸಿ ಕಾಂಗ್ರೆಸ್ ಪ್ರತಿಭಟನೆ

ಬೆಂಗಳೂರು, ಸೆ.24:– ಬಿಜೆಪಿ ಮಾಜಿ ಸಂಸದ ಪ್ರತಾಪ್ ಸಿಂಹ ದಲಿತ ಹೋರಾಟಗಾರರನ್ನು ಅಪಮಾನಿಸಿರುವ ಹಿನ್ನೆಲೆಯಲ್ಲಿ ಹಾಗೂ ಪೊಲೀಸ್ ಅಧಿಕಾರಿಯನ್ನು ಬೆದರಿಸಿರುವ ಪ್ರಕರಣದಲ್ಲಿ ಕೂಡಲೇ ಬಂಧಿಸಬೇಕೆಂದು ಆಗ್ರಹಿಸಿ ಹಾಗೂ ಕರಾವಳಿ ಭಾಗದ ಸಂಸ್ಕೃತಿಯನ್ನು ಹಾಗೂ ಅಭಿವೃದ್ಧಿಯನ್ನು ಟೀಕಿಸಿರುವ ವಿರೋಧ ಪಕ್ಷದ ನಾಯಕರಾದ ಆರ್ ಅಶೋಕ್ ಕೂಡಲೇ ಕರಾವಳಿ ಭಾಗದ ಜನರ ಕ್ಷಮೆ ಕೋರಬೇಕೆಂದು ಹಾಗೂ ವಿಶೇಷ ಅಧಿವೇಶನಕ್ಕೆ ಅಡ್ಡಿಪಡಿಸುತ್ತಿರುವ ಆರ್ ಅಶೋಕ್ ವರ್ತನೆಯನ್ನು ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಅಡ್ಡಿಪಡಿಸಲು ಹಾಗೂ ಕೋಮುಗಲಭೆ ಸೃಷ್ಟಿಸಲು ಪ್ರತಾಪ್ ಸಿಂಹ ಹಾಗೂ ಬಿಜೆಪಿ ಮುಖಂಡರು ಪ್ರಯತ್ನಿಸುತ್ತಿದ್ದಾರೆ ಈ ಬಗ್ಗೆ ಈಗಾಗಲೇ ರಾಜ್ಯ ಪೊಲೀಸ್ ಮುಖ್ಯಸ್ಥರಿಗೆ ಸಹ ದೂರನ್ನು ಸಲ್ಲಿಸಲಾಗಿದೆ. ಕೋಮುಗಲಭೆ ಸೃಷ್ಟಿಸುವ ಒಂದು ಅಂಶದ ಕಾರ್ಯಕ್ರಮವನ್ನು ಬಿಜೆಪಿ ಪಕ್ಷ ಹಮ್ಮಿಕೊಂಡಿದೆ. ಇದರ ಉಸ್ತುವಾರಿಯನ್ನ ಬಿಜೆಪಿಯ




ಮಾಜಿ ಸಂಸದ ಪ್ರತಾಪ್ ಸಿಂಹ ವಹಿಸಿಕೊಂಡಿದ್ದಾರೆ ಎಂದು ಆರೋಪಿಸಿದರು.

ಈ ಘಟನೆಗೆ ಉತ್ತೇಜನ ನೀಡಿ ಕಾನೂನು ವ್ಯವಸ್ಥೆ ಹದಗೆಡಿಸಿ ಹಾಗೂ ಕೋಮುಗಲಭೆ ಸೃಷ್ಟಿಸಿ ಪೊಲೀಸ್ ಇಲಾಖೆಗೆ ಸವಾಲು ಹಾಕುವ ಮೂಲಕ ರಾಜ್ಯದಲ್ಲಿ ಅಶಾಂತಿಯನ್ನು ಸೃಷ್ಟಿಸಿ ಕಾನೂನು ವ್ಯವಸ್ಥೆಗೆ ಧಕ್ಕೆ ತರುತ್ತಿರುವ ಪ್ರತಾಪ್ ಸಿಂಹನ ವಿರುದ್ಧ ಪ್ರಕರಣ ದಾಖಲಾಗಿದ್ದು ಕೂಡಲೇ ಆತನನ್ನು ಬಂಧಿಸಬೇಕು.

ಮಂಗಳೂರು ನಗರದಲ್ಲಿ ನಡೆದ ವಿಶೇಷ ಸಚಿವ ಸಂಪುಟದ ಸಭೆಯಲ್ಲಿ ರಾಜ್ಯ ಸರ್ಕಾರ ಕರಾವಳಿ ಭಾಗದ ಅಭಿವೃದ್ಧಿಗೆ ಹಾಗೂ ಮೀನುಗಾರರ ಅಭಿವೃದ್ಧಿಗೆ ವಿಶೇಷ ಯೋಜನೆಯನ್ನು ರೂಪಿಸಿದೆ ಇದರ ಬಗ್ಗೆ ಅಪಹಾಸ್ಯ ಮಾಡಿರುವ ವಿರೋಧ ಪಕ್ಷದ ನಾಯಕರಾದ ಆರ್.ಅಶೋಕ್ ರವರು ಮಾನ್ಯ ಮುಖ್ಯಮಂತ್ರಿಗಳು ಮೀನು ತಿನ್ನಲು ಹೋಗಿದ್ದಾರೆ ಎಂದು ಅಪಹಾಸ್ಯ ಮಾಡಿದ್ದಾರೆ. ಮೀನು ತಿನ್ನುವುದು ತಿನ್ನುವವರ ಹಕ್ಕು , ಅದರ ಬಗ್ಗೆ ಅಪಹಾಸ್ಯ ಮಾಡಿ ಮೀನು ಸಾಗಾಣಿಕೆ ವ್ಯಾಪಾರದ ಬಗ್ಗೆ ಟೀಕೆ ನಡೆಸಿದ್ದಾರೆ. ಈ ಕೂಡಲೇ ರಾಜ್ಯದ ಜನರ ಕ್ಷಮೆಯನ್ನು ಆರ್. ಅಶೋಕ್ ಕೇಳಬೇಕು.

ಪ್ರತಿಭಟನೆಯಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಎಸ್. ಮನೋಹರ್, ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಕುಶಾಲ್ ಹರುವೇಗೌಡ, ಕಾಂಗ್ರೆಸ್ ಮುಖಂಡರುಗಳಾದ ಜಿ.ಪ್ರಕಾಶ್, ಲಕ್ಷ್ಮೀನಾರಾಯಣ್, ಚಂದ್ರಶೇಖರ್ ಪುಟ್ಟರಾಜು, ರಂಜೀತ್ ಕುಮಾರ್, ಮಾಧವಹನೂರು, ಕಿಶೋರ್, ಅಜಯ್ ಶಾಹೀನ್ ಶರೀಫ್ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸಿದರು .

# ‘ರಾಮರಸ’ದಲ್ಲಿ ಅದಾ ಶರ್ಮಾ

ಸಂಜಯ್ ನಾಗ್,ಹಾಸನ



ದೊಡ್ಡ ತಾರಾಬಳಗ, ವಿಭಿನ್ನ ಕಥಾಹಂದರ ಹಾಗೂ ಅದ್ಧೂರಿ ಮೇಕಿಂಗ್‌ನಿಂದ ಗಮನ ಸೆಳೆಯುತ್ತಿರುವ ‘ರಾಮರಸ’ ಚಿತ್ರ ಇದೀಗ ಮತ್ತೊಂದು ಕುತೂಹಲಕಾರಿ ಸುದ್ದಿಯೊಂದಿಗೆ ಸದ್ದು ಮಾಡುತ್ತಿದೆ. ಬಾಲಿವುಡ್ ಹಾಗೂ ದಕ್ಷಿಣ ಭಾರತದ ಚಿತ್ರಗಳಲ್ಲಿ ಗುರುತಿಸಿಕೊಂಡಿರುವ ನಟಿ ಅದಾ ಶರ್ಮಾ ಚಿತ್ರತಂಡಕ್ಕೆ ಸೇರ್ಪಡೆಯಾಗಿದ್ದು, ಪ್ರಮುಖ ಹಾಗೂ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

## ರಹಸ್ಯ ಪಾತ್ರದ ಮೇಲೆ ಕುತೂಹಲ

ಈಗಾಗಲೇ ಚಿತ್ರೀಕರಣ ಪೂರ್ಣಗೊಳಿಸಿರುವ ‘ರಾಮರಸ’ ಸದ್ಯ ಪೋಸ್ಟ್–ಪ್ರೊಡಕ್ಷನ್ ಹಂತದಲ್ಲಿದೆ. ಚಿತ್ರದ ಪಾತ್ರವೊಂದರಲ್ಲಿ ಅದಾ ಶರ್ಮಾ ಅವರ ಉಪಸ್ಥಿತಿ ಕಥೆಗೆ ಮತ್ತಷ್ಟು ತಿರುವು ನೀಡಲಿದೆ ಎನ್ನುವುದು ಚಿತ್ರತಂಡದ ಮಾತು. ಆದರೆ ಅವರು ನಿರ್ವಹಿಸುತ್ತಿರುವ ಪಾತ್ರದ ಸ್ವರೂಪವನ್ನು ಮಾತ್ರ ಸದ್ಯಕ್ಕೆ ಗೌಪ್ಯವಾಗಿಡಲಾಗಿದೆ.

“ಇಡೀ ಸೃಷ್ಟಿಯೇ ಪರಾಶಕ್ತಿಯ ಲೀಲೆ. ಹಾಲುಣಿಸುವವಳೂ ತಾಯಿ, ಮಣ್ಣು ಮುಕ್ಕಿಸುವವಳೂ ತಾಯಿ. ಹಾಲು ಯಾವುದು, ಮಣ್ಣು ಯಾವುದು ಎಂಬ ಅರಿವು ಪಡೆಯುವುದೇ ಬದುಕಿನ ಮಾಯೆ. ದಶ ಮಹಾವಿದ್ಯೆಯ ಸಾರವನ್ನು ಪರಿಚಯಿಸಲು ತಾಯಿ ‘ರಾಮರಸ’ದಲ್ಲಿ ಯಾವ ರೂಪದಲ್ಲಿ ಬರಲಿದ್ದಾಳೆ ಎಂಬುದನ್ನು ತೆರೆಯ ಮೇಲೆಯೇ ನೋಡಬೇಕು” ಎಂದು ಚಿತ್ರತಂಡ ಕುತೂಹಲ ಮೂಡಿಸಿದೆ.

ಕಾರ್ತಿಕ್ ಮಹೇಶ್, ಪ್ರಜ್ವಲ್ ದೇವರಾಜ್, ಶರಣ್ ಹಾಗೂ ಹೆಬ್ಬಾ ಪಟೇಲ್ ಸೇರಿದಂತೆ ಹಲವು ಜನಪ್ರಿಯ ಕಲಾವಿದರು ಚಿತ್ರದಲ್ಲಿದ್ದಾರೆ. ಬಿಗ್ ಬಾಸ್ ಕನ್ನಡ ವಿಜೇತ ಕಾರ್ತಿಕ್ ಮಹೇಶ್, ಡೈನಮಿಕ್ ಸ್ಟಾರ್ ಪ್ರಜ್ವಲ್ ದೇವರಾಜ್, ಕಾಮಿಡಿ ಕಿಂಗ್ ಶರಣ್ ಹಾಗೂ ಹೆಬ್ಬಾ ಪಟೇಲ್ ಅವರ ಪಾತ್ರಗಳು ಚಿತ್ರದ ಪ್ರಮುಖ ಆಕರ್ಷಣೆಗಳಾಗಿವೆ.

ಕೃಷ್ಣಕುಮಾರ್ (ಕೆಕೆ) ಛಾಯಾಗ್ರಹಣ, ಬಿ.ಜೆ. ಭರತ್ ಸಂಗೀತ, ಅರ್ಜುನ್ ಕಿಟ್ಟು ಸಂಕಲನ, ಡಾ. ನಾಗೇಂದ್ರ ಪ್ರಸಾದ್, ನಾಗಾರ್ಜುನ್ ಶರ್ಮಾ ಹಾಗೂ ಪುನೀತ್ ರಂಗಸ್ವಾಮಿ ಸಾಹಿತ್ಯ ಚಿತ್ರಕ್ಕಿದೆ. ಗುರು ದೇಶಪಾಂಡೆ ಕ್ರಿಯೇಟಿವ್ ಹೆಡ್ ಆಗಿ ಕಾರ್ಯನಿರ್ವಹಿಸಿದ್ದಾರೆ.

ಗುರು ದೇಶಪಾಂಡೆ ಮತ್ತು ವಿಕ್ರಂ ಆರ್ಯ ನಿರ್ಮಿಸುತ್ತಿರುವ ಈ ಚಿತ್ರವನ್ನು ಜಿ ಸಿನಿಮಾಸ್ ಪ್ರೊಡಕ್ಷನ್ ಹಾಗೂ ಸೆವೆನ್ ಸ್ಟಾರ್ ಮೂವೀಸ್ ಸಹಯೋಗದಲ್ಲಿ ಅದ್ಧೂರಿಯಾಗಿ ರೂಪಿಸಲಾಗುತ್ತಿದೆ.

ಸದ್ಯ ಎಡಿಟಿಂಗ್, ವಿಎಫ್‌ಎಕ್ಸ್ ಹಾಗೂ ಸೌಂಡ್ ಡಿಸೈನಿಂಗ್ ಕೆಲಸಗಳು ಭರದಿಂದ ಸಾಗುತ್ತಿದ್ದು, ಚಿತ್ರದ ಟೀಸರ್ ಬಿಡುಗಡೆ ದಿನಾಂಕ ಹಾಗೂ ಮುಂದಿನ ಪ್ರಮುಖ ಪಾತ್ರಗಳ ಫಸ್ಟ್‌ಲುಕ್‌ಗಳನ್ನು ಶೀಘ್ರದಲ್ಲೇ ಚಿತ್ರತಂಡ ಘೋಷಿಸಲಿದೆ.

# ರಗಡ್ ನರಸಿಂಹನ ಬದುಕನ್ನೇ ಬದಲಾಯಿಸುತ್ತೆ ಒಂದು ಪತ್ರ




## ಪೋಸ್ಟರ್ ಬಿಡುಗಡೆ

‘ಕೊನೆಯಪತ್ರ’ ಎಂಬ ಶೀರ್ಷಿಕೆಯೇ ಕುತೂಹಲ ಮೂಡಿಸಿರುವ ಚಿತ್ರ ಇದೀಗ ಎರಡು ವಿಭಿನ್ನ ಮೋಷನ್ ಪೋಸ್ಟರ್‌ಗಳ ಮೂಲಕ ಗಮನ ಸೆಳೆದಿದೆ. ಶ್ರೀ ರೇಣುಕಾಂಬ ಸ್ಟುಡಿಯೋದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಮತಾದೇವರಾಜು, ಡಾಗ್ ಸತೀಶ್ ಸೇರಿದಂತೆ ಹಲವು ಸಿನಿಪಂಡಿತರು ಮೋಷನ್ ಪೋಸ್ಟರ್ ಅನಾವರಣಗೊಳಿಸಿ ಚಿತ್ರತಂಡಕ್ಕೆ ಶುಭ ಹಾರೈಸಿದರು.

ಕೋಸಲ ಕ್ರಿಯೇಟೀವ್ ವರ್ಕ್ಸ್ ಪ್ರೈವೇಟ್ ಲಿಮಿಟೆಡ್ ಬ್ಯಾನರ್‌ನಲ್ಲಿ ರಾಜಕೀಯ ಮುಖಂಡ ಬಿ. ನಾಗರಾಜು ನಿರ್ಮಿಸುತ್ತಿರುವ ಚಿತ್ರಕ್ಕೆ ಭಾರ್ಗವ್ ಬಿ.ವಿ. ಕಥೆ, ಚಿತ್ರಕಥೆ ಬರೆದು ನಿರ್ದೇಶನದ ಜವಾಬ್ದಾರಿ ಹೊತ್ತಿದ್ದಾರೆ. ದಶಕದ ಚಿತ್ರರಂಗದ ಅನುಭವ ಹೊಂದಿರುವ ಭಾರ್ಗವ್ ನಾಯಕನಾಗಿಯೂ ಕಾಣಿಸಿಕೊಳ್ಳುತ್ತಿದ್ದಾರೆ.

ನರಸಾಪುರದ ನರಸಿಂಹ ಎಂಬ ರಗಡ್ ಸ್ವಭಾವದ ವ್ಯಕ್ತಿಯ ಬದುಕಿಗೆ ಬರುವ ಒಂದು ಪತ್ರ ಆತನ ಜೀವನವನ್ನೇ ಹೇಗೆ ಬದಲಿಸುತ್ತದೆ ಎಂಬುದು ಚಿತ್ರದ ಪ್ರಮುಖ ಕಥಾಹಂದರ. ಮಾಸ್ ಅಂಶಗಳೊಂದಿಗೆ ಮೂಡಿಬರುತ್ತಿರುವ ಸಿನಿಮಾ ಎರಡು ಭಾಗಗಳಲ್ಲಿ ತೆರೆಗೆ ಬರಲಿದೆ. ಕನ್ನಡ ಹಾಗೂ ತೆಲುಗಿನಲ್ಲಿ ಪ್ರತ್ಯೇಕವಾಗಿ ಚಿತ್ರೀಕರಣ ನಡೆಸಲು ಚಿತ್ರತಂಡ ಯೋಜಿಸಿದೆ.

ಐರಾ ಮೆನನ್ ಹಾಗೂ ಶಬೀನ ನಾಯಕಿಯರು. ಸಾಯಿ ಕಿಶೋರ್, ವೇದಶ್ರೀ, ಬಲರಾಜವಾಡಿ, ಕಿಲ್ಲಿ ಕ್ರಾಂತಿ, ಚತ್ರಪತಿ ಶೇಖರ್, ಪ್ರೇಮ್ ಸಾಗರ್ ಸೇರಿದಂತೆ ಹಲವರು ತಾರಾಗಣದಲ್ಲಿದ್ದಾರೆ.

ಪೆದ್ದಪಲ್ಲಿ ರೋಹಿತ್ ಸಂಗೀತ, ಆರ್ಯ ಸಾಯಿಕೃಷ್ಣ ಛಾಯಾಗ್ರಹಣ, ಶ್ರೀರಾಮ್ ಸಾಹಸ ಹಾಗೂ ವಿಷ್ಣುವರ್ಧನ್?ಡಾ. ವೆನಿಗಲ್ಲ ರಾಂಬಾಬು ಸಾಹಿತ್ಯ ಚಿತ್ರಕ್ಕಿದೆ. ಹೈದರಾಬಾದ್, ಮಂಗಳೂರು, ಉಡುಪಿ ಹಾಗೂ ಕನಕಪುರದಲ್ಲಿ ಮೂರು ಹಂತಗಳಲ್ಲಿ ಚಿತ್ರೀಕರಣ ನಡೆಯಲಿದೆ. ಡಿಸೆಂಬರ್ ವೇಳೆಗೆ ಚಿತ್ರವನ್ನು ಪ್ರೇಕ್ಷಕರ ಮುಂದಿಡುವ ಯೋಜನೆಯಿದೆ.



# 12 ದಿನಗಳಲ್ಲಿ 3.5 ಮಿಲಿಯನ್ ಡಾಲರ್; ವಿದೇಶದಲ್ಲಿ ‘ಹನುಮಾನ್ ಅಂಶ್’ ದಾಖಲೆ!

ಭಕ್ತಿ ಮತ್ತು ಭಾರತೀಯ ಸಂಸ್ಕೃತಿಯ ಕಥಾನಕವೊಂದು ಗಡಿಗಳನ್ನು ದಾಟಿ ವಿದೇಶಿ ಪ್ರೇಕ್ಷಕರ ಮನಗೆದ್ದಿದೆ. ಸೆಪ್ಟೆಂಬರ್ 11ರಂದು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬಿಡುಗಡೆಯಾದ ‘ಹನುಮಾನ್ ಅಂಶ್’ ಕೇವಲ 12 ದಿನಗಳಲ್ಲಿ 3.5 ಮಿಲಿಯನ್ ಡಾಲರ್‌ಗೂ ಅಧಿಕ ಗಳಿಕೆ ಕಂಡಿದೆ. ಇದರೊಂದಿಗೆ 2026ರಲ್ಲಿ ವಿದೇಶಿ ಮಾರುಕಟ್ಟೆಯಲ್ಲಿ ಅತಿ ಹೆಚ್ಚು ಗಳಿಕೆ ಮಾಡಿದ ಚಿತ್ರಗಳ ಪೈಕಿ ಎರಡನೇ ಸ್ಥಾನ ಪಡೆದಿರುವುದಾಗಿ ಚಿತ್ರತಂಡ ತಿಳಿಸಿದೆ.

ಬಿಡುಗಡೆಯಾದ ದಿನದಿಂದಲೇ ವಿದೇಶಗಳಲ್ಲಿ ಉತ್ತಮ ಪ್ರತಿಕ್ರಿಯೆ ಪಡೆದುಕೊಂಡಿರುವ ಚಿತ್ರ, ಭಕ್ತಿ, ನಂಬಿಕೆ ಹಾಗೂ ಮಹಾರಾಜ್‌ಜಿಯ ಮೌಲ್ಯಗಳನ್ನು ಕೇಂದ್ರವಾಗಿಟ್ಟುಕೊಂಡಿದೆ. ಭಾರತೀಯ ಸಂಸ್ಕೃತಿಯ ನೆಲೆಯಿಂದ ಬಂದ ಕಥೆಯೊಂದು ಅಂತರರಾಷ್ಟ್ರೀಯ ಪ್ರೇಕ್ಷಕರ ಗಮನ ಸೆಳೆದಿರುವುದು ಚಿತ್ರತಂಡದ ಪಾಲಿಗೆ ವಿಶೇಷವಾಗಿದೆ.

ಈ ಯಶಸ್ಸು ಹೋಂಬಾಳೆ ಓವರ್‌ಸೀಸ್‌ನ ಜಾಗತಿಕ ವಿತರಣಾ ಪಯಣಕ್ಕೂ ಮಹತ್ವದ ಮೈಲಿಗಲ್ಲಾಗಿದೆ. ಭಾರತೀಯ ಕಥೆಗಳು, ಸಂಸ್ಕೃತಿ ಹಾಗೂ ಮೌಲ್ಯಗಳನ್ನು ವಿಶ್ವದ ವಿವಿಧ ಭಾಗಗಳಿಗೆ ತಲುಪಿಸುವ ತನ್ನ ಪ್ರಯತ್ನವನ್ನು ಸಂಸ್ಥೆ ಮುಂದುವರಿಸುತ್ತಿದೆ.

ಚಿತ್ರದ ನಿರ್ಮಾಪಕರು, “ಮಹಾರಾಜ್‌ಜಿಯ ಮೌಲ್ಯಗಳನ್ನು ವಿಶ್ವದಾದ್ಯಂತ ತಲುಪಿಸಲು ಹೋಂಬಾಳೆ ಓವರ್‌ಸೀಸ್ ನೀಡಿದ ಅವಕಾಶಕ್ಕೆ ಕೃತಜ್ಞತೆ. ‘ವಿಶ್ವ ಆಯ್ಗಾ’ ಎಂಬ ಮಹಾರಾಜ್‌ಜಿಯ ಮಾತು ಇಂದು ನಿಜವಾಗುತ್ತಿರುವುದನ್ನು ನೋಡುತ್ತಿದ್ದೇವೆ” ಎಂದು ಸಂತಸ ಹಂಚಿಕೊಂಡಿದ್ದಾರೆ.

3.5 ಮಿಲಿಯನ್ ಡಾಲರ್‌ಗೂ ಅಧಿಕ ಗಳಿಕೆಯೊಂದಿಗೆ ‘ಹನುಮಾನ್ ಅಂಶ್’ನ ವಿದೇಶಿ ಪಯಣ ಮುಂದುವರಿದಿದೆ.

# ಪರಿಮಳದ ಹಿಂದೆ ಅಡಗಿರುವ ಬಾಲ್ಯದ ಕಥೆ ‘ಘಮ’!

ಒಂದು ಸೋಪು, ಹಳ್ಳಿಯ ಮುಗ್ಧ ಬಾಲೆ ಮತ್ತು ನೆನಪಾಗಿ ಉಳಿಯುವ ಬಾಲ್ಯದ ಘಟನೆಗಳು? ಇವುಗಳ ಸುತ್ತ ಹೆಣೆದಿರುವ ‘ಘಮ’ ಕಿರುಚಿತ್ರ ಇದೀಗ ಪ್ರೇಕ್ಷಕರ ಮುಂದೆ ಬಂದಿದೆ. ‘ಪರಿಮಳಕ್ಕೆ ಪರವಶ’ ಎಂಬ ಅಡಿಬರಹ ಹೊಂದಿರುವ ಈ 14 ನಿಮಿಷಗಳ ಕಿರುಚಿತ್ರದ ಮೂಲಕ ಕಿರುತೆರೆ ಕಥೆಗಾರ್ತಿ ಎಂ. ವಿದ್ಯಾಲಕ್ಷ್ಮಿ ಪ್ರಹ್ಲಾದ್ ನಿರ್ದೇಶಕಿಯಾಗಿ ಮೊದಲ ಹೆಜ್ಜೆ ಇಟ್ಟಿದ್ದಾರೆ.

## ಕಿರುಚಿತ್ರ ಬಿಡುಗಡೆ

‘ಕುಲವಧು’, ‘ನಮ್ಮನೆ ಯುವರಾಣಿ’, ‘ಪ್ರೇಮಲೋಕ’, ‘ಸೇವಂತಿ ಶಾಂತಂ ಪಾಪಂ’ ಸೇರಿದಂತೆ ಹಲವು ಧಾರಾವಾಹಿಗಳಿಗೆ ಕಥೆ–ಚಿತ್ರಕಥೆ ಬರೆದಿರುವ ವಿದ್ಯಾಲಕ್ಷ್ಮಿ, ತಮ್ಮ ಬಾಲ್ಯದ ಕೆಲವು ಘಟನೆಗಳನ್ನು ಸ್ಫೂರ್ತಿಯಾಗಿಸಿಕೊಂಡು ಈ ಕಥೆ ಕಟ್ಟಿದ್ದಾರೆ. ಶ್ರೀಕೃಷ್ಣ ಪ್ರೊಡಕ್ಷನ್ಸ್ ಲಾಂಛನದಲ್ಲಿ ಆದರ್ಶ ಅಯ್ಯಂಗಾರ್ ನಿರ್ಮಿಸಿರುವ ಕಿರುಚಿತ್ರವನ್ನು ಇತ್ತೀಚೆಗೆ ಜೋಗಿ, ಭಾವನ ಬೆಳಗೆರೆ, ವೀರ್ ಸಮರ್ಥ್ ಹಾಗೂ ಶ್ರೀವಿದ್ಯಾ ರಾಜ್ ಅನಾವರಣಗೊಳಿಸಿದರು. 1990ರ ಕಾಲಘಟ್ಟದ ಸೊಗಡನ್ನು ಮರುಸೃಷ್ಟಿಸಿ ನಾಲ್ಕು ದಿನಗಳ ಕಾಲ ಮಲೆನಾಡಿನಲ್ಲಿ ಚಿತ್ರೀಕರಿಸಲಾಗಿದೆ. ಶಾಂತಿ ಸಾಗರ್ ಛಾಯಾಗ್ರಹಣ, ಸ್ಥಳದಲ್ಲೇ ಸಿಂಕ್ ಸೌಂಡ್ ಸೇರಿದಂತೆ ತಾಂತ್ರಿಕ ಗುಣಮಟ್ಟಕ್ಕೆ ಒತ್ತು ನೀಡಲಾಗಿದೆ.

ಆದರ್ಶ ಅಯ್ಯಂಗಾರ್, ಅರ್ಪಿತಾ ಮೋಹಿತೆ, ವಜ್ರ ಭಾರ್ಗವಿ, ಪ್ರಜ್ಞಾ ಶೆಟ್ಟಿ ಹಾಗೂ ಫಾತಿಮಾ ನಟಿಸಿದ್ದಾರೆ. ನಿರ್ದೇಶನದಲ್ಲಿ ರಕ್ಷಿತ್ ತೀರ್ಥಹಳ್ಳಿ ಅವರ ಮಾರ್ಗದರ್ಶನ ಪಡೆದಿರುವುದಾಗಿ ವಿದ್ಯಾಲಕ್ಷ್ಮಿ ತಿಳಿಸಿದ್ದಾರೆ. ಚಿತ್ರದ ಶೀರ್ಷಿಕೆಯನ್ನು ತಮ್ಮ ಮಗಳು ಗೌರಿ ಮನೋಹರಿ ಸೂಚಿಸಿದ್ದಾರೆ.



# ಜೈಲಿನಿಂದ ಹೊರಬಂದ ಯುವಕನ ಬದುಕಿನ ಹೋರಾಟ!

ಗ್ರಾಮೀಣ ಬದುಕು, ಸ್ನೇಹಿತರ ಸಹವಾಸ, ಕೊಲೆ ಪ್ರಕರಣ ಹಾಗೂ ಹಣದ ಹಿಂದೆ ಓಡುವ ಸಂಬಂಧಗಳ ನಡುವಿನ ಸಂಘರ್ಷವನ್ನು ಒಳಗೊಂಡಿರುವ ‘ಅನಂತರ ಈ ಕಿಸ್ಸಾನ್ ಟಿವಿ–2’ ಚಿತ್ರ ಬಿಡುಗಡೆಗೆ ಸಜ್ಜಾಗಿದೆ. ಡಿ. ತ್ರಿಲೋಕ್ ಚಂದರ್ ನಿರ್ದೇಶಿಸಿ, ತರು ಫಿಲಂ ಅಕಾಡೆಮಿ ಬ್ಯಾನರ್‌ನಲ್ಲಿ ನಿರ್ಮಿಸಿರುವ ಚಿತ್ರದ ಟ್ರೈಲರ್ ಇತ್ತೀಚೆಗೆ ಬಿಡುಗಡೆಯಾಯಿತು.



## ಟ್ರೈಲರ್ ಬಿಡುಗಡೆ

ಪೀಣ್ಯದಲ್ಲಿ ಉದ್ಯಮ ನಡೆಸುತ್ತಿರುವ ತ್ರಿಲೋಕ್ ಚಂದರ್, ಸಿನಿಮಾ ನಿರ್ಮಾಣದ ಜತೆಗೆ ನಿರ್ದೇಶನದ ಜವಾಬ್ದಾರಿಯನ್ನೂ ಹೊತ್ತಿದ್ದಾರೆ. ಮುಗ್ಧ ಹಳ್ಳಿಯ ಯುವಕನೊಬ್ಬ ಸ್ನೇಹಿತರ ಸಹವಾಸದಿಂದ ಕೊಲೆ ಪ್ರಕರಣದಲ್ಲಿ ಸಿಲುಕಿ ಜೈಲು ಸೇರುತ್ತಾನೆ. ಜೈಲಿನಿಂದ ಹೊರಬಂದ ಬಳಿಕ ಹಣಕ್ಕೆ ಹೆಚ್ಚಿನ ಬೆಲೆ ನೀಡುವ ಸಂಬಂಧಿಕರು ಹಾಗೂ ಸಮಾಜದ ನಡುವೆ ಆತ ಎದುರಿಸುವ ಸವಾಲುಗಳೇ ಚಿತ್ರದ ಕಥಾಹಂದರ.

ಯೋಗೇಶ್ ಗೌಡ ನಾಯಕನಾಗಿ, ಯಶಸ್ವಿನಿ, ರಮ್ಯ ಹಾಗೂ ಸುಧಾ ನಾಯಕಿಯರಾಗಿ ನಟಿಸಿದ್ದಾರೆ. ಪವನ್ ಚಾರಿ, ವಾತ್ಸಲ್ಯ, ಮುರಳಿ ಕೃಷ್ಣ, ವಿಜಯಾ ಸೇರಿದಂತೆ ಹಲವರು ತಾರಾಗಣದಲ್ಲಿದ್ದಾರೆ. ಸೃಜನ್ ಮತ್ತು ಸುಹಾಸ್ ಛಾಯಾಗ್ರಹಣ ನಿರ್ವಹಿಸಿದ್ದು, ಜೆವಿನ್ಸನ್ ಲೆವಿಸ್ ಸಂಗೀತ ಸಂಯೋಜನೆ ಹಾಗೂ ಸಂಕಲನದ ಜವಾಬ್ದಾರಿ ವಹಿಸಿದ್ದಾರೆ.

ರೈತರು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಸ್ಟಾರ್ಟಪ್ ಉದ್ಯಮಿಗಳಿಗೆ ಸಂದೇಶ ನೀಡುವ ಉದ್ದೇಶವೂ ಚಿತ್ರದಲ್ಲಿದೆ ಎಂದು ತ್ರಿಲೋಕ್ ಚಂದರ್ ತಿಳಿಸಿದ್ದಾರೆ. ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ತಮಗೆ ನಾಯಕನಾಗುವ ಅವಕಾಶ ಸಿಕ್ಕಿರುವುದು ಸಂತಸ ತಂದಿದೆ ಎಂದು ಯೋಗೇಶ್ ಗೌಡ ಹೇಳಿದ್ದಾರೆ.

# ವೀರಭದ್ರನ ಇತಿಹಾಸ ಹೇಳುವ ‘ರುದ್ರಾಭಿಷೇಕಂ’

ವೀರಗಾಸೆ ಸೇರಿದಂತೆ ನಾಡಿನ ಜನಪದ ಕಲೆ, ಸಾಂಸ್ಕೃತಿಕ ಪರಂಪರೆ ಹಾಗೂ ವೀರಭದ್ರ ದೇವರ ಇತಿಹಾಸವನ್ನು ತೆರೆಗೆ ತರುತ್ತಿರುವ ‘ರುದ್ರಾಭಿಷೇಕಂ’ ಚಿತ್ರ ಸೆಪ್ಟೆಂಬರ್ 25ರಂದು ರಾಜ್ಯಾದ್ಯಂತ ನೂರಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿದೆ. ವಸಂತ್ ಕುಮಾರ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶಿಸಿರುವ ಚಿತ್ರದಲ್ಲಿ ವಿಜಯ ರಾಘವೇಂದ್ರ ಹಾಗೂ ಪ್ರಿಯಾಂಕಾ ತಿಮ್ಮೇಶ್ ದ್ವಿಪಾತ್ರದಲ್ಲಿ ನಟಿಸಿದ್ದಾರೆ. ವಿಜಯ ರಾಘವೇಂದ್ರ ಮೊದಲ ಬಾರಿಗೆ ತಂದೆ–ಮಗನಾಗಿ ಕಾಣಿಸಿಕೊಂಡರೆ, ಪ್ರಿಯಾಂಕಾ ತಿಮ್ಮೇಶ್ ಹಳ್ಳಿಯ ಶಿವಭಕ್ತೆ ಹಾಗೂ ನಗರ ಯುವತಿಯ ಪಾತ್ರ ನಿರ್ವಹಿಸಿದ್ದಾರೆ. ಬಲ ರಾಜವಾಡಿ ಗೌಡರ ಪಾತ್ರದಲ್ಲಿದ್ದಾರೆ. ಫ್ಯಾನ್ ಇಂಡಿಯಾ ಕ್ರಿಯೇಶನ್ಸ್‌ನ ಮೊದಲ ಚಿತ್ರ ಇದಾಗಿದ್ದು, ಮಂಜುನಾಥ ಕೆ.ಎನ್., ಎನ್. ಜಯರಾಮಪ್ಪ, ಕೆ. ವೆಂಕಟೇಶ್, ಬಿ. ಚಿದಾನಂದಮೂರ್ತಿ ಸೇರಿದಂತೆ ಒಂಬತ್ತು ಮಂದಿ ನಿರ್ಮಾಪಕರು ಬಂಡವಾಳ ಹೂಡಿದ್ದಾರೆ.



ವೀರಭದ್ರ ದೇವರು ಹೇಗೆ ಅವತರಿಸಿದ, ಆ ಅವತಾರಕ್ಕೆ ಕಾರಣವೇನು ಎಂಬುದೇ ಚಿತ್ರದ ಕಥೆಯ ಪ್ರಮುಖ ಎಳೆ. ದೈವದ ಹಿನ್ನೆಲೆಯ ಜನಪದ ಕಲೆಯನ್ನು ಮನೆಮನೆಗೂ ತಲುಪಿಸುವ ಉದ್ದೇಶದಿಂದ ಚಿತ್ರ ರೂಪಿಸಲಾಗಿದೆ ಎನ್ನುತ್ತಾರೆ ನಿರ್ದೇಶಕರು. ದೇವನಹಳ್ಳಿ, ಗೋಕರ್ಣ, ಹೊನ್ನಾವರ, ಕುಮಟಾ, ಅಬ್ಬಕ್ಕ ಫೋರ್ಟ್ ಹಾಗೂ ಅಘನಾಶಿನಿ ಹಿನ್ನೀರಿನ ಅಪರೂಪದ ತಾಣಗಳಲ್ಲಿ ಚಿತ್ರೀಕರಣ ನಡೆದಿದೆ. ವಿ. ಮನೋಹರ್ ಸಂಗೀತ, ಮುತ್ತುರಾಜ್ ಛಾಯಾಗ್ರಹಣ ಚಿತ್ರಕ್ಕಿದೆ. ವಿ. ಮನೋಹರ್, ಮನು, ಸನತ್, ಬುಲೆಟ್ ವಿನು, ಮಮತಾ ತುರುವೇಕೆರೆ, ನವನಿತಾ ಶೆಟ್ಟಿ, ಮಂಜುಳಾ ಪ್ರಮುಖ ಪಾತ್ರಗಳಲ್ಲಿದ್ದಾರೆ.

# ಖಳನಾಗಿ ‘ಸ್ಪಾರ್ಕ್’ ಹೊತ್ತಿಸಲಿರುವ ನವನಟ ಅಭಯ್ ವಸಿಷ್ಠ!

ನಾಯಕನಾಗಿ ಗುರುತಿಸಿಕೊಳ್ಳುವ ಅವಕಾಶವಿದ್ದರೂ ಖಳನ ಪಾತ್ರದ ಮೂಲಕ ಕನ್ನಡ ಚಿತ್ರರಂಗ–ಕ್ಕೆ ಕಾಲಿಡುತ್ತಿದ್ದಾರೆ ನಿರ್ಮಾಪಕರ ಪುತ್ರ ಅಭಯ್ ವಸಿಷ್ಠ. ನಿರಂಜನ್ ಸುಧೀಂದ್ರ ಅಭಿನಯದ ‘ಸ್ಪಾರ್ಕ್’ ಚಿತ್ರದ ಮೂಲಕ ಅವರು ಬೆಳ್ಳಿತೆರೆಗೆ ಪರಿಚಯವಾಗುತ್ತಿದ್ದು, ಸೆಪ್ಟೆಂಬರ್ 25ರಂದು ಚಿತ್ರ ರಾಜ್ಯಾದ್ಯಂತ ತೆರೆಗೆ ಬರಲಿದೆ.

## ಟ್ರೈಲರ್ ಬಿಡುಗಡೆ




ಇತ್ತೀಚೆಗೆ ಉಪೇಂದ್ರ ಅವರು ಗದಗದಲ್ಲಿ ಬಿಡುಗಡೆ ಮಾಡಿದ್ದ ಚಿತ್ರದ ಟ್ರೇಲರ್‌ನ್ನು ಬೆಂಗಳೂರಿನಲ್ಲಿ ಮಾಧ್ಯಮದ ಮುಂದೆ ಪ್ರದರ್ಶಿಸಿದ ಚಿತ್ರತಂಡ, ಅಭಯ್ ಅವರನ್ನು ಪರಿಚಯಿಸಿತು. ಗರಿಮಾ ಹಾಗೂ ಅವಿನಾಶ್ ವಸಿಷ್ಠ ನಿರ್ಮಿಸಿರುವ ಚಿತ್ರದಲ್ಲಿ ಅಭಯ್ ಖಳನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ವಿದೇಶದಲ್ಲೇ ಹುಟ್ಟಿ ಬೆಳೆದಿರುವ ಅಭಯ್‌ಗೆ ಕನ್ನಡ ಭಾಷೆಯ ಪರಿಚಯ ಕಡಿಮೆ. ವಿದೇಶಿ ರಂಗಭೂಮಿಯ ಅನುಭವ ಹೊಂದಿರುವ ಅವರು, ಸದ್ಯ ಖಳನ ಪಾತ್ರವನ್ನು ಸವಾಲಾಗಿ ಸ್ವೀಕರಿಸಿದ್ದಾರೆ. ಮುಂದೆ ಕನ್ನಡ ಭಾಷೆ ಹಾಗೂ ಚಿತ್ರರಂಗವನ್ನು ಕಲಿತು ನಾಯಕನಾಗುವ ಕನಸನ್ನೂ ಹಂಚಿಕೊಂಡರು.

ಅಭಯ್ ಅವರ ಎತ್ತರ ಹಾಗೂ ದೇಹದಾಕೃತಿ ಆಯಕ್ಷನ್ ದೃಶ್ಯಗಳಿಗೆ ಸೂಕ್ತವಾಗಿತ್ತು ಎಂದು ನಿರಂಜನ್ ಸುಧೀಂದ್ರ ಮೆಚ್ಚುಗೆ ವ್ಯಕ್ತಪಡಿಸಿದರು. ಭ್ರಷ್ಟಾಚಾರದ ವಿರುದ್ಧದ ಕಥೆಯನ್ನು ಮನರಂಜನೆಯೊಂದಿಗೆ ಕಟ್ಟಿಕೊಡಲಾಗಿದೆ ಎಂದರು.

ಮಹಾಂತೇಶ್ ಹಂದ್ರಾಳ್ ನಿರ್ದೇಶನದ ಚಿತ್ರದಲ್ಲಿ ಲವ್ಲಿ ಸ್ಟಾರ್ ಪ್ರೇಮ್ ಮೊದಲ ಬಾರಿಗೆ ಖಳನಾಗಿ ಕಾಣಿಸಿಕೊಂಡಿದ್ದಾರೆ. ಭ್ರಷ್ಟ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ನಟಿಸಿರುವ ಅವರು, ಹೊಸಬರ ತಂಡದೊಂದಿಗೆ ಸಿನಿಮಾ ಮಾಡಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಧರ್ಮಣ್ಣ ಕಡೂರು ಪತ್ರಕರ್ತನ ಪಾತ್ರದಲ್ಲಿ ನಗಿಸಲಿದ್ದಾರೆ.

ಸಂಜೆವಾಣಿ
ಬೆಂಗಳೂರು । ಜಾಹೀರಾತಿಗಾಗಿ ಸಂಪರ್ಕಿಸಿ - 94498 71825
contact@sanjevani.com



ನಗರದ ಅಶೋಕ ನಗರದಲ್ಲಿ ಸ್ಫೂರ್ತಿಯಲ್ಲಿ ಇಂದು ನಡೆದ 3ನೇ ರಾಷ್ಟ್ರೀಯ ಮಹಿಳಾ ಸಮ್ಮೇಳನವನ್ನು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್‌ರವರು ಉದ್ಘಾಟಿಸಿದರು. ಎಡಿಜಿಪಿ ರ‍್ಯಾಂಕ್‌ನ ಪೊಲೀಸ್ ಅಧಿಕಾರಿಗಳು ಇದ್ದಾರೆ.

# ವಾಯುಭಾರ ಕುಸಿತ: ಹಲವೆಡೆ ಮಳೆ ನಿರೀಕ್ಷೆ

ಬೆಂಗಳೂರು,ಸೆ.24– ರಾಜ್ಯದಲ್ಲಿ ವಾಯುಭಾರಕುಸಿತದಪ್ರಭಾವದಿಂದಾಗಿ ಮಳೆ ಮುಖಾಂತರ ಮತ್ತಷ್ಟು ಚುರುಕುಗೊಂಡಿದ್ದು, ವಿವಿಧ ಜಿಲ್ಲೆಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಗುಡುಗು ಸಹಿತ ಭಾರೀ ಮಳೆಯಾಗಲಿದ್ದು, ಬಿರುಗಾಳಿ ಬೀಸುವ ಎಚ್ಚರಿಕೆ ನೀಡಲಾಗಿದೆ. ಇದಲ್ಲದೆ, ಈ ಜಿಲ್ಲೆಗಳ ಬಹುತೇಕ ಭಾಗಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಒಳನಾಡಿನ ಕಲಬುರಗಿ, ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿಯೂ ಬಿರುಗಾಳಿ ಸಹಿತ ಭಾರಿ ಮಳೆಯಾಗುವ ಮುನ್ಸೂಚನೆ ಇದ್ದರೆ, ಬಾಗಲಕೋಟೆ, ಹಾವೇರಿ, ಧಾರವಾಡ, ಕೊಪ್ಪಳ, ವಿಜಯಪುರ ಹಾಗೂ ಗದಗ ಜಿಲ್ಲೆಗಳ ಹಲವೆಡೆ ಸಾಧಾರಣ ಮಳೆಯಾಗಲಿದೆ.

ಕಳೆದ 24 ಗಂಟೆಗಳಲ್ಲಿ ರಾಜ್ಯದ ಹಲವೆಡೆ ಉತ್ತಮ ಮಳೆಯಾಗಿದ್ದು, ಉತ್ತರಕನ್ನಡ ಜಿಲ್ಲೆಯ ಅಂಕೋಲಾದಲ್ಲಿ ಗರಿಷ್ಠ 12 ಸೆಂ.ಮೀ ನಷ್ಟು ಭಾರಿ ಮಳೆ ದಾಖಲಾಗಿದೆ. ಗೋಕರ್ಣ ಮತ್ತು ಯಾದಗಿರಿಯ ಶಹಪುರದಲ್ಲಿ ತಲಾ 6 ಸೆಂ.ಮೀ ಮಳೆಯಾಗಿದ್ದರೆ, ಬಳ್ಳಾರಿ, ಬಾಗಲಕೋಟೆ, ಕೊಪ್ಪಳ, ಬೀದರ್, ರಾಯಚೂರು, ಬೆಳಗಾವಿ, ವಿಜಯಪುರ ಹಾಗೂ ಕಲಬುರ್ಗಿ ಜಿಲ್ಲೆಗಳ ವಿವಿಧ ಭಾಗಗಳಲ್ಲಿಯೂ ವ್ಯಾಪಕ ಮಳೆಯಾಗಿದೆ. ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಕೊಡಗು, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿಯೂ ಗುಡುಗು ಹಾಗೂ ಬಿರುಗಾಳಿ ಸಹಿತ ಭಾರೀ ಮಳೆಯಾಗುವ ಲಕ್ಷಣಗಳಿದ್ದರೆ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಕೋಲಾರ, ಮೈಸೂರು, ರಾಮನಗರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮಳೆಯ ತೀವ್ರತೆಗೆ ಅನುಗುಣವಾಗಿ ಹವಾಮಾನ ಇಲಾಖೆಯು ಮುನ್ನೆಚ್ಚರಿಕೆ ಕ್ರಮಗಳನ್ನು ಪ್ರಕಟಿಸಿದೆ. ಉತ್ತರ ಕನ್ನಡ ಜಿಲ್ಲೆಗೆ ನಿನ್ನೆಯಿಂದ ಇಂದು ಬೆಳಗಿನವರೆಗೆ ನೀಡಲಾಗಿದ್ದ 'ಆರೆಂಜ್ ಅಲರ್ಟ್' ಅವಧಿ ಮುಕ್ತಾಯಗೊಂಡಿದ್ದು, ಪ್ರಸ್ತುತ ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಬೆಳಗಾವಿ, ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಹಾಗೂ ಹಾಸನ ಜಿಲ್ಲೆಗಳಿಗೆ 'ಯೆಲ್ಲೋ ಅಲರ್ಟ್' ಘೋಷಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ ಮುಂಗಾರು ಮಳೆ ತೀವ್ರ ಕ್ಷೀಣಿಸಿದ್ದರಿಂದ ರಾಜ್ಯಾದ್ಯಂತ ತೀವ್ರ ಬರ ಪರಿಸ್ಥಿತಿ ನಿರ್ಮಾಣವಾಗಿದೆ.




ಕೃಷಿ ಚಟುವಟಿಕೆಗಳು ಸಂಪೂರ್ಣ ವಿಫಲಗೊಂಡಿದ್ದು, ವೈಜ್ಞಾನಿಕ ಮೌಲ್ಯಮಾಪನದ ಆಧಾರದ ಮೇಲೆ ರಾಜ್ಯ ಸರ್ಕಾರವು ಒಟ್ಟು 188 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಿದೆ. ಹಂತ ಹಂತವಾಗಿ ಕ್ರಮವಾಗಿ 101, 23 ಮತ್ತು 53 ತಾಲೂಕುಗಳನ್ನು ಬರಪೀಡಿತ ಪಟ್ಟಿಗೆ ಸೇರಿಸಲಾಗಿದೆ. ಪ್ರಸ್ತುತ ರಾಜ್ಯದಲ್ಲಿ ಮಳೆ ಚುರುಕುಗೊಂಡಿದೆಯಾದರೂ, ಮುಂಗಾರು ಆಧಾರಿತ ಬೆಳೆಗಳು ಈಗಾಗಲೇ ನಾಶವಾಗಿರುವುದರಿಂದ ಈ ಮಳೆಯಿಂದ ರೈತರಿಗೆ ಯಾವುದೇ ಹೆಚ್ಚಿನ ಪ್ರಯೋಜನವಾಗುತ್ತಿಲ್ಲ ಎಂಬ ಆತಂಕ ಎದುರಾಗಿದೆ.

# ಭೀಕರ ಅಪಘಾತ: ಸಚಿವೆ ದೀಪಿಕಾ ಪುತ್ರಿ ಸೇರಿ ನಾಲ್ವರ ಸಾವು



ಜೆವಮ್‌ಶೆಡ್‌ಪುರ,ಸೆ.24– ಜಾರ್ಖಂಡ್‌ನ ಜೆಮ್‌ಶೆಡ್‌ಪುರದಲ್ಲಿ ಗುರುವಾರ ಮುಂಜಾನೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವೆ ದೀಪಿಕಾ ಪಾಂಡೆ ಸಿಂಗ್ ಅವರ ಪುತ್ರಿ ತ್ರಿಶಾ ಸಿಂಗ್ ಸೇರಿದಂತೆ ನಾಲ್ವರು ಸ್ಥಳದಲ್ಲೇ ಪ್ರಾಣ ಕಳೆದುಕೊಂಡಿದ್ದಾರೆ.

ಸೋನಾರಿ ಪೊಲೀಸ್ ಠಾಣೆ ವ್ಯಾಪ್ತಿಯ ಡೊಮುಖಾನಿ ಮೆರೈನ್ ಡ್ರೈವ್ ಬಳಿ ಈ ದುರಂತ ಸಂಭವಿಸಿದೆ. ಬುಧವಾರ ರಾತ್ರಿ ಸುಮಾರು ಹತ್ತು ಗಂಟೆಗೆ ತಾಂತ್ರಿಕ ದೋಷದಿಂದ ಕೆಟ್ಟು ರಸ್ತೆಬದಿಯಲ್ಲಿ ನಿಂತಿದ್ದ ಭಾರೀ ಗಾತ್ರದ ಟ್ರಕ್ ಒಂದಕ್ಕೆ, ವೇಗವಾಗಿ ಬಂದ ಕಾರು ನಿಯಂತ್ರಣ ತಪ್ಪಿ ಹಿಂಭಾಗದಿಂದ ರಭಸವಾಗಿ ಡಿಕ್ಕಿ ಹೊಡೆದಿದೆ.

**ಗ್ಯಾಸ್ ಕಟ್ಟರ್ ಬಳಸಿ ಶವಗಳ ಹೊರತೆಗೆಯುವಿಕೆ**

ಡಿಕ್ಕಿಯ ತೀವ್ರತೆಗೆ ಕಾರಿನ ಮುಂಭಾಗ ಸಂಪೂರ್ಣವಾಗಿ ನಜ್ಜುಗುಜ್ಜಾಗಿದ್ದು, ಟ್ರಕ್‌ನ ಹಿಂಭಾಗದಲ್ಲಿ ಬಿಗಿಯಾಗಿ ಸಿಲುಕಿಕೊಂಡಿತ್ತು. ವಿಷಯ ತಿಳಿದ ತಕ್ಷಣ ಸ್ಥಳಕ್ಕೆ ಆಗಮಿಸಿದ ಪೊಲೀಸರು ಮತ್ತು ರಕ್ಷಣಾ ಪಡೆಗಳು ಗ್ಯಾಸ್ ಕಟ್ಟರ್ ಬಳಸಿ ಕಾರಿನ ಭಾಗಗಳನ್ನು ಕತ್ತರಿಸಿ ಸವಾರಿ ಮಾಡುತ್ತಿದ್ದವರ ದೇಹಗಳನ್ನು ಹೊರತೆಗೆದಿದ್ದಾರೆ.

ಮೃತರನ್ನು ತ್ರಿಶಾ ಸಿಂಗ್, ಸಾರ್ಥಕ್ ಅಗರ್ವಾಲ್, ನಮನ್ ಗುಪ್ತಾ ಮತ್ತು ವಂಶಿಕಾ ಖಂಡೇಲ್ವಾಲ್ ಎಂದು ಗುರುತಿಸಲಾಗಿದೆ.

**ಮುಖ್ಯಮಂತ್ರಿ ಹೇಮಂತ್ ಸೊರೇನ್ ಕಂಬನಿ**

ಈ ಹೃದಯವಿದ್ರಾವಕ ಘಟನೆಗೆ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ. ಜೆಮ್‌ಶೆಡ್‌ಪುರದ ರಸ್ತೆ ಅಪಘಾತದಲ್ಲಿ ಸಹೋದ್ಯೋಗಿ ಸಚಿವೆ ದೀಪಿಕಾ ಪಾಂಡೆ ಸಿಂಗ್ ಅವರ ಪುತ್ರಿ ಮತ್ತು ಇತರರು ಸಾವನ್ನಪ್ಪಿದ ಸುದ್ದಿ ಕೇಳಿ ತೀವ್ರ ಆಘಾತವಾಗಿದೆ. ಮಗುವನ್ನು ಕಳೆದುಕೊಳ್ಳುವ ನೋವು ಯಾವುದೇ ಹೆತ್ತವರಿಗೆ ತಡೆದುಕೊಳ್ಳಲಾಗದಂತಹದ್ದು. ಈ ಕಷ್ಟದ ಸಮಯದಲ್ಲಿ ದೀಪಿಕಾ ಜಿ ಮತ್ತು ಮೃತರ ಕುಟುಂಬಸ್ಥರಿಗೆ ನನ್ನ ಆಳವಾದ ಸಂತಾಪಗಳು ಎಂದು ಅವರು ಸಾಮಾಜಿಕ ಜಾಲತಾಣದಲ್ಲಿ ಸಂತಾಪ ಸೂಚಿಸಿದ್ದಾರೆ.



ವಿಧಾನಸಭೆ ಅಧಿವೇಶನದ ಕಾರ್ಯಕಲಾಪಗಳನ್ನು ವೀಕ್ಷಿಸುತ್ತಿರುವ ನಗರದ ಶಾಲೆಯೊಂದರ ವಿದ್ಯಾರ್ಥಿ–ವಿದ್ಯಾರ್ಥಿನಿಯರು.




ಪೌರ ಕಾರ್ಮಿಕರ ದಿನಾಚರಣೆಯ ಪ್ರಯುಕ್ತ ಸ್ವಚ್ಛತಾ ಕಾರ್ಯದಲ್ಲಿ ತೊಡಗಿ ಎಲ್ಲರ ಆರೋಗ್ಯ ರಕ್ಷಣೆ ಮಾಡುತ್ತಿರುವ ಅಶೋಕ ಪಿಲ್ಲರ್ ವಾರ್ಡ್‌ನ ಮಹಿಳಾ ಪೌರಕಾರ್ಮಿಕರಿಗೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ, ಅಶೋಕ ಪಿಲ್ಲರ್ ವಾರ್ಡ್‌ನ ಮುಖಂಡರಾದ ಎಂ. ಉದಯಶಂಕರ್ ರವರು ಸಿಹಿ ವಿತರಣೆ ಮಾಡಿ ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ಮುಖಂಡರಾದ ಗೋಪಾಲಕೃಷ್ಣ, ಬಸವರಾಜ್, ಶ್ರೀನಿವಾಸ್ ಇದ್ದಾರೆ.

# ನಾಳೆ ಹಿಂದೂ ಮಹಾಸಭಾ ಗಣಪತಿ ವಿಸರ್ಜನೆ : ಬಿಗಿ ಭದ್ರತೆ

ಶಿವಮೊಗ್ಗ, ಸೆ.24: ನಗರದಲ್ಲಿ ನಾಳೆ ಹಿಂದೂ ಮಹಾಸಭಾ ಗಣಪತಿ ವಿಸರ್ಜನಾ ಮೆರವಣಿಗೆ ಇರುವ ಹಿನ್ನೆಲೆ ಸಂಚಾರ ವ್ಯವಸ್ಥೆ ಸುಗಮಗೊಳಿಸುವ ನಿಟ್ಟಿನಲ್ಲಿ ವಾಹನಗಳ ಸಂಚಾರ ನಿಷೇಧ, ನಿಲುಗಡೆ ಹಾಗೂ ವಾಹನಗಳಿಗೆ ಮಾರ್ಗ ಬದಲಾವಣೆ ಮಾಡಿ ಜಿಲ್ಲಾಧಿಕಾರಿಗಳಾದ ಪ್ರಭುಲಿಂಗ ಕವಳಿಕಟ್ಟಿ ಕೆಳಕಂಡಂತೆ ತಾತ್ಕಾಲಿಕ ಅಧಿಸೂಚನೆ ಹೊರಡಿಸಿದ್ದಾರೆ. ಮುನ್ನೆಚ್ಚರಿಕೆ ಕ್ರಮವಾಗಿ ಬಿಗಿ ಭದ್ರತೆ ಕೈಗೊಳ್ಳಲಾಗಿದೆ.

ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೂ ಸಂಚಾರ ವ್ಯವಸ್ಥೆ ಸುಗಮಗೊಳಿಸುವ ನಿಟ್ಟಿನಲ್ಲಿ ಮೋಟಾರು ವಾಹನ ಕಾಯ್ದೆ 1988 ಕಲಂ 116 & 117 ರ ಅನ್ವಯ ಅಂದು ಬೆಳಿಗ್ಗೆ 6 ರಿಂದ ರಾತ್ರಿ 12 ಗಂಟೆವರೆಗೆ ವಾಹನ ಸಂಚಾರ ನಿಷೇಧ, ನಿಲುಗಡೆ ಮತ್ತು ಮಾರ್ಗ ಬದಲಾವಣೆ ಮಾಡಲಾಗಿದೆ.

ಸೆ.25ರಂದು ಹಿಂದೂ ಮಹಾಸಭಾ ಗಣಪತಿ ವಿಸರ್ಜನಾ ಮೆರವಣಿಗೆಯು ಭೀಮೇಶ್ವರ ದೇವಸ್ಥಾನದಿಂದ ಪ್ರಾರಂಭವಾಗಿ–ಎನ್ ಟಿ ಎಂ ಮುಖ್ಯ ರಸ್ತೆ–ರಾಮಣ್ಣಶ್ರೇಷ್ಠಿ ಪಾರ್ಕ್–ಗಾಂಧಿ ಬಜಾರ್ ಮುಖ್ಯ ರಸ್ತೆ, ಎಸ್ ಎನ್ ಸರ್ಕಲ್–ಎ.ಎ.ಸರ್ಕಲ್–ನೆಹರು ರಸ್ತೆ–ಗೋಪಿ ಸರ್ಕಲ್–ದುರ್ಗಿಗುಡಿ ಮಾರ್ಗವಾಗಿ ಮಹಾವೀರ ಸರ್ಕಲ್ – ಡಿವಿಎಸ್ ಸರ್ಕಲ್ ?ಕಾನ್ವೆಂಟ್ ರಸ್ತೆ – ಕೋಟೆ ರಸ್ತೆ ಮಾರ್ಗವಾಗಿ ಭೀಮೇಶ್ವರ ದೇವಸ್ಥಾನದ ಹತ್ತಿರ ತುಂಗಾ ನದಿಯಲ್ಲಿ ವಿಸರ್ಜನೆ ಮಾಡಲಾಗುವುದು. ಮೆರವಣಿಗೆ ಮಾರ್ಗದಲ್ಲಿ ಮತ್ತು ಮಾರ್ಗದ ಸುತ್ತಮುತ್ತ 100 ಮೀಟರ್ ಅಂತರದಲ್ಲಿ ಎಲ್ಲಾ ವಾಹನಗಳ ಸಂಚಾರ ಹಾಗೂ ನಿಲುಗಡೆಯನ್ನು ನಿಷೇಧಿಸಲಾಗಿದೆ.

ಬೆಂಗಳೂರು ಭದ್ರಾವತಿ, ಎನ್ ಆರ್ ಪುರ ಕಡೆಯಿಂದ ಬರುವ ಎಲ್ಲಾ ಭಾರೀ ವಾಹನ ಮತ್ತು ಎಲ್ಲಾ ಬಸ್‌ಗಳು/ಸಿಟಿ ಬಸ್‌ಗಳು ಹಾಗೂ ಕಾರು ವಾಹನಗಳು ಎಂಆರ್‌ಎಸ್ ಸರ್ಕಲ್‌ನಿಂದ ಬೈಪಾಸ್ ರಸ್ತೆ ಮುಖಾಂತರವಾಗಿ ಹೋಗುವುದು.

ಚಿತ್ರದುರ್ಗ ಹೊಳೆಹೊನ್ನೂರಿನಿಂದ ಬರುವ ಮತ್ತು ಹೋಗುವ ಎಲ್ಲಾ ಭಾರೀ ವಾಹನ ಮತ್ತು ಬಸ್ ಗಳು ಎಂ.ಆರ್.ಎಸ್ ಸರ್ಕಲ್ ಮಾರ್ಗವಾಗಿ ಬೈಪಾಸ್ ರಸ್ತೆ ಮುಖಾಂತರವಾಗಿ ಹೋಗುವುದು.

ಹೊನ್ನಾಳಿ ಹರಿಹರ, ದಾವಣಗೆರೆಯಿಂದ ಬರುವ ಮತ್ತು ಹೋಗುವ ಎಲ್ಲಾ ಭಾರೀ ವಾಹನ ಮತ್ತು ಬಸ್‌ಗಳು ಸಂಗೊಳ್ಳಿರಾಯಣ್ಣ ಸರ್ಕಲ್, ಶಂಕರಮಠ ಸರ್ಕಲ್ ಹೊಳೆಹೊನ್ನೂರು ಸರ್ಕಲ್, ವಿದ್ಯಾನಗರದ ಎಂ.ಆರ್.ಎಸ್. ಸರ್ಕಲ್ ಮಾರ್ಗವಾಗಿ ಬೈಪಾಸ್ ರಸ್ತೆ ಮುಖಾಂತರ ಹೋಗುವುದು.

ಕೆಎಸ್‌ಆರ್‌ಟಿಸಿ ಮತ್ತು ಖಾಸಗಿ ಬಸ್ ನಿಲ್ದಾಣದಿಂದ ಹೊನ್ನಾಳಿ, ಶಿಕಾರಿಪುರ, ಸೊರಬ, ಹರಿಹರ, ದಾವಣಗೆರೆ ಹೋಗುವ ಎಲ್ಲಾ ಬಸ್‌ಗಳು ಮತ್ತು ಭಾರೀ ಸರಕು ವಾಹನಗಳು ಸಾಗರ ರಸ್ತೆ ಮುಖಾಂತರವಾಗಿ ಹೆಲಿಪ್ಯಾಡ್ ಸರ್ಕಲ್–ಆಲ್ಕೋಳ ಸರ್ಕಲ್–ಪೊಲೀಸ್ ಚೌಕಿ–ರಾಜ್ ಕುಮಾರ್ ಸರ್ಕಲ್–ಬೊಮ್ಮನಕಟ್ಟೆ–ಸವಳಂಗ ರಸ್ತೆ ಮುಖಾಂತರ ಹೋಗುವುದು.

ಕೆ.ಎಸ್.ಆರ್.ಟಿ.ಸಿ ಮತ್ತು ಖಾಸಗಿ ಬಸ್ ನಿಲ್ದಾಣದಿಂದ ಬೆಂಗಳೂರು, ಭದ್ರಾವತಿ ಕಡೆಗೆ ಹೋಗುವ ಎಲ್ಲಾ ವಾಹನಗಳು ಬೈಪಾಸ್ ರಸ್ತೆ ಎಂ.ಆರ್.ಎಸ್ ಸರ್ಕಲ್ ಮುಖಾಂತರ ಹೋಗುವುದು

ಶಿಕಾರಿಪುರ ಸೊರಬ ಆನವಟ್ಟಿ ಕಡೆಯಿಂದ ಶಿವಮೊಗ್ಗಕ್ಕೆ ಬರುವ ಮತ್ತು ಹೊರ ಹೋಗುವ ಎಲ್ಲಾ ಬಸ್‌ಗಳು ಮತ್ತು ಭಾರೀ ವಾಹನಗಳು ಉಷಾ ನರ್ಸಿಂಗ್ ಹೋಂ ಸರ್ಕಲ್ ಲಕ್ಷ್ಮೀ ಟಾಕೀಸ್ ಸರ್ಕಲ್–ಪೊಲೀಸ್ ಚೌಕಿ– ಆಲ್ಕೋಳ ಸರ್ಕಲ್ ಮಾರ್ಗವಾಗಿ ಸಾಗರ ರಸ್ತೆಯಲ್ಲಿ ಸಂಚರಿಸುವುದು.

ಕೋಟೆ ರಸ್ತೆ ಮತ್ತು ಓಲ್ಡ್ ಬಾರ್‌ಲೈನ್ ರಸ್ತೆ ಎಲ್ಲಾ ವಾಹನಗಳ ಸಂಚಾರ ನಿಷೇಧ.

ಈ ಎಲ್ಲಾ ಮಾರ್ಗ ಬದಲಾವಣೆಗಳು ಪೊಲೀಸ್ ವಾಹನಗಳು ಅತಿಗಣ್ಯ ವ್ಯಕ್ತಿಗಳ ವಾಹನಗಳು ಆಂಬುಲೆನ್ಸ್ ಹಾಗೂ ಮೂಲಭೂತ ಸೌಕರ್ಯ ಒದಗಿಸುವ ವಾಹನಗಳನ್ನು ಅನುಕೂಲಕ್ಕೆ ತಕ್ಕಂತೆ ಹೊರತುಪಡಿಸಿರುತ್ತದೆ ಎಂದು ಪ್ರಕಟಣೆಯಲ್ಲಿ ಅವರು ತಿಳಿಸಿದ್ದಾರೆ.

# ಹಲವು ರಾಜ್ಯಗಳಲ್ಲಿ ಭಾರೀ ಮಳೆ ಮುನ್ಸೂಚನೆ ಎಚ್ಚರಿಕೆ



ನವದೆಹಲಿ, ಸೆ.24– ಕೊಲ್ಲಿಯಲ್ಲಿ ಸೃಷ್ಟಿಯಾಗಿರುವ ತೀವ್ರ ವಾಯುಭಾರ ಕುಸಿತವು ಮತ್ತಷ್ಟು ಬಲಗೊಂಡು ಕರಾವಳಿ ತೀರದತ್ತ ಧಾವಿಸುತ್ತಿದ್ದು, ದೇಶದ ಪೂರ್ವ, ಮಧ್ಯ ಮತ್ತು ದಕ್ಷಿಣ ಭಾರತದ ಹಲವು ರಾಜ್ಯಗಳಲ್ಲಿ ಜಲಪ್ರಳಯದಂತಹ ಪರಿಸ್ಥಿತಿ ನಿರ್ಮಾಣವಾಗುವ ಭೀತಿ ಎದುರಾಗಿದೆ.

ಮುಂಗಾರು ಋತುವು ಮುಗಿಯುವ ಹಂತದಲ್ಲಿದೆ, ಆದರೆ ದೇಶದ ಹಲವು ಭಾಗಗಳಲ್ಲಿ ಮಳೆ ಮುಂದುವರೆದಿದೆ. ಭಾರತ ಹವಾಮಾನ ಇಲಾಖೆಯ (ಐಎಂಡಿ) ಇತ್ತೀಚಿನ ಮುನ್ಸೂಚನೆಯ ಪ್ರಕಾರ, ಸೆಪ್ಟೆಂಬರ್ 24 ರಂದು ಪೂರ್ವ ಉತ್ತರ ಪ್ರದೇಶ ಮತ್ತು ಬಿಹಾರದಲ್ಲಿ ಭಾರೀ ಮಳೆಯಾಗುವ ನಿರೀಕ್ಷೆಯಿದೆ. ಅನೇಕ ಪ್ರದೇಶಗಳಲ್ಲಿ ಗುಡುಗು ಸಹಿತ ಮತ್ತು ಬಲವಾದ ಗಾಳಿ ಬೀಸುವ ಸಾಧ್ಯತೆಯಿದೆ.

ಭಾರತೀಯ ಹವಾಮಾನ ಇಲಾಖೆಯು ನೀಡಿರುವ ತಾಜಾ ವರದಿಯ ಪ್ರಕಾರ, ಈ ಹವಾಮಾನ ವ್ಯವಸ್ಥೆಯು ಒಡಿಶಾ ಮತ್ತು ದಕ್ಷಿಣ ಆಂಧ್ರಪ್ರದೇಶದ ಕರಾವಳಿ ತೀರವನ್ನು ಹಾದು ಹೋಗುವಾಗ ಗಂಟೆಗೆ 55 ರಿಂದ 75 ಕಿಲೋಮೀಟರ್ ವೇಗದಲ್ಲಿ ಬಿರುಗಾಳಿ ಬೀಸಲಿದ್ದು, ಮುನ್ನೆಚ್ಚರಿಕೆಯಾಗಿ ಒಡಿಶಾ, ಛತ್ತೀಸ್‌ಗಢ, ಪಶ್ಚಿಮ ಬಂಗಾಳ, ಜಾರ್ಖಂಡ್, ಆಂಧ್ರಪ್ರದೇಶ, ತೆಲಂಗಾಣ ಹಾಗೂ ಮಹಾರಾಷ್ಟ್ರದ ವಿದರ್ಭ ಪ್ರದೇಶಗಳಲ್ಲಿ ಅತಿ ಭಾರೀ ಮಳೆಯಾಗುವ 'ರೆಡ್' ಮತ್ತು 'ಆರೆಂಜ್' ಅಲರ್ಟ್ ಘೋಷಿಸಲಾಗಿದೆ. ಒಡಿಶಾದ ಗಂಜಾಂ, ಪುರಿ, ಖೋರ್ಧಾ ಹಾಗೂ ಕಟಕ್ ಜಿಲ್ಲೆಗಳಲ್ಲಿ ಮುಂಜಾಗ್ರತಾ ಕ್ರಮವಾಗಿ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ರಜೆ ನೀಡಲಾಗಿದ್ದು, ಯಾವುದೇ ಆಪತ್ಕಾಲವನ್ನು ಎದುರಿಸಲು ರಾಷ್ಟ್ರೀಯ ದುರಂತ ಉಪಶಮನ ಪಡೆ ಮತ್ತು ರಾಜ್ಯ ದುರಂತ ಸ್ಪಂದನಾ ಪಡೆ ತಂಡಗಳನ್ನು ಕರಾವಳಿ ಹಾಗೂ ತಗ್ಗು ಪ್ರದೇಶಗಳಲ್ಲಿ ತುರ್ತಾಗಿ ನಿಯೋಜಿಸಲಾಗಿದೆ. ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಕೃಷ್ಣಾ, ಗೋದಾವರಿ, ಬ್ರಾಹ್ಮಣಿ ಮತ್ತು ಮಹಾನದಿಯಂತಹ ಪ್ರಮುಖ ನದಿಗಳಲ್ಲಿ ನೀರಿನ ಮಟ್ಟ ವೇಗವಾಗಿ ಏರಿಕೆಯಾಗುತ್ತಿದ್ದು, ನದಿಪಾತ್ರದ ಜನರಿಗೆ ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಎಚ್ಚರಿಕೆ ನೀಡಲಾಗಿದೆ. ಬಿರುಗಾಳಿಯ ರಭಸಕ್ಕೆ ಕಡಲು ತೀವ್ರ ಕ್ಷುಬ್ಧಗೊಂಡಿರುವುದರಿಂದ ಹಾಗೂ ಅಲೆಗಳ ಎತ್ತರ ಹೆಚ್ಚಿರುವುದರಿಂದ ಮುಂದಿನ ಕೆಲವು ದಿನಗಳ ಕಾಲ ಮೀನುಗಾರರು ಸಮುದ್ರಕ್ಕೆ ಇಳಿಯುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಇದರ ಜೊತೆಗೆ, ರಸ್ತೆ ಸಾರಿಗೆ, ರೈಲು ಸೇವೆಗಳು ಹಾಗೂ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆಯಿರುವುದರಿಂದ ಸಾರ್ವಜನಿಕರು ಅಗತ್ಯವಿಲ್ಲದೇ ಮನೆಗಳಿಂದ ಹೊರಬರಬಾರದು ಮತ್ತು ಸ್ಥಳೀಯ ಆಡಳಿತ ನೀಡುವ ಅಧಿಕೃತ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ರಾಜ್ಯ ದುರಂತ ನಿರ್ವಹಣಾ ಪ್ರಾಧಿಕಾರಗಳು ಕೋರಿವೆ.

# ಅಕ್ರಮ ಬಂಧನ: ಕರ್ನಾಟಕದ ಅರ್ಜಿ ವಜಾ 5 ಲಕ್ಷ ಪರಿಹಾರ ಆದೇಶ ಎತ್ತಿಹಿಡಿದ ಸುಪ್ರೀಂ

ನವದೆಹಲಿ,ಸೆ.24: ಕೊಡಗು ಜಿಲ್ಲೆಯ ಹೋಂಸ್ಟೇ ಮಾಲೀಕರೊಬ್ಬರನ್ನು ಅಕ್ರಮವಾಗಿ ಬಂಧಿಸಿದ್ದ ಪ್ರಕರಣದಲ್ಲಿ ಕರ್ನಾಟಕ ಹೈಕೋರ್ಟ್ ನೀಡಿದ್ದ ತೀರ್ಪಿನ ವಿರುದ್ಧ ರಾಜ್ಯ ಸರ್ಕಾರ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ. ಬಂಧನ ಅಕ್ರಮ ಎಂದು ಘೋಷಿಸಿ, ಸಂತ್ರಸ್ತರಿಗೆ 5 ಲಕ್ಷ ಪರಿಹಾರ ನೀಡುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನೀಡಿದ್ದ ಆದೇಶದಲ್ಲಿ ಮಧ್ಯಪ್ರವೇಶಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠವು ಸೆ.22ರಂದು ಕರ್ನಾಟಕ ಸರ್ಕಾರದ ವಿಶೇಷ ಮೇಲ್ಮನವಿ ಅರ್ಜಿ (ಖಐಕ) ವಿಚಾರಣೆ ನಡೆಸಿ, ಹೈಕೋರ್ಟ್ ಆದೇಶದಲ್ಲಿ ಮಧ್ಯಪ್ರವೇಶಿಸುವ ಅಗತ್ಯವಿಲ್ಲ ಎಂದು ಹೇಳಿ ಅರ್ಜಿಯನ್ನು ವಜಾಗೊಳಿಸಿತು.

ಅಮೆರಿಕದ ಪ್ರಜೆಯೊಬ್ಬರು ಕೊಡಗಿನ ಹೋಂಸ್ಟೇಯಲ್ಲಿ ತಂಗಿದ್ದ ವೇಳೆ ನಡೆದಿದ್ದ ಎನ್ನಲಾದ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಹೋಂಸ್ಟೇ ಮಾಲೀಕ ಪಾಲೇಕಂಡ ಪೊನ್ನಪ್ಪ ಅಲಿಯಾಸ್ ವಿಶಾಲ್ ಅವರನ್ನು ಏ.19, 2026ರಂದು ಪೊಲೀಸರು ಬಂಧಿಸಿದ್ದರು. ಅವರು ಮೇ 2ರವರೆಗೆ 13 ದಿನ ನ್ಯಾಯಾಂಗ ಬಂಧನದಲ್ಲಿದ್ದು ಬಳಿಕ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದರು.

ಬಂಧನ ಹಾಗೂ ಎಫ್‌ಐಆರ್ ಪ್ರಶ್ನಿಸಿ ಅವರು ಕರ್ನಾಟಕ ಹೈಕೋರ್ಟ್ ಮೊರೆ ಹೋಗಿದ್ದರು. ಎಫ್‌ಐಆರ್ ರದ್ದುಪಡಿಸಲು ಹೈಕೋರ್ಟ್ ನಿರಾ–ಕರಿಸಿ ತನಿಖೆ ಮುಂದುವರಿಸಲು ಅವಕಾಶ ನೀಡಿತ್ತು. ಆದರೆ ಬಂಧನ ಕಾನೂನುಬದ್ಧವಾಗಿರಲಿಲ್ಲ ಎಂದು ಸ್ಪಷ್ಟಪಡಿಸಿ, ರಾಜ್ಯ ಸರ್ಕಾರ ?5 ಲಕ್ಷ ಪರಿಹಾರ ನೀಡಬೇಕು ಎಂದು ಜುಲೈ 15ರಂದು ಆದೇಶಿಸಿತ್ತು.

ಅತ್ಯಾಚಾರಕ್ಕೆ ಸಂಬಂಧಿಸಿದ ಬಿಎನ್‌ಎಸ್‌ನ ಸೆಕ್ಷನ್ 64(1) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದ್ದರೂ, ಅರ್ಜಿದಾರನೇ ಅತ್ಯಾಚಾರ ಎಸಗಿದ್ದಾನೆ ಎಂಬ ಯಾವುದೇ ನೇರ ಆರೋಪ ಇರಲಿಲ್ಲ ಎಂದು ಹೈಕೋರ್ಟ್ ಗಮನಿಸಿತ್ತು. ಘಟನೆ ನಡೆದ ಸಂದರ್ಭದಲ್ಲಿ ಅರ್ಜಿದಾರ ಸ್ಥಳದಲ್ಲೇ ಇರಲಿಲ್ಲ ಎಂಬುದನ್ನೂ ದಾಖಲಿಸಿತ್ತು.

ಅವರ ವಿರುದ್ಧ ಆರಂಭದಲ್ಲಿ ದಾಖಲಿಸಲಾಗಿದ್ದ ಬಿಎನ್‌ಎಸ್‌ನ 238, 239 ಮತ್ತು 351ನೇ ಸೆಕ್ಷನ್‌ಗಳ ಆರೋಪಗಳು ಜಾಮೀನಿಗೆ ಒಳಪಡುವ ಹಾಗೂ ನಾನ್–ಕಾಗ್ನಿಸಬಲ್ ಅಪರಾಧಗಳಾಗಿದ್ದವು. ತನಿಖೆಯ ವೇಳೆ ರಿಮಾಂಡ್ ಕೋರುವ ಹಂತದಲ್ಲಿ ಮಾತ್ರ ಬಿಎನ್‌ಎಸ್‌ನ ಸೆಕ್ಷನ್ 3(5) ಅನ್ನು ಸೇರಿಸಲಾಗಿತ್ತು.

ಸಾಮಾನ್ಯ ಉದ್ದೇಶದ ತತ್ವವನ್ನು ಒಳಗೊಂಡಿರುವ ಸೆಕ್ಷನ್ 3(5) ಸ್ವತಂತ್ರ ಅಪರಾಧವನ್ನು ಸೃಷ್ಟಿಸುವುದಿಲ್ಲ. ಹೀಗಾಗಿ ಮೂಲ ಅಪರಾಧಗಳು ನಾನ್–ಕಾಗ್ನಿಸಬಲ್ ಆಗಿರುವ ಸಂದರ್ಭದಲ್ಲಿ ಸೆಕ್ಷನ್ 3(5) ಒಂದನ್ನೇ ಆಧಾರವಾಗಿಸಿಕೊಂಡು ಬಂಧಿಸಲು ಸಾಧ್ಯವಿಲ್ಲ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿತ್ತು.

ಅರ್ಜಿದಾರರನ್ನು ಏ.18ರ ಸಂಜೆ ಪೊಲೀಸರು ವಶಕ್ಕೆ ಪಡೆದು ಇಡೀ ರಾತ್ರಿ ಠಾಣೆಯಲ್ಲಿ ಇರಿಸಿದ್ದರು. ಏ.19ರ ಮುಂಜಾನೆ 5 ಗಂಟೆಗೆ ಅವರನ್ನು ಅಧಿಕೃತವಾಗಿ ಬಂಧಿಸಲಾಗಿತ್ತು. ಆದರೆ ಮ್ಯಾಜಿಸ್ಟ್ರೇಟ್ ಮುಂದೆ ಅವರನ್ನು ಹಾಜರುಪಡಿಸಿದ್ದು ಅದರ ಮುಂದಿನ ದಿನ ರಾತ್ರಿ 11.30ಕ್ಕೆ ಎಂದು ಹೈಕೋರ್ಟ್ ದಾಖಲಿಸಿತ್ತು.

ಸುಪ್ರೀಂ ಕೋರ್ಟ್‌ನ ಡಿ.ಕೆ. ಬಸು, ಅರ್ಣೇಶ್ ಕುಮಾರ್, ಮೊಹಮ್ಮದ್ ಜುಬೈರ್ ಮತ್ತು ಸತೇಂದರ್ ಕುಮಾರ್ ಅಂತಿಲ್ ಪ್ರಕರಣಗಳ ತೀರ್ಪುಗಳನ್ನು ಉಲ್ಲೇಖಿಸಿದ ಹೈಕೋರ್ಟ್, ಬಂಧನವನ್ನು ತನಿಖೆಯ ಸಾಮಾನ್ಯ ಕ್ರಮವೆಂದು ಪರಿಗಣಿಸಲಾಗದು ಎಂದು ತಿಳಿಸಿತ್ತು. ಬಂಧಿಸುವ ಅಧಿಕಾರವಿದ್ದರೂ, ಬಂಧನ ನಿಜವಾಗಿಯೂ ಅಗತ್ಯವೇ ಎಂಬುದನ್ನು ತನಿಖಾಧಿಕಾರಿ ವಸ್ತುನಿಷ್ಠ ಅಂಶಗಳ ಆಧಾರದ ಮೇಲೆ ಸ್ವತಂತ್ರವಾಗಿ ಪರಿಶೀಲಿಸಿ ನಿರ್ಧರಿಸಬೇಕು ಎಂದು ಹೇಳಿತ್ತು.

ಅರ್ಜಿದಾರರ ವೈಯಕ್ತಿಕ ಸ್ವಾತಂತ್ರ್ಯವನ್ನು "ಯಾವುದೇ ಸ್ಪಷ್ಟ ಕಾರಣವಿಲ್ಲದೆ" ನಿರ್ಬಂಧಿಸಲಾಗಿದ್ದು, ಕಾನೂನಿನಲ್ಲಿ ನಿಗದಿಪಡಿಸಿರುವ ಸುರಕ್ಷತಾ ಕ್ರಮಗಳನ್ನು ಪಾಲಿಸಲಾಗಿಲ್ಲ ಎಂದು ಹೈಕೋರ್ಟ್ ಹೇಳಿತ್ತು.

5 ಲಕ್ಷ ಪರಿಹಾರ ನೀಡುವಂತೆ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಬಂಧನ ಹಾಗೂ ನಂತರದ ನ್ಯಾಯಾಂಗ ಬಂಧನವು ಬಿಎನ್‌ಎಸ್‌ಎಸ್‌ನ ಸೆಕ್ಷನ್ 187ರಡಿ ನಿಗದಿತ ಕಾನೂನು ಪ್ರಕ್ರಿಯೆಯಂತೆ ನಡೆದಿತ್ತು ಎಂದು ರಾಜ್ಯ ವಾದಿಸಿತ್ತು.

ಎಫ್‌ಐಆರ್‌ನಲ್ಲಿ ಇಬ್ಬರು ಆರೋಪಿಗಳ ವಿರುದ್ಧ ಸೆಕ್ಷನ್ 64(1), 238, 239 ಮತ್ತು 351ರಡಿ ಜಂಟಿ ಆರೋಪಗಳಿದ್ದು, ಪ್ರತ್ಯೇಕ ಆರೋಪಿಗಳ ಪಾತ್ರವನ್ನು ಪ್ರತ್ಯೇಕವಾಗಿ ಗುರುತಿಸಿರಲಿಲ್ಲ. ಗಂಭೀರ ಕಾಗ್ನಿಸಬಲ್ ಅಪರಾಧಗಳಿಗೆ ಅನ್ವಯಿಸುವ ಕಾನೂನು ವ್ಯವಸ್ಥೆಯನ್ನು ಹೈಕೋರ್ಟ್ ಪರಿಗಣಿಸಬೇಕಿತ್ತು ಎಂದು ರಾಜ್ಯ ಸರ್ಕಾರ ವಾದಿಸಿತ್ತು.

ಅಕ್ರಮ ಬಂಧನವೆಂದರೆ ಸ್ವಯಂಚಾಲಿತವಾಗಿ ಸಂವಿಧಾನದ 21ನೇ ವಿಧಿಯಡಿ ಪರಿಹಾರ ಪಡೆಯುವ ಹಕ್ಕು ಉಂಟಾಗುವುದಿಲ್ಲ ಎಂದೂ ಸರ್ಕಾರ ಹೇಳಿತ್ತು. 'ಸುಬೆ ಸಿಂಗ್ ವಿರುದ್ಧ ಹರಿಯಾಣ ಸರ್ಕಾರ' ಪ್ರಕರಣದ ತೀರ್ಪನ್ನು ಉಲ್ಲೇಖಿಸಿ, ನ್ಯಾಯಾಲಯದ ಮನಸ್ಸಿಗೆ ತೀವ್ರ ಆಘಾತ ಉಂಟುಮಾಡುವಷ್ಟು ಸ್ಪಷ್ಟ ಮತ್ತು ಗಂಭೀರ ಹಕ್ಕು ಉಲ್ಲಂಘನೆಯಾದ ಸಂದರ್ಭದಲ್ಲಷ್ಟೇ ಸಾರ್ವಜನಿಕ ಕಾನೂನಿನಡಿ ಪರಿಹಾರ ನೀಡಬಹುದು ಎಂದು ವಾದಿಸಿತ್ತು.

13 ದಿನಗಳ ನ್ಯಾಯಾಂಗ ಬಂಧನದಲ್ಲಿದ್ದ ಪ್ರಕರಣದಲ್ಲಿ ಬಂಧನದಲ್ಲೇ ಸಾವು, ಹಿಂಸೆ, ವೈದ್ಯಕೀಯ ಗಾಯ ಅಥವಾ ಜೀವನೋಪಾಯ ನಷ್ಟದಂತಹ ಅಂಶಗಳು ಕಂಡುಬಂದಿಲ್ಲ. ಹೀಗಾಗಿ ಪರಿಹಾರ ನೀಡಲು ಅಗತ್ಯವಾದ ಮಾನದಂಡ ಈ ಪ್ರಕರಣದಲ್ಲಿ ಪೂರೈಸಿಲ್ಲ ಎಂದು ರಾಜ್ಯ ಸರ್ಕಾರ ವಾದಿಸಿತ್ತು.

# ರೈತರ ಸಾಲ ಮನ್ನಾಕ್ಕೆ ಕೋನರೆಡ್ಡಿ ಕೇಂದ್ರಕ್ಕೆ ಆಗ್ರಹ

ಬೆಂಗಳೂರು, ಸೆ. 24– ಕರ್ನಾಟಕ ಸೇರಿದಂತೆ ಇಡೀ ದೇಶದಲ್ಲೇ ಮಳೆ ಕೊರತೆಯಿಂದ ಬರ ಪರಿಸ್ಥಿತಿ ಇದೆ. ಕೇಂದ್ರ ಸರ್ಕಾರ ರೈತರ ಸಾಲ ಮನ್ನಾ ಮಾಡಬೇಕು ಎಂದು ಕಾಂಗ್ರೆಸ್ ಸದಸ್ಯ ಕೋನರೆಡ್ಡಿ ವಿಧಾನಸಭೆಯಲ್ಲಿಂದು ಒತ್ತಾಯಿಸಿದರು.

ರಾಜ್ಯದ ಬರ ಪರಿಸ್ಥಿತಿಯ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಬರ ಪರಿಸ್ಥಿತಿಯನ್ನು ನಿಭಾಯಿಸುವುದು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಜವಾಬ್ದಾರಿಯಾಗಿದೆ. ಈ ಹಿಂದೆ ಮನಮೋಹನ್‌ಸಿಂಗ್ ಅವರು ಪ್ರಧಾನಿಯಾಗಿದ್ದಾಗ ರೈತರ ಸಾಲ ಮನ್ನಾ ಮಾಡಿದ್ದರು. ಅದೇ ರೀತಿ ಈಗಿನ ಕೇಂದ್ರ ಸರ್ಕಾರ ಸಹ ರೈತರ ಸಾಲ ಮನ್ನಾ ಮಾಡಬೇಕು. ರಾಜ್ಯ ಸರ್ಕಾರವೂ ತನ್ನ ಇತಿಮಿತಿಯಲ್ಲಿ ರೈತರ ಸಾಲ ಮನ್ನಾ ಮಾಡುವ ಬಗ್ಗೆ ಚಿಂತನೆ ನಡೆಸಬೇಕು ಎಂದು ಹೇಳಿದರು.

ರಾಜ್ಯದ ಆರ್ಥಿಕ ಪರಿಸ್ಥಿತಿ ಬಗ್ಗೆ ಹಣಕಾಸು ಇಲಾಖೆ ಸಲಹೆ ಕೊಟ್ಟಿದೆ ಅಷ್ಟೇ. ಹಿಂದೆಯೂ ಅದೇ ರೀತಿ ಹಣಕಾಸು ಇಲಾಖೆ ಸಲಹೆ ಕೊಟ್ಟಿದೆ. ಅದನ್ನೇ ದೊಡ್ಡದು ಮಾಡಿಕೊಂಡು ಮಾತನಾಡುವುದು ಬೇಡ. ರಾಜ್ಯದ ಬರ ಪರಿಸ್ಥಿತಿ ನಿರ್ವಹಣೆಗೆ ಕೇಂದ್ರದ ನೆರವು ಕೋರಿ ಸರ್ವಪಕ್ಷ ನಿಯೋಗವನ್ನು ಕೊಂಡೊಯ್ಯಿರಿ. ಯಾವಾಗ ಸರ್ವಪಕ್ಷ ನಿಯೋಗ ಕೊಂಡೊಯ್ಯಲಾಗುವುದು ಎಂಬ ಬಗ್ಗೆ ಇಂದೇ ದಿನಾಂಕವನ್ನು ಪ್ರಕಟಿಸಿ ಎಂದು ಕೋನರೆಡ್ಡಿ ಒತ್ತಾಯಿಸಿದರು.

ಬರ ಪೀಡಿತ ತಾಲ್ಲೂಕುಗಳ ಘೋಷಣೆ ಸಂಬಂಧ ಕೇಂದ್ರ ಸರ್ಕಾರದ ಮಾನದಂಡಗಳಲ್ಲಿ ಬದಲಾವಣೆಯಾಗಬೇಕಿದೆ. ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ನಿಯಮಗಳನ್ನು ಸಡಿಲಿಸುವ ಅಗತ್ಯವಿದೆ. ಕೇಂದ್ರದ ಅಧ್ಯಯನ ತಂಡ ರಾಜ್ಯಕ್ಕೆ ಬಂದು ಹೆಚ್ಚಿನ ನೆರವು ನೀಡಬೇಕು ಎಂಬ ಹಕ್ಕೊತ್ತಾಯವನ್ನು ಪಕ್ಷಾತೀತವಾಗಿ ಮಾಡೋಣ ಎಂದು ಅವರು ಹೇಳಿದರು.

ಪ್ರಧಾನ ಮಂತ್ರಿಗಳ ಫಸಲ್ ಬಿಮಾ ಯೋಜನೆಯಿಂದ ರೈತರಿಗೆ ಲಾಭ ಆಗುತ್ತಿಲ್ಲ. ಖಾಸಗಿ ಕಂಪೆನಿಗಳಿಗೆ ಲಾಭ ಆಗುತ್ತಿದೆ. ಈ ಫಸಲ್ ಭಿಮಾ ಯೋಜನೆಯ ನಿಯಮಾವಳಿಗಳಲ್ಲೂ ಬದಲಾವಣೆ ಅಗತ್ಯವಿದೆ ಎಂದು ಅವರು ತಿಳಿಸಿದರು.

**ಗೋಶಾಲೆ ತೆರೆಯಿರಿ**

ಇದಕ್ಕೂ ಮೊದಲು ಮಾತನಾಡಿದ ಬಿಜೆಪಿಯ ಬಸವರಾಜ ಮತ್ತಿಮೋಡ್ ಅವರು, ಕಲ್ಬುರ್ಗಿ ಜಿಲ್ಲೆಯಲ್ಲೂ ಹೆಚ್ಚಿನ ಬರ ಇದೆ. ನಮ್ಮ ಕ್ಷೇತ್ರವೂ ಬರ ಪೀಡಿತವಾಗಿದೆ. ಹಾಗಾಗಿ ರಾಜ್ಯ ಸರ್ಕಾರ ಕುಡಿಯುವ ನೀರಿಗೆ ಸಮರ್ಪಕ ಕ್ರಮಗಳನ್ನು ಕೈಗೊಳ್ಳಬೇಕು. ಜಾನುವಾರುಗಳ ರಕ್ಷಣೆಗೆ ಗೋಶಾಲೆ ತೆರೆಯಬೇಕು ಎಂದು ಒತ್ತಾಯಿಸಿದರು.

ಬರ ನಿರ್ವಹಣೆಗೆ ಪ್ರತಿ ಗ್ರಾಮ ಪಂಚಾಯ್ತಿಗೆ 50 ಲಕ್ಷ ರೂ. ಬಿಡುಗಡೆ ಮಾಡಬೇಕು. ಹಾಗೆಯೇ



ನಗರದಲ್ಲಿ ಇಂದು ನಡೆದ ಗ್ಯಾರಹ್ವೀನ್ ಶರೀಫ್ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಅಖಂಡ ಶ್ರೀನಿವಾಸ್ ಮೂರ್ತಿಯವರು ಭಾಗವಹಿಸಿ ಎಲ್ಲರಿಗೂ ಅಲ್ಲಾಹ್ ಆಶೀರ್ವದಿಸಲಿ ಮತ್ತು ಎಲ್ಲರ ಜೀವನದಲ್ಲಿ ಶಾಂತಿ, ಏಕತೆ, ಸೌಹಾರ್ದತೆ ಸಮೃದ್ಧಿ ನೆಲಸಲಿ ಎಂದು ಪ್ರಾರ್ಥಿಸಿದರು. ಈ ಸಂದರ್ಭದಲ್ಲಿ ಹಲವಾರು ನಾಯಕರು, ಗಣ್ಯರು ಹಾಗೂ ಸಮುದಾಯದ ಸದಸ್ಯರು ಉಪಸ್ಥಿತರಿದ್ದರು.

(ಮೂರನೇ ಪುಟದಿಂದ)

# ಚಲಿಸುತ್ತಿದ್ದ ಬಸ್‌ಗೆ ಬೆಂಕಿ

ಬೆಂಕಿವೇಗವಾಗಿವ್ಯಾಪಿಸಿದಪರಿಣಾಮ ಒಂಬತ್ತುಮಂದಿ ಮೃತಪಟ್ಟಿದ್ದಾರೆ ಎಂದು ಪ್ರಾಥಮಿಕವಾಗಿ ತಿಳಿದು ಬಂದಿದೆ.

ದುರಂತದಿಂದ ಪಾರಾದ ಮಹಿಳಾ ಪ್ರಯಾಣಿಕರೊಬ್ಬರು ಘಟನೆಯ ಭೀಕರಕ್ಷಣಗಳನ್ನು ವಿವರಿಸಿದ್ದಾರೆ.

ತಾವು ಬಸ್‌ನಲ್ಲಿ ನಿದ್ರಿಸುತ್ತಿದ್ದಾಗ ಯಾರೋ ಬಾಗಿಲು ಬಡಿದು ಬೆಂಕಿ ಹೊತ್ತಿಕೊಂಡಿರುವುದಾಗಿ ಎಚ್ಚರಿಸಿದರು. ಎಚ್ಚರಗೊಂಡು ನೋಡಿದಾಗ ಬಸ್‌ನೊಳಗೆ ಭಾರಿ ಗೊಂದಲ ಉಂಟಾಗಿತ್ತು. ಪರಿಸ್ಥಿತಿಯ ಗಂಭೀರತೆ ಅರಿವಾದ ಕೂಡಲೇ ತಮ್ಮ ಯಾವುದೇ ವಸ್ತುಗಳನ್ನು ತೆಗೆದುಕೊಳ್ಳುವ ಸ್ಥಿತಿಯಲ್ಲಿ ಇರಲಿಲ್ಲ ಎಂದು ಅವರು ಹೇಳಿದ್ದಾರೆ. ಚಪ್ಪಲಿಯನ್ನು ಧರಿಸದೆ ಕೇವಲ ಮೊಬೈಲ್ ಫೋನ್ ತೆಗೆದುಕೊಂಡು ಬಸ್‌ನಿಂದ ಹೊರಗೆ ಓಡಿಬಂದೆ ಎಂದು ಅವರು ತಿಳಿಸಿದ್ದಾರೆ.

ಬಸ್‌ನೊಳಗೆ ಹೊಗೆ ತುಂಬಿದ ಬಳಿಕ ಏನೂ ಕಾಣಿಸುತ್ತಿರಲಿಲ್ಲ. ಪ್ರಯಾಣಿಕರು ಉಸಿರಾಡಲು ಪರದಾಡುತ್ತಿದ್ದರು. ಹೊರಬರಲು ಎಲ್ಲರೂ ಒಂದೇ ಸಮಯದಲ್ಲಿ ಪ್ರಯತ್ನಿಸಿದ್ದರಿಂದ ನೂಕುನುಗ್ಗಲು ಉಂಟಾಯಿತು.

'ಹೊಗೆ ಎಷ್ಟು ದಟ್ಟವಾಗಿತ್ತೆಂದರೆ ಏನೂ ಕಾಣಿಸುತ್ತಿರಲಿಲ್ಲ. ಜನರು ಬಸ್‌ನೊಳಗೆ ಉಸಿರುಗಟ್ಟುವಂತಾಗಿದ್ದರು. ನೂಕುನುಗ್ಗಲಿನ ನಡುವೆ ದಾರಿ ಮಾಡಿಕೊಂಡು ಹೊರಬರಲು ಸಾಧ್ಯವಾದ ಕೆಲವರು ಮಾತ್ರ ಪಾರಾಗಲು ಸಾಧ್ಯವಾಯಿತು' ಎಂದು ಪ್ರಯಾಣಿಕರು ತಿಳಿಸಿದ್ದಾರೆ.

**ಸ್ಥಳಕ್ಕೆ ಧಾವಿಸಿದ ರಕ್ಷಣಾ ತಂಡ**

ಘಟನೆಯ ಮಾಹಿತಿ ಲಭ್ಯವಾಗುತ್ತಿದ್ದಂತೆ ತುರ್ತು ಸೇವಾ ಸಿಬ್ಬಂದಿ ಹಾಗೂ ಅಗ್ನಿಶಾಮಕ ವಾಹನಗಳು ಸ್ಥಳಕ್ಕೆ ಧಾವಿಸಿದವು. ಬೆಂಕಿಯನ್ನು ನಿಯಂತ್ರಣಕ್ಕೆತರುವ ಕಾರ್ಯಾಚರಣೆ ನಡೆಸಲಾಯಿತು.

## ಮೃತರ ಕುಟುಂಬಕ್ಕೆ 2 ಲಕ್ಷ ಪರಿಹಾರ

ಯಮುನಾ ಎಕ್ಸ್ ಪ್ರೆಸ್ ವೇನಲ್ಲಿ ಬಸ್‌ಗೆ ಬೆಂಕಿ ಹೊತ್ತಿಕೊಂಡು 9 ಮಂದಿ ಸಜೀವ ದೆಹನಗೊಂಡ ಮೃತಪಟ್ಟ ಕುಟುಂಬಸ್ಥರಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ತಲಾ 2 ಲಕ್ಷ ರೂ. ಪರಿಹಾರ ಹಾಗೂ ಗಾಯಾಳುಗಳಿಗೆ ತಲಾ 50 ಸಾವಿರ ರೂ ಪರಿಹಾರ ಪ್ರಕಟಿಸಿದ್ದಾರೆ.

ಬಸ್ ದುರಂತದ ಬಗ್ಗೆ ತೀವ್ರ ದುಃಖ ವ್ಯಕ್ತಪಡಿಸಿರುವ ಮೋದಿ, ಗಾಯಾಳುಗಳು ಶೀಘ್ರ ಚೇತರಿಸಿಕೊಳ್ಳಲಿ ಎಂದು ಹಾರೈಸಿದ್ದಾರೆ.

ಬೆಂಕಿ ನಂದಿಸಿದ ಬಳಿಕ ರಕ್ಷಣಾ ಸಿಬ್ಬಂದಿ ಬಸ್‌ನೊಳಗೆ ಪರಿಶೀಲನೆ ನಡೆಸಿದರು. ಗಾಯಗೊಂಡ ಪ್ರಯಾಣಿಕರನ್ನು ತಕ್ಷಣವೇ ಆಸ್ಪತ್ರೆಗೆ ಸ್ಥಳಾಂತರಿಸುವ ಕಾರ್ಯವೂ ನಡೆಯಿತು.

ಘಟನೆಯಿಂದ ಯಮುನಾ ಎಕ್ಸ್‌ಪ್ರೆಸ್‌ವೇಯಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ರಕ್ಷಣಾ ಕಾರ್ಯಾಚರಣೆಗೆ ಅಗತ್ಯ ವ್ಯವಸ್ಥೆಗಳನ್ನು ಮಾಡಲಾಗಿದ್ದು, ತನಿಖಾ ಅಧಿಕಾರಿಗಳು ಸ್ಥಳದಲ್ಲೇ ಪರಿಶೀಲನೆ ನಡೆಸಿದರು.

ಬಸ್‌ಗೆ ಬೆಂಕಿ ಹೇಗೆ ಹೊತ್ತಿಕೊಂಡಿತು ಎಂಬುದು ಸದ್ಯಕ್ಕೆ ಖಚಿತವಾಗಿಲ್ಲ. ತಾಂತ್ರಿಕ ದೋಷ, ಶಾರ್ಟ್ ಸರ್ಕ್ಯೂಟ್ ಅಥವಾ ಇತರೆ ಯಾವುದೇ ಕಾರಣದಿಂದ ಬೆಂಕಿ ಕಾಣಿಸಿಕೊಂಡಿತೇ ಎಂಬುದರ ಕುರಿತು ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ.

ಬೆಂಕಿ ಕಾಣಿಸಿಕೊಂಡ ಸಮಯ, ಬಸ್‌ನ ಚಲನೆಯ ಸ್ಥಿತಿ ಹಾಗೂ ಬೆಂಕಿ ಎಷ್ಟು ವೇಗವಾಗಿ ವ್ಯಾಪಿಸಿತು ಎಂಬ ಅಂಶಗಳನ್ನೂ ತನಿಖಾಧಿಕಾರಿಗಳು ಪರಿಶೀಲಿಸುತ್ತಿದ್ದಾರೆ. ಬಸ್‌ನಲ್ಲಿದ್ದ ಪ್ರಯಾಣಿಕರ ಹೇಳಿಕೆಗಳನ್ನೂ ದಾಖಲಿಸಿಕೊಳ್ಳುವ ಸಾಧ್ಯತೆ ಇದೆ. ಘಟನೆಯ ನಿಖರ ಕಾರಣ ತನಿಖೆಯ ನಂತರವೇ ತಿಳಿದುಬರಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಮೃತರ ಕುಟುಂಬಗಳಿಗೆ ನೆರವಿನ ಭರವಸೆ**

ಘಟನೆ ಕುರಿತು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸಂತಾಪ ವ್ಯಕ್ತಪಡಿಸಿದ್ದಾರೆ. ಮೃತರ ಕುಟುಂಬಗಳಿಗೆ ಸಾಂತ್ವನ ಸೂಚಿಸಿರುವ ಅವರು, ಗಾಯಗೊಂಡವರಿಗೆ ಯಾವುದೇ ರೀತಿಯ ವಿಳಂಬವಿಲ್ಲದೆ ಸೂಕ್ತ ವೈದ್ಯಕೀಯ ಚಿಕಿತ್ಸೆ ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಮೃತರ ಕುಟುಂಬಗಳೊಂದಿಗೆ ಸಂಪರ್ಕದಲ್ಲಿದ್ದು, ಅವರಿಗೆ ಸಾಧ್ಯವಿರುವ ಎಲ್ಲ ನೆರವು ಒದಗಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ಗಾಯಗೊಂಡವರು ಶೀಘ್ರ ಚೇತರಿಸಿಕೊಳ್ಳಲಿ ಎಂದು ಮುಖ್ಯಮಂತ್ರಿ ಹಾರೈಸಿದ್ದಾರೆ.

ಪ್ರಾಥಮಿಕ ಮಾಹಿತಿಯಂತೆ ಒಂಬತ್ತು ಮಂದಿ ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ. ಬಸ್‌ನಲ್ಲಿ ಸುಮಾರು 30ರಿಂದ 40 ಮಂದಿ ಪ್ರಯಾಣಿಸುತ್ತಿದ್ದರು ಎನ್ನಲಾಗಿರುವುದರಿಂದ, ಪ್ರಯಾಣಿಕರ ಸಂಪೂರ್ಣ ವಿವರಗಳನ್ನು ಅಧಿಕಾರಿಗಳು ಕಲೆಹಾಕುತ್ತಿದ್ದಾರೆ.

ಮೃತರ ಗುರುತು ಪತ್ತೆ, ಗಾಯಾಳುಗಳ ಸಂಖ್ಯೆ ಹಾಗೂ ಅವರ ಆರೋಗ್ಯ ಸ್ಥಿತಿ ಕುರಿತು ಹೆಚ್ಚಿನ ಅಧಿಕೃತ ಮಾಹಿತಿ ಇನ್ನಷ್ಟೇ ಲಭ್ಯವಾಗಬೇಕಿದೆ. ರಕ್ಷಣಾ ಕಾರ್ಯಾಚರಣೆ ಮತ್ತು ತನಿಖೆ ಮುಂದುವರಿದಿದೆ.

ಮುಂಜಾನೆ ನಡೆದ ಈ ದುರಂತದಲ್ಲಿ ನಿದ್ರೆಯಲ್ಲಿದ್ದ ಪ್ರಯಾಣಿಕರಿಗೆ ಬೆಂಕಿಯಿಂದ ತಪ್ಪಿಸಿಕೊಳ್ಳಲು ಅತಿ ಕಡಿಮೆ ಸಮಯ ಸಿಕ್ಕಿದ್ದು, ದಟ್ಟ ಹೊಗೆ ಮತ್ತು ನೂಕುನುಗ್ಗಲು ರಕ್ಷಣಾ ಕಾರ್ಯಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿತು.

# ರಾಜ್ಯಕ್ಕೆ ಬರ ಪರಿಹಾರ

ಪ್ರತಿ ಯೂನಿಟ್ ಗೆ 20–22 ರೂ.ವರೆಗೆ ನೀಡಿ ವಿದ್ಯುತ್ ಖರೀದಿ ಮಾಡಲಾಗುತ್ತಿದೆ. ನಮ್ಮ ನಾಗರೀಕರ ರಕ್ಷಣೆಗೆ ಅಗತ್ಯಕ್ರಮ ಕೈಗೊಳ್ಳುವಂತೆ ನಾವು ಇಂಧನ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇವೆ. ಈ ಮಧ್ಯೆ ಸಕ್ಕರೆ ಕಾರ್ಖಾನೆ ಮಾಲೀಕರ ಸಭೆ ಕರೆದಿದ್ದು, ವಿದ್ಯುತ್ ಮಾರಾಟಕ್ಕೆ ನಿರ್ಬಂಧ ಹೇರಿ ಅವರ ವಿದ್ಯುತ್ ಅನ್ನು ಸರ್ಕಾರಕ್ಕೆ ನೀಡಬೇಕು ಎಂದು ಸೂಚಿಸಲಾಗುವುದು.

ಸಾಧ್ಯವಿರುವ ಕಡೆ ಥರ್ಮಲ್ ಕೇಂದ್ರ ಸ್ಥಾಪನೆಗೆ ಸಾಧ್ಯತೆ ಹುಡುಕಲಾಗುತ್ತಿದೆ" ಎಂದರು.

ಯಡಿಯೂರಪ್ಪ, ಬೊಮ್ಮಾಯಿ ಸರ್ಕಾರಕ್ಕೆ ಆರ್ಥಿಕ ಇಲಾಖೆ ಕೊಟ್ಟ ಎಚ್ಚರದ ದಾಖಲೆ ಬಿಡುಗಡೆ ಮಾಡಲೇ

ಬಿಜೆಪಿಯ ಜೊಂಬು ಪ್ರತಿಭಟನೆ ವಿಚಾರವಾಗಿ ಮಾತನಾಡಿದ ಸಿ.ಎಂ, "ಆರ್ಥಿಕ ಇಲಾಖೆ ಸರ್ಕಾರಕ್ಕೆ ಸಲಹೆ ನೀಡಿದೆ. ಎಲ್ಲಾ ಸರ್ಕಾರಗಳ ಅವಧಿಯಲ್ಲೂ ಆರ್ಥಿಕ ಇಲಾಖೆ ಎಚ್ಚರಿಕೆ ನೀಡುತ್ತದೆ. ಯಡಿಯೂರಪ್ಪ ಹಾಗೂ ಬೊಮ್ಮಾಯಿ ಅವರ ಸರ್ಕಾರದ ಅವಧಿಯಲ್ಲೂ ಎಚ್ಚರಿಕೆ ನೀಡಿದ್ದು, ಬೇಕಾದರೆ ದಾಖಲೆ ಬಿಡುಗಡೆ ಮಾಡುತ್ತೇನೆ. ಅವರು ಕೇವಲ ರಾಜಕೀಯ ಮಾಡುತ್ತಿದ್ದಾರೆ. ಇದು ರಾಜಕೀಯ ಮಾಡುವಂತಹ ದೊಡ್ಡ ವಿಚಾರವಲ್ಲ. ಅವರಿಗೆ ನನ್ನ ರಾಜೀನಾಮೆ ಬೇಕಾದರೆ ತೆಗೆದುಕೊಳ್ಳಲಿ" ಎಂದರು.

ಸತ್ತ ಆರ್ಥಿಕತೆ ಎಂದು ಬಿಜೆಪಿಯವರು ಕವಾಯತ್ತೆ ಮಾಡುತ್ತಿದ್ದಾರೆ ಎಂದು ಕೇಳಿದಾಗ, "ಅವರು ಮಾಡಲಿ, ಅವರ ಸರ್ಕಾರದಲ್ಲಿ ನೀರಾವರಿ ಇಲಾಖೆಯಲ್ಲಿ ಇದ್ದ ಹಣವೆಷ್ಟು, ಅವರು ನೀಡಿದ ಕಾಮಗಾರಿಗಳೆಷ್ಟು? ಎಂದು ಪಟ್ಟಿ ನೀಡಲೇ ಟೀಕೆ ಮಾಡುವುದು ಬಹಳ ಸುಲಭ. ಅಧಿಕಾರದಲ್ಲಿದ್ದಾಗ ನಿಭಾಯಿಸುವುದು ಸವಾಲಿನ ವಿಚಾರ. ನಾವು ಅದನ್ನು ಸಮರ್ಥವಾಗಿ ನಿಭಾಯಿಸುತ್ತೇವೆ. ನಮಗೆ ಜನರ ಬದುಕಿನ ಬಗ್ಗೆ ಕಾಳಜಿ ಇದೆ. ನಾವು ಜಾತಿ, ಧರ್ಮದ ಭಾವನೆ ಮೇಲೆ ರಾಜಕಾರಣ ಮಾಡುವುದಿಲ್ಲ" ಎಂದು ತಿಳಿಸಿದರು.

# ಜ್ಞಾನೇಶ್ ರಾಜೀನಾಮೆ

ಹಕ್ಕಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ ಎಂದು ಕಳವಳ ವ್ಯಕ್ತಪಡಿಸಿದರು. ಈ ವಿಚಾರವನ್ನು ಸಂಸತ್ತು ಸೇರಿದಂತೆ ದೊಡ್ಡ ವೇದಿಕೆಗಳಲ್ಲಿ ಚರ್ಚಿಸಬೇಕು ಮತ್ತು ಚುನಾವಣಾ ಆಯೋಗದ ಹೆಸರಿನಲ್ಲಿ ಅಧಿಕಾರಗಳ ಮೇಲಿನ ಒತ್ತಡ ಹಾಗೂ ಬೆದರಿಕೆ ರಾಜಕಾರಣವನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು.

# ತ.ನಾಡಿಗೆ ನೀರು ಬಿಡುವುದು ಕಷ್ಟ



ಕೆಪಿಎಸ್ಸಿ ವಿಚಾರದಲ್ಲಿ ಕಾನೂನು ಚೌಕಟ್ಟು ನೋಡುತ್ತೇವೆ. ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಮುನ್ನಡೆಯುತ್ತೇವೆ. ನ್ಯಾಯಬದ್ಧ, ಪರಿಶುದ್ಧ ಪರೀಕ್ಷೆ ನಡೆಸೋದು ಎಲ್ಲರ ಜವಬ್ದಾರಿ ಆಗಿರುವುದರಿಂದ ಕಾನೂನಿನಲ್ಲಿ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು.

ರೈತರಿಗೆ ಸಹಾಯ ಮಾಡುವ ನಿಟ್ಟಿನಲ್ಲಿ ಕೇಂದ್ರದ ಸಹಾಯ ಕುರಿತು ರೂಪುರೇಷೆ ಹಾಕಿಕೊಳ್ಳಲಾಗುವುದು. ವಿಪಕ್ಷದವರು ನಿಯೋಗಕ್ಕೆ ಬರುವುದಾಗಿ ಹೇಳಿದ್ದಾರೆ. ಅವರಿಗೆ ಅಭಿನಂದಿಸ್ತೇನೆ ಎಂದು ಹೇಳಿದರು.

ಗೃಹಲಕ್ಷ್ಮಿ ಯೋಜನೆಯನ್ನು ಬಂದ್ ಮಾಡಿ ನೀರಾವರಿ ಯೋಜನೆಗೆ ಆದ್ಯತೆ ನೀಡಬೇಕು ಎಂದು ಬಿಜೆಪಿ ಶಾಸಕ ಸುರೇಶ್ ಗೌಡ ಸೇರಿದಂತೆ ಇತರರು ಹೇಳಿದ್ದಾರೆ.

ಅಲ್ಲದೆ ಬಹಳಷ್ಟು ಜನ ವಿರೋಧಿಸಿದ್ದಾರೆ. ಉಳ್ಳವರನ್ನು ಬಿಟ್ಟು ಬಡವರಿಗೆ ಕೊಡಿ ಎಂಬ ಸಲಹೆ ನೀಡಿದ್ದಾರೆ. ಅದು ಅವರವರ ಅಭಿಪ್ರಾಯ ತಿಳಿಸಿದ್ದಾರೆ ಎಂದಷ್ಟೆ ತಿಳಿಸಿದರು.

ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಟಿ.ರಘುಮೂರ್ತಿ, ಸಚಿವರಾದ ಚೆಲುವರಾಯಸ್ವಾಮಿ, ಮುನಿಯಪ್ಪ, ಬಸವಂತಪ್ಪ, ಶಾಸಕ ಡಾ.ಎಂ. ಚಂದ್ರಪ್ಪ ಸೇರಿದಂತೆ ಇತರರು ಹಾಜರಿದ್ದರು.

# ಎಣ್ಣೆ ಮೇಲಿನ ಆಮದು ಸುಂಕ ಕಡಿತ

2025ರಲ್ಲಿ ಕೇಂದ್ರ ಸರ್ಕಾರ ಕಚ್ಚಾ ಖಾದ್ಯ ತೈಲಗಳ ಮೇಲಿನ ಸುಂಕವನ್ನು ಶೇ.20ರಿಂದ ಶೇ.10ಕ್ಕೆ ಇಳಿಸಿತ್ತು. ಇದೀಗ ಮತ್ತೊಮ್ಮೆ ಸುಂಕ ಕಡಿತ ಮಾಡಿರುವುದರಿಂದ ದೇಶೀಯ ಮಾರುಕಟ್ಟೆಯಲ್ಲಿ ಖಾದ್ಯ ತೈಲಗಳ ಬೆಲೆ ಇಳಿಕೆಯಾಗುವ ನಿರೀಕ್ಷೆ ಮೂಡಿದೆ.

ಹಬ್ಬದ ಸಂದರ್ಭದಲ್ಲಿ ಮನೆ ಬಳಕೆಯ ಜೊತೆಗೆ ಹೋಟೆಲ್, ರೆಸ್ಟೋರೆಂಟ್, ಕ್ಯಾಟರಿಂಗ್ ಮತ್ತು ಸಿಹಿತಿಂಡಿ ತಯಾರಿಕಾ ವಲಯಗಳಲ್ಲಿ ಖಾದ್ಯತೈಲದ ಬೇಡಿಕೆ ಹೆಚ್ಚಾಗಲಿದೆ. ಈ ಸಂದರ್ಭದಲ್ಲಿ ಸುಂಕ ಕಡಿತವಾಗಿರುವುದು ಆಮದು ಮಾಡಿಕೊಳ್ಳುವ ಎಣ್ಣೆಗಳ ಇಳಿದ ವೆಚ್ಚಕ್ಕೆ ಕಾರಣವಾಗಿ, ಚಿಲ್ಲರೆ ಬೆಲೆಗಳ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಭಾರತೀಯ ಸಸ್ಯಜನ್ಯ ತೈಲ ಉತ್ಪಾದಕರ ಸಂಘ ತಿಳಿಸಿದೆ.

ಸಂಘದ ಅಧ್ಯಕ್ಷ ಸುಧಾಕರ್ ದೇಸಾಯಿ ಅವರ ಪ್ರಕಾರ, ಸೂರ್ಯಕಾಂತಿ ಎಣ್ಣೆಯ ಮೇಲಿನ ಸುಂಕ ಕಡಿತವು ವಿಶೇಷವಾಗಿ ಗಮನಾರ್ಹವಾಗಿದ್ದು, ಸೂರ್ಯಕಾಂತಿ ಎಣ್ಣೆ ಹೆಚ್ಚಿನ ಪ್ರಮಾಣದಲ್ಲಿ ಬಳಕೆಯಾಗುವ ದಕ್ಷಿಣ ಭಾರತದಲ್ಲಿ ಇದರ ಪರಿಣಾಮ ಕಂಡುಬರುವ ಸಾಧ್ಯತೆ ಇದೆ. ಆದರೆ, ಗ್ರಾಹಕರಿಗೆ ನಿಜವಾದ ಬೆಲೆ ಇಳಿಕೆಯ ಪ್ರಮಾಣವು ಜಾಗತಿಕ ಖಾದ್ಯ ತೈಲ ಬೆಲೆ, ಸಾಗರ ಸಾಗಣೆ ವೆಚ್ಚ, ರೂಪಾಯಿ ಡಾಲರ್ ವಿನಿಮಯ ದರ ಹಾಗೂ ಮಾರುಕಟ್ಟೆಯಲ್ಲಿರುವ ಹಳೆಯ ದಾಸ್ತಾನು ಸೇರಿದಂತೆ ಹಲವು ಅಂಶಗಳ ಮೇಲೆ ಅವಲಂಬಿತವಾಗಿರಲಿದೆ ಎಂದು ಖಗಿಕಂ ಎಚ್ಚರಿಸಿದೆ.

**ಸುಂಕ ಪರಿಷ್ಕರಣೆ ಮುಖ್ಯಾಂಶಗಳು**

- » **ಕಚ್ಚಾ ಸೂರ್ಯಕಾಂತಿ ಎಣ್ಣೆ: 10% 0%**
- » **ಸಂಸ್ಕರಿತ ಸೂರ್ಯಕಾಂತಿ ಎಣ್ಣೆ: 32.5% 22.5%**
- » **ಕಚ್ಚಾ ತಾಳೆ ಎಣ್ಣೆ: 10% 5%**
- » **ಕಚ್ಚಾ ಸೋಯಾಬೀನ್ ಎಣ್ಣೆ: 10% 5%**
- » **ಸಂಸ್ಕರಿತ ತಾಳೆ ಎಣ್ಣೆ: 32.5% 27.5%**
- » **ಸಂಸ್ಕರಿತ ಸೋಯಾಬೀನ್ ಎಣ್ಣೆ: 32.5% 27.5%**
- » **ಪರಿಷ್ಕೃತ ದರಗಳು ಸೆ.24ರಿಂದ ಜಾರಿ.**

# ರಿಯಲ್ ಎಸ್ಟೇಟ್ ಸರ್ಕಾರ

ಯಾವಸಿದ್ಧತೆಯನ್ನೂಮಾಡಿಕೊಳ್ಳಲಿಲ್ಲ ಎಂದು ದೂರಿದರು

ಪಕ್ಕದ ರಾಜ್ಯವಾದ ತಮಿಳುನಾಡಿನ ಮುಖ್ಯಮಂತ್ರಿ ಬರಪರಿಸ್ಥಿತಿಯ ಎಚ್ಚರಿಕೆಯನ್ನು ಗಂಭೀರವಾಗಿ ತೆ–ಗೆದುಕೊಂಡು ಹತ್ತು ಜನರ ಸಮಿತಿ ರಚಿಸಿ ಬರ ಎದುರಿಸಲು ಏನೆಲ್ಲಾ ಮಾಡಬೇಕು ಎಂಬ ಬಗ್ಗೆ ವರದಿ ಪಡೆದುಕೊಂಡು ಅದರಂತೆ ಕ್ರಮ ಕೈಗೊಂಡಿದ್ದಾರೆ. ಆದರೆ ರಾಜ್ಯದಲ್ಲಿ ಮಾತ್ರ ಏನೂ ಆಗಿಲ್ಲ. ಎಲ್ಲ ಕೇಂದ್ರದ ಮೇಲೆ ಹೊರೆಸಿ ಕೈ ತೊಳೆದುಕೊಂಡು ಬಿಟ್ಟಿದ್ದಾರೆ. ಬರ ಎದುರಿಸಲು ಯಾವುದೇ ಪರಿಹಾರ ಕ್ರಮಗಳು ಇದುವರೆಗೂ ಆಗಿಲ್ಲ ಎಂದರು.

ರಾಜ್ಯದಲ್ಲಿ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಕೃಷಿ ಸಂಶೋಧನಾ ಸಂಸ್ಥೆಗಳಿವೆ. ಯಾವ ಸಂಶೋಧನಾ ಸಂಸ್ಥೆಗಳು ಬರ ಪರಿಸ್ಥಿತಿಯಲ್ಲಿ ಯಾವ ಬೆಳೆ ಬೆಳೆಯಬೇಕು, ರೈತರಿಗೆ ಯಾವ ರೀತಿ ನೆರವಾಗಬೇಕು ಎಂಬ ಬಗ್ಗೆ ಏನನ್ನೂ ಹೇಳಿಲ್ಲ. ಕೋಟ್ಯಂತರ ರೂ. ಅನುದಾನ ಪಡೆಯುವ ಸಂಶೋಧನಾ ಸಂಸ್ಥೆಗಳು ಬಿಳಿ ಆನೆಯಾಗಿವೆ. ರೈತರಿಗೆ ಈ ಸಂಶೋಧನಾ ಸಂಸ್ಥೆಗಳಿಂದ ಯಾವುದೇ ಉಪಯೋಗ ಆಗಿಲ್ಲ. ಹೊಸ ತಳಿಗಳನ್ನು ಕೊಟ್ಟಿಲ್ಲ ಎಂದು ಟೀಕಿಸಿ, ಹತ್ತು ವರ್ಷಗಳಲ್ಲಿ ಕೃಷಿ ಸಂಶೋಧನಾ ಸಂಸ್ಥೆಗಳು ಏನು ಮಾಡಿವೆ ಎಂಬ ವರದಿಯನ್ನು ಮಂಡಿಸಿ ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ಪ್ರತಿವರ್ಷ ನೀರಾವರಿಗೆ ದೊಡ್ಡ ಪ್ರಮಾಣದಲ್ಲಿ ಹಣ ಖರ್ಚು ಮಾಡುತ್ತಿದ್ದೇವೆ. ಆದರೆ ಕೃಷಿ ವಿಸ್ತರಣೆ ಆಗುತ್ತಿಲ್ಲ ಎಂದು ಹೇಳಿದರು.

ಬಿಜೆಪಿ ಪಕ್ಷದಿಂದ ಬರ ಅಧ್ಯಯನಕ್ಕೆ ತಂಡಗಳನ್ನು ಕಳುಹಿಸಲಾಗಿತ್ತು. ನಾನು ಅಧ್ಯಯನ ತಂಡದ ಭಾಗವಾಗಿ ಶಿವಮೊಗ್ಗ ಜಿಲ್ಲೆಯ ಶೆಟ್ಟಿಹಳ್ಳಿಗೆ ಹೋಗಿದ್ದೆ. ಅಲ್ಲಿ ಕೃಷಿಕರು 7 ಕೋಟಿ ಮೀನು ಮರಿಗಳನ್ನು ಉತ್ಪಾದಿಸುತ್ತಿದ್ದರು. ಅವುಗಳನ್ನು ಮೀನುಗಾರಿಕೆ ಇಲಾಖೆ ಖರೀದಿಸಿ ಕೆರೆ, ಅಣೆಕಟ್ಟುಗಳಿಗೆ ಬಿಡುತ್ತಿತ್ತು. ಆದರೆ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಮೀನು ಖರೀದಿಯನ್ನು ಸ್ಥಗಿ–ತಗೊಳಿಸಿ, ಬಡ ಜನರಿಗೆ ಅನ್ಯಾಯ ಮಾಡಿದೆ ಎಂದು ಹೇಳಿದರು.

ರಾಜ್ಯ ಸರ್ಕಾರ ಬರ ಎದುರಿಸಲು ವ್ಯವಸ್ಥಿತ ಸಿದ್ಧತೆಗಳನ್ನು ಮಾಡಿಕೊಳ್ಳಲಿಲ್ಲ. ವಿಬಿಜಿ ರಾಮ್‌ಜಿ ಕಾಯ್ದೆಯನ್ನು ಸಮರೋಪವಾಗಿ ಬಳಸಿಕೊಂಡು ಜನ ಗುಳೆ ಹೋಗುವುದನ್ನು ತಪ್ಪಿಸಬಹುದಿತ್ತು. ಆದರೆ ರಾಜ್ಯ ಸರ್ಕಾರ ವಿಬಿಜಿ ರಾಮಜಿ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಿಲ್ಲ. 100 ರ ಸಂಭ್ರಮದಲ್ಲೇ ಜಾಹೀರಾತುಗಳನ್ನು ಕೊಟ್ಟು ಅದರಲ್ಲೇ ಮುಳುಗಿದೆ ಎಂದರು

ರಾಜ್ಯ ಸರ್ಕಾರ ಎಲ್ಲ ಯೋಜನೆಗಳನ್ನು ಕಡಿತ ಮಾಡುತ್ತಿದೆ. ವೃದ್ಧಾಪ್ಯ ಪಿಂಚಣಿ 7 ತಿಂಗಳಿಂದ ನೀಡಿಲ್ಲ. ಬಿಪಿಎಲ್ ಕಾರ್ಡ್ ರದ್ದು ಮಾಡಿದೆ. 94 ಸಿ, 53 ಸಿ ಎಲ್ಲವೂ ರದ್ದಾಗಿದೆ. ಗೃಹ ಲಕ್ಷ್ಮಿ ಯೋಜನೆಯ ಪರಿಷ್ಕರಣೆಯೂ ನಡೆದಿದೆ. ಈ ಸರ್ಕಾರ ರೈತ ಪರವಾಗಿ ಇಲ್ಲ. ರೈತರಿಗೆ ಆದ್ಯತೆಯೇ ಈ ಸರ್ಕಾರದಲ್ಲಿ ಇಲ್ಲ ಎಂದರು

ಸರ್ಕಾರದ ಮಂತ್ರಿಗಳಾಗಲಿ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾಗಿ ಯಾರೂ ತಾಲ್ಲೂಕುಗಳಿಗೆ ಭೇಟಿ ನೀಡಿಯೇ ಇಲ್ಲ. ರೈತರ ಸಂಕಷ್ಟವನ್ನು ಆಲಿಸಿಲ್ಲ ಎಂದು ಅವರು ಟೀಕಿಸಿದರು.

ಈ ಸರ್ಕಾರ ರೈತ ಪರ ಅಲ್ಲ, ಸರ್ಕಾರದಲ್ಲಿ ರೈತರಿಗೆ ಆದ್ಯತೆ ಇಲ್ಲ. ಈ ಸರ್ಕಾರ ಏನಿದ್ದರೂ ರಿಯಲ್ ಎಸ್ಟೇಟ್ ಸರ್ಕಾರ ಎಂದು ಅವರು ಹೇಳಿದರು.

ಈ ಸರ್ಕಾರದಿಂದ ನಾವು ಯಾವ ನಿರೀಕ್ಷೆಯನ್ನು ಇಟ್ಟುಕೊಳ್ಳುವಂತಿಲ್ಲ. ಬರ ಪರಿಹಾರ, ರೈತರ ಸಂಕಷ್ಟ ಪರಿಹಾರಕ್ಕೂ ಈ ಸರ್ಕಾರ ಏನು ಮಾಡುತ್ತದೆ ಎಂಬ ನಿರೀಕ್ಷೆಯೂ ನಮಗಿಲ್ಲ ಎಂದು ಅವರು ಹೇಳಿದರು.

ಬರಪೀಡಿತ ತಾಲ್ಲೂಕುಗಳ ಘೋಷಣೆ ವಿಚಾರದಲ್ಲೂ ರಾಜ್ಯ ಸರ್ಕಾರ ಸರಿಯಾದ ತೀರ್ಮಾನಗಳನ್ನು ಮಾಡುತ್ತಿಲ್ಲ. ಬರ ಮಾರ್ಗಸೂಚಿ ಪ್ರಕಾರ ತೀರ್ಮಾನಗಳು ಆಗುತ್ತಿಲ್ಲ. ರಾಜಕೀಯ ಪ್ರಭಾವ, ಒತ್ತಡ, ರಾಜೀನಾಮೆ ಇವುಗಳಿಗೆ ಮಣಿದು ಬರಪೀಡಿತ ತಾಲ್ಲೂಕು ಘೋಷಣೆ ಆಗುತ್ತಿದೆ. ಜಗಳೂರಿನಲ್ಲಿ ಬರಘೋಷಣೆಯಾಗಿದ್ದಕ್ಕೆ ಶಾಸಕರೊಬ್ಬರು ಸಂಭ್ರಮೋತ್ಸವ ನಡೆಸಿದ್ದಾರೆ. ಬರ ಸಂಭ್ರಮೋತ್ಸವವೇ. ರೈತರಲ್ಲಿ ವಿಶ್ವಾಸ ಮೂಡಿಸುವ ಕೆಲಸ ಆಗಬೇಕು. ಅದು ಈ ಸರ್ಕಾರದಿಂದ ಆಗುತ್ತಿಲ್ಲ ಎಂದರು.

# ನಂದಿನಿ ಹಾಲು ದರ ಏರಿಕೆ ನಿಶ್ಚಿತ

ಅಲ್ಲದೆ, ರಾಜ್ಯದಲ್ಲಿ ತೀವ್ರ ಬರಗಾಲ ವಿದ್ದು, ಶೇ.70ರಷ್ಟು ಮಳೆ ಕೊರತೆ ಉಂಟಾಗಿದೆ. ಇದರಿಂದ ಹುಲ್ಲಿನ ಕೊರತೆಯಾಗಿದ್ದು, ಪಶು ಆಹಾರದ ಕಚ್ಚಾ ಸಾಮಗ್ರಿ, ಮೆಕ್ಕೆ ಜೋಳ, ಇಂಡಿ–ಬೂಸಾದ ದರ ಶೇ.25ರಷ್ಟು ಏರಿಕೆಯಾಗಿದೆ. ರಾಸುಗಳಿಗೆ ಬಳಸುವ ನೆಲಹಾಸು ದರ ಹೆಚ್ಚಳವಾಗಿದ್ದು, ಪೆಟ್ರೋಲ್, ಡೀಸೆಲ್ ದರವೂ ಏರಿಕೆಯಾಗಿದೆ. ಹೀಗಾಗಿ ದರ ಏರಿಕೆ ಮಾಡಬೇಕು ಎಂದು ಒಕ್ಕೂಟ ಪ್ರಸ್ತಾವನೆ ಇಟ್ಟಿತ್ತು. ಹೀಗಾಗಿ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ದರ ಏರಿಕೆ ಬೇಡಿ–ಕೆಗೆ ಸರ್ಕಾರದಿಂದ ಸಕಾರಾತ್ಮಕ ಸ್ಪಂದನೆ ಸಿಕ್ಕಿದ್ದು, ಹಾಲಿನ ದರವನ್ನು ಲೀಟರ್ ಗೆ 4 ರಿಂದ 5 ರೂಪಾಯಿ ಹೆಚ್ಚಳ ಮಾಡುವುದು ಬಹುತೇಕ ಖಚಿತವಾಗಿದೆ.

ನಂದಿನಿ ಹಾಲಿನ ಮಾರಾಟ ದರವನ್ನು ಕೊನೆಯ ಬಾರಿಗೆ 2025ರ ಏಪ್ರಿಲ್‌ನಲ್ಲಿ ಲೀಟರ್‌ಗೆ 4 ರೂ. ಹೆಚ್ಚಳ ಮಾಡಲಾಗಿತ್ತು. ಇದೀಗ ನಂದಿನಿ ಹಾಲಿನ ದರ 46 ರೂ. ಇದ್ದು, ಬೆಲೆ ಹೆಚ್ಚಳವಾದರೆ ಪರಿಷ್ಕೃತ ದರ ಲೀಟರ್‌ಗೆ 50 ಅಥವಾ 51 ರೂ. ಆಗಲಿದೆ. ಗ್ರಾಹಕರ ಜೇಬಿಗೆ ಕತ್ತರಿ ಬೀಳಲಿದೆ.

ಈ ಹೆಚ್ಚುವರಿ ಮೊತ್ತವನ್ನು ರೈತರು ಮತ್ತು ಹಾಲು ಒಕ್ಕೂಟಗಳಿಗೆ 70:30ರ ಅನುಪಾತದಲ್ಲಿ ಹಂಚಿಕೆ ಮಾಡಲಾಗುತ್ತದೆ. ಪಶು ಆಹಾರ, ಮೇವು, ಸಾಗಣೆ ಮತ್ತು ಪ್ಯಾಕೇ–ಜಿಂಗ್ ವೆಚ್ಚಗಳು ಗಣನೀಯವಾಗಿ ಹೆಚ್ಚಾಗಿರುವುದರಿಂದ ಬೆಲೆ ಏರಿಕೆ ಅನಿವಾರ್ಯವಾಗಿದೆ ಎಂದು ಒಕ್ಕೂಟಗಳು ತಿಳಿಸಿವೆ. ನೆರೆಯ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಈಗಲೂ ಹಾಲಿನ ದರ ಕಡಿಮೆ ಇದೆ ಎನ್ನುವ ವಾದ ರೈತರದ್ದಾಗಿದೆ.

ತುಮಕೂರು (ಮಧುಗಿರಿ), ಚಿಕ್ಕಬಳ್ಳಾಪುರ ಮತ್ತು ಬೆಂಗಳೂರಿನ ಫ್ರೀಡಂ ಪಾರ್ಕ್ ಸೇರಿದಂತೆ ರಾಜ್ಯದ ವಿವಿಧೆಡೆ ರೈತರು ದೊಡ್ಡ ಮಟ್ಟದ ಪ್ರತಿಭಟನೆಗಳನ್ನು ನಡೆಸಿದ್ದರು. ಪ್ರತಿ ಲೀಟರ್ ಹಾಲಿನ ಖರೀದಿ ದರವನ್ನು ಮತ್ತು ಸರ್ಕಾರದ ಪ್ರೋತ್ಸಾಹ ಧನವನ್ನು ತಲಾ 5 ರಿಂದ 8 ರಷ್ಟು ಹೆಚ್ಚಿಸಬೇಕೆಂದು ರೈತ ಮುಖಂಡರು ಸರ್ಕಾರಕ್ಕೆ ಗಡುವು ನೀಡಿದ್ದರು.

# ರಾಜ್ಯಕ್ಕೆ ಕಾವೇರಿ ಸಂಕಷ್ಟ

ಸಿಡಬ್ಲ್ಯುಎಂಎ ಮತ್ತು ಕಾವೇರಿ ನೀರು ನಿಯಂತ್ರಣ ಸಮಿತಿ ನೀರು ಬಿಡುಗಡೆಗೆ ಸಂಬಂಧಿಸಿದಂತೆ ನಿರ್ದೇಶನ ನೀಡುತ್ತಿದ್ದರೂ, ಹಿಂದಿನ ಕೊರತೆಯನ್ನು ಹೇಗೆ ಸರಿದೂಗಿಸಬೇಕು ಎಂಬ ಬಗ್ಗೆ ಸೂಕ್ತ ಆದೇಶ ನೀಡಿಲ್ಲ

ಎಂದು ತಮಿಳುನಾಡು ಆಕ್ಷೇಪಿಸಿತು.

ನೀರಿನ ಕೊರತೆಯಿಂದ ತಮಿಳುನಾಡಿನಲ್ಲಿ ಕುರುವೈ ಬೆಳೆ ಹಾನಿಯಾಗಿದೆ ಎಂದು ಆ ರಾಜ್ಯದ ಪರ ವಕೀಲರು ನ್ಯಾಯಾಲಯಕ್ಕೆ ತಿಳಿಸಿದರು. ಬಾಕಿ ನೀರನ್ನು ಬಿಡುಗಡೆ ಮಾಡದಿದ್ದರೆ ಮುಂದಿನ ಬೆಳೆಗಳ ಮೇಲೂ ಪರಿಣಾಮ ಬೀರುವ ಸಾಧ್ಯತೆಯಿದೆ ಎಂದು ವಾದಿಸಿದರು.

ಈ ಹಿಂದೆ ತಮಿಳುನಾಡು, ಜೂನ್ 1ರಿಂದ ಸೆಪ್ಟೆಂಬರ್ 9ರವರೆಗೆ ಕರ್ನಾಟಕದಿಂದ ಸುಮಾರು 16 ಟಿಎಂಸಿ ನೀರಿನ ಕೊರತೆ ಉಂಟಾಗಿದೆ ಎಂದು ಆರೋಪಿಸಿ, ಆ ಕೊರತೆಯನ್ನು ಪ್ರಮಾಣಾನುಗುಣವಾಗಿ ಸರಿದೂಗಿಸುವಂತೆ ಸುಪ್ರೀಂಕೋರ್ಟ್‌ಗೆ ಮನವಿ ಮಾಡಿತ್ತು. ಸೆಪ್ಟೆಂಬರ್ 9ರಿಂದ 23ರವರೆಗೆ ಬಿಳಿ

ಗುಂಡ್ಲುವಿನಲ್ಲಿ ಪ್ರತಿದಿನ 6,000 ಕ್ಯೂಸೆಕ್ ನೀರು ಹರಿಸುವಂತೆ ಸಿಡಬ್ಲ್ಯುಎಂಎ ನೀಡಿದ್ದ ನಿರ್ದೇಶನ ಜಾರಿಗೊಳಿಸಬೇಕು ಎಂದೂ ಆಗ್ರಹಿಸಿತ್ತು.

ಕರ್ನಾಟಕದಿಂದ ತಮಿಳುನಾಡಿಗೆ ಹರಿಯುವ ಕಾವೇರಿ ನೀರಿನ ಪ್ರಮಾಣವನ್ನು ಬಿಳಿಗುಂಡ್ಲು ಅಂತರರಾಜ್ಯ ಅಳತೆ ಕೇಂದ್ರದಲ್ಲಿ ದಾಖಲಿಸಲಾಗುತ್ತದೆ. ನೀರು ಬಿಡುಗಡೆಗೆ ಸಂಬಂಧಿಸಿದ ವಿವಾದದಲ್ಲಿ ಈ ಅಂಕಿ–ಅಂಶಗಳು ಪ್ರಮುಖವಾಗಿವೆ.

ಆಗಸ್ಟ್‌ನಲ್ಲಿ ಕರ್ನಾಟಕಕ್ಕೆ ಬಿಳಿಗುಂಡ್ಲುವಿನಲ್ಲಿ 9,000 ಕ್ಯೂಸೆಕ್ ನೀರು ಹರಿಸುವಂತೆ ನಿರ್ದೇಶಿಸಿತ್ತು. ಸೆಪ್ಟೆಂಬರ್ 8ರಂದು ನಡೆದ ಸಭೆಯಲ್ಲಿ ಶಿಫಾರಸಿನ ಮೇರೆಗೆ ಮುಂದಿನ 15 ದಿನಗಳ ಕಾಲ 6,000 ಕ್ಯೂಸೆಕ್ ಹರಿಸುವಂತೆ ಮತ್ತೆ ನಿರ್ದೇಶನ ನೀಡಲಾಗಿತ್ತು.

ಕರ್ನಾಟಕದ ವಾದದ ಪ್ರಕಾರ, ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆ ಕೊರತೆ ಹಾಗೂ ಬರ ಪರಿಸ್ಥಿತಿಯಿಂದ ಜಲಾಶಯಗಳ ಮೇಲೆ ಒತ್ತಡವಿದೆ. ರಾಜ್ಯದ ಕುಡಿಯುವ ನೀರಿನ ಅಗತ್ಯ, ನೀರಾವರಿ ಹಾಗೂ ಮುಂದಿನ ಬೇಸಿಗೆಯ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ನೀರು ನಿರ್ವಹಣೆ ಮಾಡಬೇಕಾದ ಅನಿವಾರ್ಯತೆ ಇದೆ.

ಮತ್ತೊಂದೆಡೆ, ತಮಿಳುನಾಡು ತನ್ನ ಪಾಲಿನ ನೀರು ಸಮಯಕ್ಕೆ ಸರಿಯಾಗಿ ದೊರೆಯದಿರುವುದರಿಂದ ಕೃಷಿ ಹಾಗೂ ಕುಡಿಯುವ ನೀರಿನ ಅಗತ್ಯಗಳ ಮೇಲೆ ಪರಿಣಾಮ ಬೀರುತ್ತಿದೆ ಎಂದು ವಾದಿಸುತ್ತಿದೆ. ಹೀಗಾಗಿ ಎರಡೂ ರಾಜ್ಯಗಳ ನಡುವಿನ ನೀರು ಕೊರತೆ ಹಂಚಿಕೆ ಮತ್ತು ಹಿಂದಿನ ಬಾಕಿ ನೀರಿನ ಲೆಕ್ಕಾಚಾರ ಮುಂದಿನ ವಿಚಾರಣೆಯಲ್ಲೂ ಪ್ರಮುಖ ವಿಷಯವಾಗುವ ಸಾಧ್ಯತೆಯಿದೆ.

ಕಾವೇರಿ ನೀರು ಬಿಡುಗಡೆ ಪರಿಸ್ಥಿತಿಯನ್ನು ನಿಯಮಿತವಾಗಿ ಪರಿಶೀಲಿಸುತ್ತಿದ್ದು, ಹವಾಮಾನ, ಜಲಾಶಯಗಳ ಸಂಗ್ರಹ, ಒಳಹರಿವು ಮತ್ತು ಎರಡೂ ರಾಜ್ಯಗಳ ನೀರಿನ ಅಗತ್ಯಗಳನ್ನು ಆಧರಿಸಿ ನಿರ್ದೇಶನಗಳನ್ನು ನೀಡುತ್ತಿವೆ. ಆಗಸ್ಟ್‌ನಲ್ಲಿಯೂ ಪ್ರಾಧಿಕಾರವು ಕರ್ನಾಟಕದ ನೀರು ಬಿಡುಗಡೆ ಕುರಿತು ಹಂತ ಹಂತವಾಗಿ ಆದೇಶಗಳನ್ನು ನೀಡಿತ್ತು.

ಎರಡೂ ರಾಜ್ಯಗಳ ವಾದ ಆಲಿಸಿದ ಬಳಿಕ ಸುಪ್ರೀಂಕೋರ್ಟ್ ಕರ್ನಾಟಕವು ತಮಿಳುನಾಡಿನ ಅರ್ಜಿಗೆ ತನ್ನ ಪ್ರತಿಕ್ರಿಯೆ ಸಲ್ಲಿಸುವಂತೆ ಸೂಚಿಸಿದೆ. ಸಿಡಬ್ಲ್ಯುಎಂಎ ನಿರ್ದೇಶನಗಳ ಅನುಷ್ಠಾನ ಹಾಗೂ ನೀರಿನ ಕೊರತೆಯ ಕುರಿತ ಎರಡೂ ರಾಜ್ಯಗಳ ವಾದಗಳು ಮುಂದಿನ ವಿಚಾರಣೆಯಲ್ಲಿ ಪರಿಶೀಲನೆಗೆ ಬರಲಿವೆ. ಅಕ್ಟೋಬರ್ 12ರಂದು ಪ್ರಕರಣ ಮತ್ತೆ ವಿಚಾರಣೆಗೆ ಬರಲಿದ್ದು, ಆ ವೇಳೆಗೆ ಕರ್ನಾಟಕದ ಅಫಿಡವಿಟ್ ಹಾಗೂ ನೀರು ಬಿಡುಗಡೆಗೆ ಸಂಬಂಧಿಸಿದ ಇತ್ತೀಚಿನ ಅಂಕಿ–ಅಂಶಗಳು ಮಹತ್ವ ಪಡೆಯಲಿವೆ.

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ–ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

**CHANGE OF NAME**

I, **KUSHI V,** D/o Vasanth Jain, R/at No.1, Subramanya Lane, 1st Cross, Akkipet, Bangalore South, P O Chickpet, Bengaluru-560053, have changed my name from **KUSHI V to KHUSHI JAIN,** vide Affidavit dated 22-09-2026 sworn before Notary **K.S.Giridhar,** Bengaluru.

**RAJESH EXPORTS LIMITED**

#4, Batavia Chambers, KK Road, Kumara Park East, Bangalore-560001

CIN: L36911KA1995PLC017077 Tel. 080-22285412; Email. compsect@rajeshindia.com

NOTICE FOR 32nd ANNUAL GENERAL MEETING, REMOTE E-VOTING AND BOOK CLOSURE

NOTICE is hereby given that 32nd Annual General Meeting of the members of Company is scheduled to be held on Wednesday, September 30, 2026 at 12 noon through video conferencing (VC) facility/other audio visual means (OAVM), to transact the business as set forth in the Notice of the AGM. In accordance with the General Circular issued by the Ministry of Corporate Affairs dated May 05, 2020 read with General Circulars dated April 08, 2020, April 13, 2020 (MCA Circulars) and SEBI Circular dated May 12, 2020, the Annual Report 2025-26 containing the Notice of Annual General Meeting has been dispatched through Electronic Mode by National Securities Depositories Limited (NSDL) to those members whose e-mail IDs are registered with the Depository Participant(s), or Registrar & Transfer Agent or Company. The requirement of sending physical copies of the same has been dispensed with vide MCA Circulars and SEBI Circular. The same is also available on the Company's website at http://www.rajeshindia.com/annual-reports/, websites of the Stock Exchanges i.e. Bombay Stock Exchange Limited and National Stock Exchange of India Limited at www.bseindia.com and www.nseindia.com respectively, and also on www.evoting.nsdl.com

Members holding shares either in physical form or dematerialized form, as on the cut-off date (23.09.2026), may cast their vote electronically on the business as set forth in the Notice of the AGM through the electronic voting system of the National Securities Depository Limited (NSDL), details of which are also provided in the AGM Notice. All the members are informed that:

a) The remote e-voting shall commence on September 27, 2026 (9.00 a.m. IST) and will end on September 29, 2026 (5.00 p.m. IST)

b) The cut-off date for determining the eligibility to vote by electronic means is September 23, 2026.

c) Any person who acquires shares of the Company and becomes a member of the Company after the e-mailing of the Notice of the AGM and holds shares as of the cut-off date (September 23, 2026) may obtain the login ID and password by sending a request at **www.evoting.nsdl.com.** However, if a person is already registered with NSDL for e-voting, then the existing user ID and password can be used for casting vote.

d) The remote e-voting module will be disabled by NSDL at 5.00 p.m. IST on September 29, 2026, and once the vote on a resolution is cast by a member, he/she shall not be allowed to change it subsequently. The members who have cast their vote by remote e-voting prior to the AGM may also join the AGM through VC but shall not be entitled to cast their vote again. Only the persons whose names are recorded in the Register of Members or in the Register of Beneficial Owners maintained by the depositories as on the cut-off date shall be entitled to vote using the remote e-voting facility or to vote through e-Voting system in the AGM.

e) Members who have not yet registered their e-mail IDs are requested to register the same in respect of demat holdings with the respective Depository Participant (DP). Members holding equity shares of the company in physical form who have not registered their e-mail IDs may register the same either with our Registrar & Transfer Agent or Company (compsect@rajeshindia.com)

f) In case of queries related to e-voting, members may refer to the Frequently Asked Questions (FAQs) for members and e-voting user manual for members available in the `Downloads' Section of the NSDL's website or call 022-4886 7000 and 1800-21-09911 (cdsl) or contact Mr. Ashok Sherugar, AVP - Technology Group, MUFG Intime India Private Limited, ``Surya'', 35, Mayflower Avenue, Behind Senthil Nagar, Sowripalayam Road, COIMBATORE - 641028, Tel: 0422 4958995, 2539835-836, E-mail ID: ashok.sherugar@linkintime.co.in

g) Register of Members of the Company and Share Transfer Books will remain closed from September 24, 2026 to September 30, 2026 (both days inclusive) for annual closing.

Place: Bangalore
Date: 23.09.2026

For **Rajesh Exports Limited**
Rajesh Mehta (Chairman)

**ನಗರಸಭಾ ಕಾರ್ಯಾಲಯ–ತಿಪಟೂರು**

ತಿಪಟೂರು ತಾಲ್ಲೂಕು. ತುಮಕೂರು ಜಿಲ್ಲೆ. 08134–250785

itstaff_ulb_tiptur@yahoo.co.in, www.tipturcity.mrc.gov.in

**ಕ್ರಸಂ.ನ.ಸ.ತಿ/ಆಶಾ/ಸಿ.ಆರ್/60/2026–27** **ದಿನಾಂಕ: 17–09–2026**

**ಟೆಂಡರ್ / ಕೊಟೇಷನ್ ಪ್ರಕಟಣೆ**

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯ ಆದ್ಯಾದೇಶ 1999–2000ರ ನಿಯಮಗಳಂತೆ ನಗರಸಭೆಯ ವಿವಿಧ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅರ್ಹ ದರ್ಜೆಯ ಗುತ್ತಿಗೆದಾರರಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು KPPP Portal ವೆಬ್‌ಸೈಟ್‌ನಲ್ಲಿ **(https://kppp.karnataka.gov.in)** ಟೆಂಡರ್‌ಗಳನ್ನು ಸಲ್ಲಿಸಬಹುದು. (ಹೆಚ್ಚಿನ ಮಾಹಿತಿಗಳನ್ನು ಕಛೇರಿಯ ಸಮಯದಲ್ಲಿ ಪಡೆಯಬಹುದು). **ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಅಥವಾ ತಿದ್ದುಪಡಿ ಇದ್ದಲ್ಲಿ KPPP Portal ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು.**

| ಕ್ರ. ಸಂ | ಇಂಡೆಂಟ್ ನಂಬರ್ | ಅಂದಾಜು ಮೊತ್ತ ರೂ. ಲಕ್ಷ ಗಳಲ್ಲಿ | ಇ.ಎಂ.ಡಿ ರೂ. ಗಳಲ್ಲಿ | ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ | ಟೆಂಡರ್ ತೆರೆಯುವ ದಿನಾಂಕ |
|---|---|---|---|---|---|
| 1 | DMA/2026-27/SE8435 | 11.00 | 27,500/– | 05.10.2026 | 06.10.2026 |

**ಕರ್ನಾಟಕ ಪುರಸಭೆ ಕಾಯ್ದೆ 1964 ನಿಯಮ 347 ರಂತೆ ಕೆಲಸ ನಿರ್ವಹಿಸಲು ಕೊಟೇಷನ್ ಆಹ್ವಾನಿಸಲಾಗಿದೆ**

| | |
|---|---|
| 1 | ಸ್ವಚ್ಛತಾ ಕೆಲಸ ಮಾಡುವ ಕಾರ್ಮಿಕರ ಸುರಕ್ಷತೆಗಾಗಿ ವಿತರಿಸಲು ಗ್ಲೌಸ್‌ಗಳನ್ನು ಸರಬರಾಜು ಮಾಡುವುದು |
| 2 | ಸ್ವಚ್ಛತಾ ಕೆಲಸ ಮಾಡುವ ಕಾರ್ಮಿಕರ ಸುರಕ್ಷತೆಗಾಗಿ ವಿತರಿಸಲು 3 ವಿಧಧ ಮಾಸ್ಕ್‌ಗಳನ್ನು ಸರಬರಾಜು ಮಾಡುವುದು. |
| 3 | ಸ್ವಚ್ಛತಾ ಕೆಲಸ ಮಾಡುವ ಕಾರ್ಮಿಕರ ಸುರಕ್ಷತೆಗಾಗಿ ವಿತರಿಸಲು ಗಂಬೂಟ್ಸ್‌ಗಳನ್ನು ಸರಬರಾಜು ಮಾಡುವುದು. |
| 4 | SWM Rules-2026/ಸ್ವಚ್ಛ ಸರ್ವೇಕ್ಷಣ/ಜಿ.ಎಫ್.ಸಿ ನಿಯಮದಂತೆ ರಸ್ತೆಗಳಲ್ಲಿ ಓಡಾಡುವ ಸಾರ್ವಜನಿಕರು ಪ್ಲಾಸ್ಟಿಕ್ ಬಾಟಲ್, ಪೇಪರ್, ಕವರ್ ಇತರೆ ಒಣಕಸಗಳನ್ನು ಹಾಕಲು/ಸಂಗ್ರಹಣೆಗೆ ಅನುಕೂಲವಾಗುವಂತೆ ಪ್ರಮುಖ ರಸ್ತೆಗಳ ನಿಗಧಿತ ಜಾಗದಲ್ಲಿ ಅಳವಡಿಸಲು "ಪ್ಲಾಸ್ಟಿಕ್ ಬಾಟಲ್ ಕಲೆಕ್ಷನ್ ಬೂತ್"ಗಳನ್ನು ಸರಬರಾಜು ಮಾಡುವುದು. |
| 5 | ತಿಪಟೂರು ನಗರಸಭೆಯ ಹೊಸ ಚೈನ್‌ಮೌಂಟೆಡ್ ಎಕ್ಸಾವೇಟರ್ ವಾಹನವನ್ನು ಟ್ರಾನ್ಸ್‌ಪೋರ್ಟ್ ಮಾಡಲು ಟ್ರ್ಯಾಕ್ಟರ್‌ಗೆ ಟ್ರೈಲರ್ ಸರಬರಾಜು ಮಾಡಲು ಕೋಟೆಷನ್ ಸಲ್ಲಿಸುವುದು. |
| 6 | ತಿಪಟೂರು ನಗರಸಭೆಯ ಕೆಎ–44–ಎ–1159 ಟಾಟಾ 610 (407) ವಾಹನದ ಮುಂಭಾಗದ ಎರಡು ಟೈರ್‌ಗಳು ಮತ್ತು ಟ್ಯೂಬ್‌ಗಳು ಹಾಗೂ ಫ್ಲಾಪ್‌ಗಳನ್ನು ಸರಬರಾಜು ಮಾಡಲು ಕೋಟೆಷನ್ ಸಲ್ಲಿಸುವುದು. |
| 7 | ದಿ:20.10.2026 ರ ಆಯುಧಪೂಜೆ ಹಬ್ಬದ ಸಲುವಾಗಿ ತಿಪಟೂರು ನಗರಸಭೆಯ ತ್ಯಾಜ್ಯ ಸಂಗ್ರಹಣಾ ವಾಹನಗಳಿಗೆ ಮತ್ತು ಯಂತ್ರೋಪರಕರಣಗಳಿಗೆ ಹಾಗೂ ಘನತ್ಯಾಜ್ಯ ನಿರ್ವಹಣೆ ವಿಲೇವಾರಿ ಘಟಕದ ಯಂತ್ರಗಳಿಗೆ ಹಾಗೂ ನಗರಸಭೆಯ ಆವರಣದಲ್ಲಿರುವ ಗಣಪತಿಗೆ ಹಾಗೂ ಕಛೇರಿಗೆ ಆಯುಧಪೂಜೆ ನೆರವೇರಿಸಲು ಬೇಕಾಗುವ ಪೂಜಾ ಸಾಮಗ್ರಿಗಳು, ಅಲಂಕಾರ ಸಾಮಗ್ರಿಗಳು, ಹೂ, ಹಣ್ಣು, ಸಿಹಿ (ಪ್ರಸಾದ), ಹೂವಿನ ಹಾರ ಹಾಗೂ ಬೇಕಾಗುವ ಐಟಂಗಳನ್ನು ಸರಬರಾಜು ಮಾಡಲು ಕೋಟೇಷನ್ ಸಲ್ಲಿಸುವುದು. |
| 8 | ದಿ:20.10.2026 ರ ಆಯುಧಪೂಜೆ ಹಬ್ಬದ ಸಲುವಾಗಿ ತಿಪಟೂರು ನಗರಸಭೆಯ ನೀರು ಸರಬರಾಜು ಬೋರ್‌ವೆಲ್‌ಗಳು ಹಾಗೂ ಪಂಪಿಂಗ್ ಸ್ಥಾವರಗಳ ಯಂತ್ರೋಪಕರಣಗಳಿಗೆ ಆಯುಧಪೂಜೆ ನೆರವೇರಿಸಲು ಬೇಕಾಗುವ ಪೂಜಾ ಸಾಮಗ್ರಿಗಳು, ಅಲಂಕಾರ ಸಾಮಗ್ರಿಗಳು, ಹೂ, ಹಣ್ಣು, ಸಿಹಿ (ಪ್ರಸಾದ), ಹೂವಿನ ಹಾರ ಹಾಗೂ ಬೇಕಾಗುವ ಐಟಂಗಳನ್ನು ಸರಬರಾಜು ಮಾಡಲು ಕೋಟೇಷನ್ ಸಲ್ಲಿಸುವುದು. |

**ಸೂಚನೆ: ಕೊಟೇಷನ್ ಪ್ರಕಟಣೆಯು ದಿನಪತ್ರಿಕೆಯಲ್ಲಿ ಪ್ರಕಟಣೆ ಆದ 7 ದಿನಗಳ ಒಳಗೆ ಸಂಜೆ 5.30 ರ ಒಳಗೆ ಹಾಗೂ ಕೊನೆಯ ದಿನ ಸರ್ಕಾರಿ ರಜೆ ಬಂದಲ್ಲಿ ಮುಂದಿನ ದಿನ ಕಚೇರಿಗೆ ಕೊಟೇಷನ್ ಸಲ್ಲಿಸುವುದು.**

**ಸಹಿ/– ವಿಶ್ವೇಶ್ವರ್ ಬದರಗಡೆ**
ಪೌರಾಯುಕ್ತರು, ನಗರಸಭೆ, ತಿಪಟೂರು

DIPR/TUM/RO-108/26-27/Oysters

Sanjevani - Printed and Published by B.T.Amuthan on behalf of M/s Karnataka News Publications (P) Ltd. Printed at Dinasudar Printing Division, 11/2, Queen's Road, Bangalore, Karnataka - 560052.
Published at M/s Karnataka News Publications (P) Ltd. 11/2, Queen's Road, Bangalore, Karnataka - 560052. Editor: B.T. Amuthan. RNI No.36667/82

## ನಿರೀಕ್ಷಣಾ ಜಾಮೀನು ಹೈಕೋರ್ಟ್‌ಗೆ ಶಾಂತಾ ಮೊರೆ

ಬೆಂಗಳೂರು,ಸೆ.24– ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್ ಸಿ) ಪಶುವೈದ್ಯಾಧಿಕಾರಿಗಳ ನೇಮಕಾತಿ ಅಕ್ರಮ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಮಾಜಿ ಕೆಪಿಎಸ್‌ಸಿ ಸದಸ್ಯೆ ಶಾಂತಾ ಹೊಸಮನಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ನ್ಯಾಯಮೂರ್ತಿ ವಿಶ್ವಜಿತ್ ಶೆಟ್ಟಿ ಅವರ ಪೀಠದಲ್ಲಿ ಅರ್ಜಿ ವಿಚಾರಣೆ ನಡೆಯಲಿದೆ. ಕೆಲ ದಿನಗಳ ಹಿಂದಷ್ಟೇ ಶಾಂತಾ ಹೊಸಮನಿ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು 52ನೇ ಸಿಸಿಹೆಚ್ ನ್ಯಾಯಾಲಯ ವಜಾಗೊಳಿಸಿತ್ತು. ಈ ಹಿನ್ನೆಲೆಯಲ್ಲಿ ಇದೀಗ ಹೈಕೋರ್ಟ್ ಮೊರೆ ಹೋಗಿದ್ದಾರೆ.



**ಕೆಎಎಸ್ ಪರೀಕ್ಷಾ ಅಕ್ರಮ:**

ಕೆಪಿಎಸ್‌ಸಿ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ಶಾಂತಾ ಹೊಸಮನಿ ವಿರುದ್ಧ ಮಹತ್ವದ ಸಾಕ್ಷ್ಯಗಳು ಲಭ್ಯವಾಗಿವೆ ಎಂದು ಸಿಐಡಿ ತನಿಖೆಯಲ್ಲಿ ಹೇಳಲಾಗಿದೆ. 384 ಕೆಎಎಸ್ ಪರೀಕ್ಷಾ ಅಕ್ರಮ ಪ್ರಕರಣದಲ್ಲೂ ಶಾಂತಾ ಹೊಸಮನಿ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಸಿಐಡಿ ಮೂಲಗಳು ತಿಳಿಸಿವೆ.

ಶಾಂತಾ ಹೊಸಮನಿ ಮೂಲಕ ಕಲಬುರಗಿ, ಬೀದರ್ ಹಾಗೂ ಯಾದಗಿರಿ ಜಿಲ್ಲೆಗಳ 10 ಅಭ್ಯರ್ಥಿಗಳು ಕೆಎಎಸ್ ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದಾರೆ ಎಂಬ ಮಾಹಿತಿಯೂ ತನಿಖಾ ಸಂಸ್ಥೆಗೆ ಲಭ್ಯವಾಗಿದೆ ಎಂದು ತಿಳಿದುಬಂದಿದೆ. ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಅಭ್ಯರ್ಥಿಗಳ ವಿಚಾರವಾಗಿಯೂ ಮುಂದಿನ ಹಂತದಲ್ಲಿ ತನಿಖೆ ನಡೆಯುವ ಸಾಧ್ಯತೆ ಇದೆ.

**ಪ್ರಕರಣದ ಹಿನ್ನೆಲೆ:**

ಕೆಪಿಎಸ್‌ಸಿ ನಡೆಸಿದ ಪಶುವೈದ್ಯಾಧಿಕಾರಿಗಳ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸುವಂತೆ ದೂರುದಾರ ಮಂಜುನಾಥ್ ಹಾಗೂ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಸೇರಿದಂತೆ ಹಲವರು ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು.ಪ್ರಕರಣದ ಸುದೀರ್ಘ ವಿಚಾರಣೆ ನಡೆಸಿದ ಧಾರವಾಡ ಹೈಕೋರ್ಟ್ ಪೀಠವು ಸೆಪ್ಟೆಂಬರ್ 21ರಂದು ಮಹತ್ವದ ಆದೇಶ ನೀಡಿತ್ತು. ಪ್ರಕರಣವನ್ನು ಸಿಬಿಐಗೆ ವಹಿಸುವ ಬದಲು ಹಿರಿಯ ಐಪಿಎಸ್ ಅಧಿಕಾರಿ, ಡಿಜಿಪಿ ಅಲೋಕ್ ಕುಮಾರ್ ನೇತೃತ್ವದಲ್ಲಿ ಉನ್ನತ ಮಟ್ಟದ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲು ಆದೇಶಿಸಿತ್ತು.

**5 ಸದಸ್ಯರ ಎಸ್‌ಐಟಿ ರಚನೆ**

ಡಿಜಿಪಿ ಅಲೋಕ್ ಕುಮಾರ್ ನೇತೃತ್ವದ ಎಸ್‌ಐಟಿಯಲ್ಲಿ ಐಪಿಎಸ್ ಅಧಿಕಾರಿಗಳಾದ ದಿವ್ಯಾ ಗೋಪಿನಾಥ್, ಅನೂಪ್ ಶೆಟ್ಟಿ, ಕುಶಾಲ್ ಚೋಕ್ಸಿ ಹಾಗೂ ಕ್ಷಮಾ ಮಿಶ್ರಾ ಅವರನ್ನು ಒಳಗೊಂಡಂತೆ ಒಟ್ಟು ಐವರು ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ.ಪ್ರಸ್ತುತ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ, ಒಂದು ವಾರದೊಳಗೆ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳು ಹಾಗೂ ತನಿಖಾ ಮಾಹಿತಿಯನ್ನು ನೂತನ ಎಸ್‌ಐಟಿಗೆ ಹಸ್ತಾಂತರಿಸಬೇಕು ಎಂದು ಹೈಕೋರ್ಟ್ ಸೂಚಿಸಿದೆ. ಎಸ್‌ಐಟಿ 100 ದಿನಗಳೊಳಗೆ ಸಮಗ್ರ ತನಿಖೆ ಪೂರ್ಣಗೊಳಿಸಿ ಅಂತಿಮ ವರದಿ ಸಲ್ಲಿಸಬೇಕು. ಅಲ್ಲದೆ, ಹೈಕೋರ್ಟ್ ನಿಗದಿಪಡಿಸಿರುವ 17 ಮಾರ್ಗಸೂಚಿಗಳ ಅನ್ವಯ ತನಿಖೆ ನಡೆಸಬೇಕು ಎಂದು ನಿರ್ದೇಶಿಸಲಾಗಿದೆ.

ಪ್ರತಿ 30 ದಿನಗಳಿಗೊಮ್ಮೆ ತನಿಖೆಯ ಪ್ರಗತಿ ವರದಿಯನ್ನು ಹೈಕೋರ್ಟ್‌ಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆಯೂ ಸೂಚಿಸಲಾಗಿದೆ. ಪ್ರಕರಣದ ಮುಂದಿನ ವಿಚಾರಣೆಯನ್ನು 2027ರ ಜನವರಿ 17ಕ್ಕೆ ಮುಂದೂಡಲಾಗಿದೆ.

# ಕಸದ ಸಮಸ್ಯೆ ಪರಿಹಾರಕ್ಕೆ ಜನರ ಸಹಕಾರ ಅಗತ್ಯ

### ರಸ್ತೆ ಬದಿ, ಖಾಲಿ ಜಾಗಗಳಲ್ಲಿ ಕಸ ಸುರಿಯುತ್ತಿರುವುದರಿಂದ ಸ್ವಚ್ಛತೆ, ಸಂಚಾರಕ್ಕೆ ಸಮಸ್ಯೆಯಾಗುತ್ತಿದೆ : ಕೃಷ್ಣ ಬೈರೇಗೌಡ

ಬೆಂಗಳೂರು, ಸೆ.24: ನಗರದ ಪ್ರಮುಖ ಸಮಸ್ಯೆಗಳಲ್ಲಿ ಒಂದಾಗಿರುವ ಘನತ್ಯಾಜ್ಯ ನಿರ್ವಹಣೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸಲು ರಾಜ್ಯ ಸರ್ಕಾರ ಹಾಗೂ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಇದೇ ಮೊದಲ ಬಾರಿಗೆ ಸಾರ್ವಜನಿಕರೊಂದಿಗೆ ನೇರ ಸಂವಾದ ನಡೆಸಿತು.

ನಗರದ ನೆಹರು ತಾರಾಲಯದಲ್ಲಿ ಬೆಂಗಳೂರು ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ನೇತೃತ್ವದಲ್ಲಿ ನಡೆದ ಸಮಾಲೋಚನಾ ಕಾರ್ಯಕ್ರಮದಲ್ಲಿ ವಿವಿಧ ಸಂಘ–ಸಂಸ್ಥೆಗಳ ಪ್ರತಿನಿಧಿಗಳು, ಕ್ಷೇಮಾಭಿವೃದ್ಧಿ ಸಂಘಗಳ ಪದಾಧಿಕಾರಿಗಳು, ನಿವಾಸಿಗಳು ಹಾಗೂ ಎನ್‌ಜಿಒ ಕಾರ್ಯಕರ್ತರು ಭಾಗವಹಿಸಿ ಕಸದ ಸಮಸ್ಯೆ ಕುರಿತು ತಮ್ಮ ಅಹವಾಲು ಹಾಗೂ ಸಲಹೆಗಳನ್ನು ಹಂಚಿಕೊಂಡರು.

**ಎಲ್ಲೆಂದರಲ್ಲಿ ಕಸ ಸುರಿಯುವುದೇ ದೊಡ್ಡ ಸವಾಲು**

ನಗರದ ಹಲವು ಪ್ರದೇಶಗಳಲ್ಲಿ ಸಾರ್ವಜನಿಕರು ರಸ್ತೆ ಬದಿ, ಖಾಲಿ ಜಾಗ ಹಾಗೂ ರಸ್ತೆ ಮೂಲೆಗಳಲ್ಲಿ ಎಲ್ಲೆಂದರಲ್ಲಿ ಕಸ ಸುರಿಯುತ್ತಿರುವುದರಿಂದ ಸ್ವಚ್ಛತೆ ಹದಗೆಡುವುದಲ್ಲದೆ, ರಸ್ತೆ ಹಾಗೂ ಸಂಚಾರಕ್ಕೂ ಸಮಸ್ಯೆಯಾಗುತ್ತಿದೆ ಎಂದು ಸಚಿವರು ಹೇಳಿದರು.

“ಎಷ್ಟೇ ದಂಡ ವಿಧಿಸಿದರೂ ಕೆಲವು ಕಡೆ ಜನರು ರಸ್ತೆ ಬದಿಯಲ್ಲೇ ಕಸ ಸುರಿಯುವುದನ್ನು ನಿಲ್ಲಿಸುತ್ತಿಲ್ಲ. ಕಸದ ಸಮಸ್ಯೆ ಪರಿಹಾರಕ್ಕೆ ಜಿಬಿಎ ಮಾತ್ರವಲ್ಲ, ಸಾರ್ವಜನಿಕರೂ ಸಹಕಾರ ನೀಡಬೇಕು” ಎಂದು ಮನವಿ ಮಾಡಿದರು.

**ಕಸ ತೆಗೆಯಲು ಹಣ ಕೇಳುತ್ತಿದ್ದಾರೆಂಬ ದೂರು**

ಸಂವಾದದಲ್ಲಿ ಹಲವು ನಿವಾಸಿಗಳು ತಮ್ಮ ಪ್ರದೇಶಗಳಿಗೆ ಪ್ರತಿದಿನ ಕಸ ಸಂಗ್ರಹಿಸುವ ಆಟೋಗಳು ಬರುತ್ತಿಲ್ಲ ಎಂದು ಸಚಿವರ ಗಮನಕ್ಕೆ ತಂದರು. ಕೆಲವೆಡೆ ಮನೆಗಳಿಂದ ಕಸ ಸಂಗ್ರಹಿಸಲು ಸಿಬ್ಬಂದಿ ಹಣ ಕೇಳುತ್ತಿದ್ದಾರೆ ಎಂಬ ದೂರುಗಳನ್ನೂ ಸಾರ್ವಜನಿಕರು ನೀಡಿದರು.



ಸಾರ್ವಜನಿಕರ ದೂರುಗಳನ್ನು ಸಚಿವರು ಒಪ್ಪಿಕೊಂಡು, ಮನೆ ಮನೆ ಕಸ ಸಂಗ್ರಹಣೆಯಲ್ಲಿ ಇನ್ನೂ ಸಮಸ್ಯೆಗಳಿರುವುದು ನಿಜ. ಇದನ್ನು ಹಂತ ಹಂತವಾಗಿ ಸರಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

**5,200 ಆಟೋಗಳಿಂದ ಕಸ ಸಂಗ್ರಹ**

ಪ್ರಸ್ತುತ ನಗರದಲ್ಲಿ ಸುಮಾರು 5,200 ಕಸ ಸಂಗ್ರಹಣಾ ಆಟೋಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರತಿದಿನ ಸುಮಾರು 5,200 ಟನ್ ಕಸವನ್ನು ಮನೆಗಳಿಂದ ಸಂಗ್ರಹಿಸಲಾಗುತ್ತಿದೆ. ಕಸ ಸಂಗ್ರಹಣಾ ವ್ಯವಸ್ಥೆಯನ್ನು ಬಲಪಡಿಸಲು ಹೊಸ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ವರ್ಕ್ ಆರ್ಡರ್ ನೀಡಲಾಗಿದೆ ಎಂದು ಸಚಿವರು ತಿಳಿಸಿದರು.

ಹೊಸ ಟೆಂಡರ್‌ನಲ್ಲಿ ಹೆಚ್ಚಿನ ಸಾಮರ್ಥ್ಯದ ಆಟೋಗಳಿಗೆ ಅವಕಾಶ ಕಲ್ಪಿಸಲಾಗಿದ್ದು, ಪ್ರತಿ ವಾಹನಕ್ಕೆ ಜಿಪಿಎಸ್ ಅಳವಡಿಕೆ ಕಡ್ಡಾಯ ಮಾಡಲಾಗಿದೆ.

ಇದರಿಂದ ಯಾವ ಆಟೋ ಯಾವ ಬೀದಿಗೆ ತೆರಳಿದೆ, ನಿಗದಿತ ಮಾರ್ಗದಲ್ಲಿ ಸಂಚರಿಸಿದೆಯೇ ಎಂಬುದನ್ನು ಮೇಲ್ವಿಚಾರಣೆ ಮಾಡಲು ಸಾಧ್ಯವಾಗಲಿದೆ ಎಂದರು.

ಹೊಸ ಟೆಂಡರ್ ಅನ್ನು 21 ಟೆಂಡರ್‌ಗಳ ಮೂಲಕ 33 ಪ್ಯಾಕೇಜ್‌ಗಳಲ್ಲಿ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಪ್ರತಿ ವಾರ್ಡ್‌ನಲ್ಲಿಯೂ ಕಸ ಸಂಗ್ರಹಣಾ ವ್ಯವಸ್ಥೆಯ ಬಗ್ಗೆ ವಿಶೇಷ ಪರಿಶೀಲನೆ ಹಾಗೂ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಹೇಳಿದರು.

**ಕಸವನ್ನು ಮನೆಯಲ್ಲೇ ವಿಂಗಡಿಸಿ**

ಕೆಲವು ವಾರ್ಡ್‌ಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಸಂಗ್ರಹವಾಗುವ ತ್ಯಾಜ್ಯವನ್ನು ಸ್ಥಳೀಯ ಮಟ್ಟದಲ್ಲೇ ಕಾಂಪೋಸ್ಟ್ ಮಾಡುವ ವ್ಯವಸ್ಥೆ ರೂಪಿಸಬೇಕು.

ಮನೆಗಳಲ್ಲಿ ಉತ್ಪತ್ತಿಯಾಗುವ ಕಸವನ್ನು ವಿಂಗಡಿಸಿ, ನಿಗದಿತ ರೀತಿಯಲ್ಲಿ ಕಸ ಸಂಗ್ರಹಿಸುವ ವಾಹನಗಳಿಗೆ ನೀಡಬೇಕು ಎಂದು ಸಚಿವರು ಹೇಳಿದರು.

ಬೆಳಗ್ಗೆ ಕೆಲಸಕ್ಕೆ ತೆರಳುವ ನಾಗರಿಕರು ಕಸವನ್ನು ಬ್ಯಾಗ್ ಅಥವಾ ಬಕೆಟ್‌ನಲ್ಲಿ ಸಂಗ್ರಹಿಸಿ ಇಟ್ಟರೆ, ಕಸ ಸಂಗ್ರಹಿಸುವ ವ್ಯವಸ್ಥೆ ಮೂಲಕ ಅದನ್ನು ತೆಗೆದುಕೊಳ್ಳಲು ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕರು ಸಹಕರಿಸಿದರೆ ಮಾತ್ರ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಾಧ್ಯ ಎಂದು ಮನವಿ ಮಾಡಿದರು.

**ದಿನಕ್ಕೆ ಎರಡು ಬಾರಿ ಕಸ ಸಂಗ್ರಹಣೆಗೆ ಮನವಿ**

ಕೆಲ ಪ್ರದೇಶಗಳಲ್ಲಿ ದಿನಕ್ಕೆ ಎರಡು ಬಾರಿ ಕಸ ಸಂಗ್ರಹಿಸಬೇಕು ಎಂಬ ಬೇಡಿಕೆಯೂ ಸಾರ್ವಜನಿಕರಿಂದ ಕೇಳಿಬಂದಿದೆ. ಈ ಕುರಿತು ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ಭರವಸೆ ನೀಡಿದರು.

**ಶೇ.30 ಪೌರಕಾರ್ಮಿಕರು ಗೈರು?**

ಕೆಲವು ವಾರ್ಡ್‌ಗಳಲ್ಲಿ ಸುಮಾರು ಶೇ.30ರಷ್ಟು ಪೌರಕಾರ್ಮಿಕರು ಕೆಲಸಕ್ಕೆ ಹಾಜರಾಗುತ್ತಿಲ್ಲ ಎಂಬ ಅಂಶವನ್ನೂ ಸಚಿವರು ಪ್ರಸ್ತಾಪಿಸಿದರು. “ಪೌರಕಾರ್ಮಿಕರು ಕೆಲಸಕ್ಕೆ ಹಾಜರಾಗದಿದ್ದರೆ ನಗರವನ್ನು ಹೇಗೆ ಸ್ವಚ್ಛವಾಗಿಟ್ಟುಕೊಳ್ಳಲು ಸಾಧ್ಯ?” ಎಂದು ಪ್ರಶ್ನಿಸಿದ ಅವರು, ಸಿಬ್ಬಂದಿಯ ಹಾಜರಾತಿ ಹಾಗೂ ಕಾರ್ಯನಿರ್ವಹಣೆಯ ಮೇಲೂ ಕಟ್ಟುನಿಟ್ಟಿನ ನಿಗಾ ಅಗತ್ಯವಿದೆ ಎಂದರು.

**ಸಾರ್ವಜನಿಕರ ಸಲಹೆ ಆಧರಿಸಿ ಕ್ರಮ**

ಮನೆ ಮನೆ ಕಸ ಸಂಗ್ರಹಣೆ ಸೇರಿದಂತೆ ಘನತ್ಯಾಜ್ಯ ನಿರ್ವಹಣೆಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಇದೇ ಮೊದಲ ಬಾರಿಗೆ ಸಾರ್ವಜನಿಕರೊಂದಿಗೆ ನೇರವಾಗಿ ಸಮಾಲೋಚನೆ ನಡೆಸಲಾಗಿದೆ. ಸಂವಾದದಲ್ಲಿ ಬಂದ ಸಲಹೆಗಳನ್ನು ಪರಿಶೀಲಿಸಿ, ಸಾಧ್ಯವಿರುವ ಕ್ರಮಗಳನ್ನು ಜಾರಿಗೆ ತರಲಾಗುವುದು ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

ಸಾರ್ವಜನಿಕರು ಕಸವನ್ನು ಎಲ್ಲೆಂದರಲ್ಲಿ ಸುರಿಯದೆ, ಕಸ ವಿಂಗಡಣೆ ಮತ್ತು ಸಂಗ್ರಹಣೆಯಲ್ಲಿ ಜಿಬಿಎಗೆ ಸಹಕಾರ ನೀಡಿದರೆ ಮಾತ್ರ ಬೆಂಗಳೂರನ್ನು ಸ್ವಚ್ಛವಾಗಿಡಲು ಸಾಧ್ಯ ಎಂದು ಸಚಿವರು ಮನವಿ ಮಾಡಿದರು.

## ಅಮೆರಿಕದಲ್ಲಿ ಮಾಧ್ಯಮ ನಿರ್ಬಂಧ ತೆರವಿಗೆ ಕೋರ್ಟ್ ಸೂಚನೆ

ವಾಷಿಂಗ್ಟನ್, ಸೆ.24: ಸಿಎನ್‌ಎನ್, ಎಂಎಸ್ ನೌ ಮತ್ತು ಪಾಲಿಟಿಕೊ ಸಂಸ್ಥೆಗಳ ವರದಿಗಾರರಿಗೆ ನೀಡಲಾಗಿದ್ದ ವೈಟ್ ಹೌಸ್ ಪ್ರವೇಶ ನಿರ್ಬಂಧವನ್ನು ತಕ್ಷಣವೇ ತೆರವುಗೊಳಿಸಿ, ಪತ್ರಕರ್ತರ ಪ್ರೆಸ್ ಕ್ರೆಡೆನ್ಷಿಯಲ್‌ಗಳನ್ನು ಮರುಸ್ಥಾಪಿಸುವಂತೆ ಫೆಡರಲ್ ನ್ಯಾಯಾಧೀಶರು ಇಂದು ಮುಂಜಾನೆ ವೈಟ್ ಹೌಸ್ ಆಡಳಿತಕ್ಕೆ ಆದೇಶಿಸಿದ್ದಾರೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆಡಳಿತವು ಈ ಮಾಧ್ಯಮ ಸಂಸ್ಥೆಗಳ ಪ್ರವೇಶವನ್ನು ನಿರ್ಬಂಧಿಸಿರುವುದು, ಸಂವಿಧಾನದ ನ್ಯಾಯಸಮ್ಮತ ಪ್ರಕ್ರಿಯೆಯ ಹಕ್ಕುಗಳನ್ನು ಉಲ್ಲಂಘಿಸಿರುವ ಸಾಧ್ಯತೆ ಇದೆ ಎಂದು ಅಮೆರಿಕದ ಜಿಲ್ಲಾ ನ್ಯಾಯಾಧೀಶ ಟಿಮೋಥಿ ಕೆಲ್ಲಿ ತೀರ್ಪು ನೀಡಿದ್ದಾರೆ.

ತುರ್ತು ವಿಚಾರಣೆಯ ಕೆಲವೇ ಗಂಟೆಗಳ ಬಳಿಕ ನ್ಯಾಯಾಧೀಶರು ಈ ಆದೇಶ ಹೊರಡಿಸಿದ್ದು, ಈ ಆದೇಶವು ಎರಡು ವಾರಗಳ ಕಾಲ ಜಾರಿಯಲ್ಲಿರಲಿದೆ.

ಶನಿವಾರ ವೈಟ್ ಹೌಸ್ ಆವರಣಕ್ಕೆ ಪ್ರವೇಶ ನಿರಾಕರಿಸಿದ ಬಳಿಕ ಸಿಎನ್‌ಎನ್, ಎಂಎಸ್ ನೌ, ಪಾಲಿಟಿಕೊ ಸಂಸ್ಥೆಗಳು ನ್ಯಾಯಾಲಯದ ಮೊರೆ ಹೋಗಿದ್ದವು. ರಾಷ್ಟ್ರೀಯ ಭದ್ರತೆಯ ಕಾರಣಗಳನ್ನು ಉಲ್ಲೇಖಿಸಿ ಆಡಳಿತವು ಈ ಸಂಸ್ಥೆಗಳಿಗೆ ಪತ್ರಗಳನ್ನು ಕಳುಹಿಸಿತ್ತು. ಆದರೆ, ಪ್ರವೇಶ ನಿರ್ಬಂಧಿಸಿದ ನಂತರವೇ ಆ ಪತ್ರಗಳನ್ನು ಕಳುಹಿಸಲಾಗಿತ್ತು.

“ತಮ್ಮ ಹಾರ್ಡ್ ಪಾಸ್‌ಗಳನ್ನು ರದ್ದುಗೊಳಿಸುವ ಮೊದಲು ಅರ್ಜಿದಾರರಿಗೆ ಯಾವುದೇ ನೋಟಿಸ್ ಅಥವಾ ತಮ್ಮ ವಾದ ಮಂಡಿಸಲು ಅವಕಾಶ ನೀಡಲಾಗಿಲ್ಲ ಎಂಬುದನ್ನು ಪ್ರತಿವಾದಿಗಳು ನಿರಾಕರಿಸುವುದಿಲ್ಲ,” ಎಂದು ಕೆಲ್ಲಿ ತಮ್ಮ ಆದೇಶದಲ್ಲಿ ಹೇಳಿದ್ದಾರೆ.

2018ರಲ್ಲಿ ಸಿಎನ್ ಎನ್ ನ ವೈಟ್ ಹೌಸ್ ವರದಿಗಾರ ಜಿಮ್ ಅಕೋಸ್ಟಾ ಅವರ ಹಾರ್ಡ್ ಪಾಸ್ ರದ್ದುಗೊಳಿಸಿದ ಪ್ರಕರಣದಲ್ಲಿಯೂ ಇದೇ ರೀತಿಯ ಕಾನೂನು ತತ್ವವನ್ನು ನ್ಯಾಯಾಧೀಶರು ಅನ್ವಯಿಸಿದ್ದರು.

ನ್ಯಾಯಾಲಯದ ವಿಚಾರಣೆಯಲ್ಲಿ, ಈ ಮೂರು ಮಾಧ್ಯಮ ಸಂಸ್ಥೆಗಳನ್ನು ನಿರ್ಬಂಧಿಸಿರುವುದಕ್ಕೆ ಆಡಳಿತವು ರಾಷ್ಟ್ರೀಯ ಭದ್ರತೆಯ ಕಾರಣಗಳನ್ನು ಮುಂದಿಟ್ಟಿತ್ತು.

ಈ ಸಂಸ್ಥೆಗಳು ಪ್ರಕಟಿಸಿದ ಕೆಲವು ನಿರ್ದಿಷ್ಟ ವರದಿಗಳನ್ನೂ ಆಡಳಿತ ಉಲ್ಲೇಖಿಸಿತ್ತು. ಆದರೆ, ನ್ಯಾಯಾಧೀಶ ಕೆಲ್ಲಿ ಆ ವರದಿಗಳನ್ನು “ಸಾಮಾನ್ಯ ರೀತಿಯ ವರದಿಗಳು” ಎಂದು ವರ್ಣಿಸಿದ್ದು, ರಾಷ್ಟ್ರೀಯ ಭದ್ರತೆಯೇ ನಿಜವಾದ ಕಾರಣ ಎಂಬ ವಾದದ ಬಗ್ಗೆ ತಾವು “ಸಂದೇಹ ಹೊಂದಿರುವುದಾಗಿ” ಹೇಳಿದ್ದಾರೆ.

## ಬೆಳ್ಳಿ ಗೆದ್ದ ರೋಶಿಬಿನಾ ದೇವಿ

20th Asian Games Aichi-Nagoya 2026




ನವದೆಹಲಿ, ಸೆ.24–ಏಷ್ಯನ್ ಕ್ರೀಡಾಕೂಟದ 5ನೇ ದಿನವಾದ ಇಂದು ಮಹಿಳೆಯರ 60 ಕೆಜಿ ಸ್ಯಾಂಡಾ ಸ್ಪರ್ಧೆಯ ಫೈನಲ್‌ನಲ್ಲಿ ಚೀನಾದ ಜಾಂಗ್ ಕ್ಸಿಯಾಯು ವಿರುದ್ಧ 0–2 ಅಂತರದಿಂದ ಸೋತ ರೋಶಿಬಿನಾ ದೇವಿ ಬೆಳ್ಳಿ ಪದಕ ಗೆದ್ದರು.ಇದು ರೋಶಿಬಿನಾ ಅವರ ಸತತ ಮೂರನೇ ಏಷ್ಯನ್ ಗೇಮ್ಸ್ ಪದಕವಾಗಿದೆ. ಸತತ ಮೂರು ಏಷ್ಯನ್ ಗೇಮ್ಸ್ ಪದಕಗಳನ್ನು ಗೆದ್ದ ಮೊದಲ ಭಾರತೀಯ ಮಹಿಳಾ ವುಶು ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅವರು 2018 ರಲ್ಲಿ ಜಕಾರ್ತದಲ್ಲಿ ಕಂಚು ಮತ್ತು 2023 ರಲ್ಲಿ ಹ್ಯಾಂಗ್ಝೌನಲ್ಲಿ ಬೆಳ್ಳಿ ಗೆದ್ದರು.

ರೋಯಿಂಗ್‌ನಲ್ಲಿ, ಸತ್ನಮ್ ಸಿಂಗ್ ಮತ್ತು ಸಲ್ಮಾನ್ ಖಾನ್ ಜೋಡಿ ಪುರುಷರ ಡಬಲ್ಸ್ ಸ್ಕಲ್ ಸ್ಪರ್ಧೆಯಲ್ಲಿ 6:13.25 ನಿಮಿಷಗಳ ಸಮಯದೊಂದಿಗೆ ಮೂರನೇ ಸ್ಥಾನ ಪಡೆದರು.

ಭಾರತ ಇದುವರೆಗೆ ಒಂದು ಚಿನ್ನ, ಆರು ಬೆಳ್ಳಿ ಮತ್ತು ಏಳು ಕಂಚಿನ ಪದಕಗಳು ಸೇರಿದಂತೆ 14 ಪದಕಗಳನ್ನು ಗೆದ್ದಿದೆ. ಪದಕ ಪಟ್ಟಿಯಲ್ಲಿ ಭಾರತ 14 ನೇ ಸ್ಥಾನದಲ್ಲಿದೆ.

## ಕೆಪಿಎಸ್‌ಸಿ ಅಕ್ರಮ: ಸಿಬಿಐ ತನಿಖೆ ಛಲವಾದಿ ಆಗ್ರಹ

ಬೆಂಗಳೂರು, ಸೆ. 24– ಕರ್ನಾಟಕ ಲೋಕಸೇವಾ ಆಯೋಗ(ಕೆಪಿಎಸ್ ಸಿ)ಅಕ್ರಮ ನೇಮಕಾತಿ ಪ್ರಕರಣವನ್ನು ಸಿಬಿಐ ತನಿಖೆಗೆ ಒಳಪಡಿಸಬೇಕು ಎಂದು ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಮೇಲ್ಮನೆಯಲ್ಲಿಂದು ಒತ್ತಾಯಿಸಿದರು.

ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯ ಬಗ್ಗೆ ಚರ್ಚೆ ನಡೆಸಲು ಕಾಂಗ್ರೆಸ್ ನ ರವಿ ಅವರಿಗೆ ಸಭಾಪತಿ ಸಲೀಂ ಅಹಮದ್ ಅವರು ಅವಕಾಶ ನೀಡಿದ ವೇಳೆ ಮಧ್ಯ ಪ್ರವೇಶಿಸಿದ ಛಲವಾದಿ ನಾರಾಯಣಸ್ವಾಮಿ ಅವರು ಕೆಪಿಎಸ್ ಸಿ ಅಕ್ರಮ ನೇಮಕಾತಿ ಪ್ರಕರಣದ ಸಂಬಂಧಿಸಿದಂತೆ ಚರ್ಚೆ ನಡೆಸಲು ನಿಲಯವಳಿ ಸೂಚನೆ ಮಂಡನೆ ಮಾಡಲು ಅವಕಾಶ ಮಾಡಿಕೊಡುವಂತೆ ಆಗ್ರಹಿಸಿದರು.

ಕೆಪಿಎಸ್ ಸಿ ಅಕ್ರಮ ನೇಮಕಾತಿ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಿದರೆ ಕೆಲವು ಸಚಿವರು ಜೈಲಿಗೆ ಹೋಗುತ್ತಾರೆ ಎಂದು ಆಗ್ರಹಿಸಿದಾಗ ಸಭಾಪತಿ ಸಲೀಂ ಅಹಮದ್ ಅವರು ಪಿಎಸ್ ಇ ಸಭೆಯಲ್ಲಿ ಈ ವಿಷಯವು ಪ್ರಸ್ತಾಪಕ್ಕೆ ಬಂದಿಲ್ಲ ಎಂದು ಹೇಳಿದರು.

ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಗಮನಕ್ಕೆ ತಂದು ನಿರ್ಧಾರ ಕೈಗೊಳ್ಳುವೆ ಬರ ಕುರಿತು ಚರ್ಚೆ ನಡೆಸಬೇಕಿದೆ ಅದಕ್ಕೆ ಮುಖ್ಯಮಂತ್ರಿಗಳು ಉತ್ತರ ನೀಡಬೇಕಿದೆ ಬಳಿಕ ಈ ವಿಷಯ ಚರ್ಚೆ ಕೈಗೊಳ್ಳುವ ಭರವಸೆ ನೀಡಿದರು.



ಬೆಂಗಳೂರು ದಕ್ಷಿಣ ನಗರಪಾಲಿಕೆ ವ್ಯಾಪ್ತಿಯ ಕನವನಹಳ್ಳಿ ವಾರ್ಡ್ ಲೇಔಟ್‌ಗಳಲ್ಲಿ ಕಸ ವಿಲೇವಾರಿ ಕಾರ್ಯವೈಖರಿ, ಕಸ ಸಂಗ್ರಹಣಾ ಹಾಗೂ ಸಮುದಾಯ ತ್ಯಾಜ್ಯ ಸಂಸ್ಕರಣಾ ವ್ಯವಸ್ಥೆಗಳ ಕುರಿತು ಪಾಲಿಕೆ ಆಯುಕ್ತ ಕೆ.ಎನ್. ರಮೇಶ್‌ರವರು ಖುದ್ದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.



ದಲಿತರ ಮೇಲಿನ ದೌರ್ಜನ್ಯ ವಿರೋಧಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಅವರ ನೇತೃತ್ವದಲ್ಲಿಂದು ನಗರದ ಫ್ರೀಡಂ ಪಾರ್ಕ್‌ನಲ್ಲಿ ಮುಖಂಡರು ಹಾಗೂ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

## ಟ್ರಂಪ್ ಹೇಳಿಕೆಗೆ ಇರಾನ್ ತಿರುಗೇಟು

ನವದೆಹಲಿ,ಸೆ.24–ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇರಾನ್ ದೇಶವನ್ನು ಸಂಪೂರ್ಣವಾಗಿ ನಾಶ ಮಾಡುವುದಾಗಿ ಬೆದರಿಕೆ ಹಾಕಿದ್ದಾರೆ. ಈ ಹೇಳಿಕೆಗೆ ಇರಾನ್ ವಿದೇಶಾಂಗ ಕಚೇರಿಯು ವ್ಯಂಗ್ಯವಾಗಿ ಮರುಉತ್ತರ ನೀಡಿದೆ.



ಜಿಂಬಾಬ್ವೆಯಲ್ಲಿರುವ ಇರಾನ್ ರಾಯಭಾರ ಕಚೇರಿಯು ತೆಲುಗು ನಟ ನಂದಮೂರಿ ಬಾಲಕೃಷ್ಣ ಅಭಿನಯದ ‘ಭಗವಂತ್ ಕೇಸರಿ’ ಸಿನಿಮಾದ ಸಾಹಸ ದೃಶ್ಯವೊಂದನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದೆ.

ಆ ವಿಡಿಯೋದೊಂದಿಗೆ, “ಟ್ರಂಪ್ ಅವರು ಇರಾನ್ ದೇಶವನ್ನು ಅಳಿಸಿ ಹಾಕುವ ಕುರಿತು ಮಾತನಾಡುತ್ತಿದ್ದಾರೆ. ಆದರೆ ಇರಾನ್ ಬಳಿ ತಕ್ಕ ರಕ್ಷಣೆ ಇದೆ ಎನ್ನುವುದು ಅವರಿಗೆ ತಿಳಿದಿದೆ. ಅವರು ಇತ್ತೀಚೆಗೆ ಹಾಲಿವುಡ್ ಬಿಟ್ಟು ಬಾಲಿವುಡ್ ಚಿತ್ರಗಳನ್ನು ನೋಡುತ್ತಿದ್ದಾರೆ ಎನಿಸುತ್ತದೆ” ಎಂದು ಬರೆದುಕೊಂಡಿದೆ.

ಆದರೆ, ರಾಯಭಾರ ಕಚೇರಿಯು ಇದನ್ನು ಬಾಲಿವುಡ್ ಸಿನಿಮಾ ಎಂದು ಕರೆದಿರುವುದು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಗೆ ಗ್ರಾಸವಾಗಿದೆ. ನೆಟ್ಟಿಗರು ಇದು ಬಾಲಿವುಡ್ ಚಿತ್ರವಲ್ಲ, ತೆಲುಗು ಚಿತ್ರರಂಗಕ್ಕೆ ಸೇರಿದ ಟಾಲಿವುಡ್ ಸಿನಿಮಾ ಎಂದು ತಿದ್ದುಪಡಿ ಮಾಡಿದ್ದಾರೆ.

ಇರಾನ್ ಕಚೇರಿಯು ಇದನ್ನು ಬಾಲಿವುಡ್ ಚಿತ್ರ ಎಂದು ಕರೆದಿರುವುದಕ್ಕೆ ಜಾಲತಾಣಗಳಲ್ಲಿ ಜನರು ತಮಾಷೆ ಮಾಡಿದ್ದಾರೆ.

ಬಾಲಕೃಷ್ಣ ಅವರ ಚಿತ್ರವು ಹಿಂದಿ ಚಿತ್ರರಂಗಕ್ಕೆ ಸೇರಿದ್ದಲ್ಲ, ಅದು ತೆಲುಗು ಚಿತ್ರರಂಗದ್ದು ಎಂದು ನೆಟ್ಟಿಗರು ನೆನಪಿಸಿದ್ದಾರೆ.

## ಕ್ಸಿ ಜಿನ್‌ಪಿಂಗ್‌ಗೆ ಟ್ರಂಪ್ ಭವ್ಯ ಸ್ವಾಗತ

ವಾಷಿಂಗ್ಟನ್, ಸೆ.24: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರನ್ನು ಜಾಯಿಂಟ್ ಬೇಸ್ ಆಂಡ್ರ್ಯೂಸ್‌ನಲ್ಲಿ ಭವ್ಯ ಸೇನಾ ಗೌರವದೊಂದಿಗೆ ಸ್ವಾಗತಿಸಿದರು. ಮೂರು ದಿನಗಳ ಅಮೆರಿಕ ಪ್ರವಾಸಕ್ಕಾಗಿ ಚೀನಾ ಅಧ್ಯಕ್ಷರು ವಾಷಿಂಗ್ಟನ್‌ಗೆ ಆಗಮಿಸಿದ್ದು, ಈ ಸಂದರ್ಭದಲ್ಲಿ ಅದ್ಧೂರಿ ಸ್ವಾಗತ ಸಮಾರಂಭ ಏರ್ಪಡಿಸಲಾಗಿತ್ತು.

ಕ್ಸಿ ಜಿನ್‌ಪಿಂಗ್ ಹಾಗೂ ಚೀನಾ ಪ್ರಥಮ ಮಹಿಳೆ ಪೆಂಗ್ ಲಿಯುವಾನ್ ಅವರು ಮೇರಿಲ್ಯಾಂಡ್‌ನ ಸೇನಾ ವಾಯುನೆಲೆಗೆ ಆಗಮಿಸಿದಾಗ, ಟ್ರಂಪ್ ಮತ್ತು ಪ್ರಥಮ ಮಹಿಳೆ ಮೆಲಾನಿಯಾ ಟ್ರಂಪ್ ಅವರು ಅವರನ್ನು ಬರಮಾಡಿಕೊಂಡರು.

ಸ್ವಾಗತ ಸಮಾರಂಭದಲ್ಲಿ 100 ಅಡಿ ಉದ್ದದ ಕೆಂಪು ಹಾಸು, ಸಲ್ಯೂಟ್ ಬ್ಯಾಟರಿ, 21 ಸದಸ್ಯರ ಗೌರವ ಪಡೆ ಹಾಗೂ ಅಮೆರಿಕ ಮತ್ತು ಚೀನಾ ಧ್ವಜಗಳನ್ನು ಹಿಡಿದಿದ್ದ ಬಣ್ಣದಳಗಳು ಗಮನ ಸೆಳೆದವು.

ಇದರ ಜತೆಗೆ ಸ್ವಾಗತದ ಭಾಗವಾಗಿ ಎರಡು ಬಿ–1 ಬಾಂಬರ್ ಯುದ್ಧವಿಮಾನಗಳು ವಾಯುನೆಲೆಯ ಮೇಲಿನಿಂದ ಹಾರಾಟ ನಡೆಸಿದವು. ಅಮೆರಿಕದ ದೀರ್ಘದೂರದ ಬಾಂಬರ್ ಪಡೆಗಳ ಪ್ರಮುಖ ಭಾಗವಾಗಿರುವ ಈ ಸೂಪರ್‌ಸಾನಿಕ್ ವಿಮಾನಗಳು, ಕಡಿಮೆ ಎತ್ತರದ ಹಾರಾಟದ ವೇಳೆ ಉಂಟುಮಾಡುವ ಭಾರೀ ಶಬ್ದಕ್ಕೆ ಪ್ರಸಿದ್ಧವಾಗಿವೆ.

ಟ್ರಂಪ್ ಮತ್ತು ಮೆಲಾನಿಯಾ ಅವರೊಂದಿಗೆ ಸಂಕ್ಷಿಪ್ತ ಮಾತುಕತೆ ನಡೆಸಿದ ಬಳಿಕ ಕ್ಸಿ ಮತ್ತು ಪೆಂಗ್ ಲಿಯುವಾನ್ ಅವರು ಕೆಂಪು ಹಾಸಿನ ಮೂಲಕ ಸಾಗಿದರು. ನಂತರ ಅವರು ಮೋಟಾರ್ ಕೇಡ್‌ನಲ್ಲಿ ವಾಯುನೆಲೆಯಿಂದ ತೆರಳಿದರು. ಟ್ರಂಪ್ ಮತ್ತು ಮೆಲಾನಿಯಾ ಅವರು ಮೆರೈನ್ ಒನ್ ಹೆಲಿಕಾಪ್ಟರ್‌ನಲ್ಲಿ ಶ್ವೇತಭವನಕ್ಕೆ ಮರಳಿದರು.



ಕ್ಸಿ ಜಿನ್‌ಪಿಂಗ್ ಅವರ ಈ ಭೇಟಿ 2015ರ ನಂತರ ವಾಷಿಂಗ್ಟನ್‌ಗೆ ಅವರ ಮೊದಲ ಪ್ರವಾಸವಾಗಿದೆ. ಈ ಸಂದರ್ಭದಲ್ಲಿ ಇಬ್ಬರು ನಾಯಕರು ವ್ಯಾಪಾರ, ಸುಂಕ, ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ , ಸೇನಾ ಸಂಬಂಧಗಳು, ತೈವಾನ್, ಇರಾನ್ ಹಾಗೂ ರಷ್ಯಾ–ಉಕ್ರೇನ್ ಯುದ್ಧ ಸೇರಿದಂತೆ ಹಲವು ಪ್ರಮುಖ ವಿಷಯಗಳ ಕುರಿತು ಮಾತುಕತೆ ನಡೆಸಲಿದ್ದಾರೆ.

ವಿದೇಶಿ ನಾಯಕನೊಬ್ಬರನ್ನು ಸ್ವಾಗತಿಸಲು ಟ್ರಂಪ್ ಸ್ವತಃ ವಿಮಾನ ನಿಲ್ದಾಣಕ್ಕೆ ತೆರಳಿರುವುದು ಗಮನಾರ್ಹ ಬೆಳವಣಿಗೆಯಾಗಿದೆ.

1962ರ ನಂತರ ಅಮೆರಿಕ ಅಧ್ಯಕ್ಷರೊಬ್ಬರು ವಿದೇಶಿ ನಾಯಕರನ್ನು ವಿಮಾನ ನಿಲ್ದಾಣದಲ್ಲೇ ಸ್ವಾಗತಿಸಿರುವುದು ಇದೇ ಮೊದಲ ಬಾರಿ ಎಂದು ಹೇಳಲಾಗಿದೆ.

## ಆಂಧ್ರ–ಒಡಿಶಾ ಕರಾವಳಿಗೆ ಅರ್ನಬ್ ಚಂಡಮಾರುತ ಭೀತಿ

ನವದೆಹಲಿ, ಸೆ.24: ಭಾರತೀಯ ಹವಾಮಾನ ಇಲಾಖೆ ಗುರುವಾರ ತಿಳಿಸಿದಂತೆ, ಬಂಗಾಳ ಕೊಲ್ಲಿಯಲ್ಲಿ ಉಂಟಾಗಿದ್ದ ಚಂಡಮಾರುತ ಅರ್ನಬ್ ಉತ್ತರ ಆಂಧ್ರ ಪ್ರದೇಶ– ದಕ್ಷಿಣ ಒಡಿಶಾ ಕರಾವಳಿಯನ್ನು ದಾಟಿದೆ.

ಚಂಡಮಾರುತ ಒಳನಾಡಿನತ್ತ ಸಾಗುತ್ತಿರುವ ಹಿನ್ನೆಲೆಯಲ್ಲಿ ಆಂಧ್ರ ಪ್ರದೇಶ ಮತ್ತು ಒಡಿಶಾದ ಹಲವು ಭಾಗಗಳಲ್ಲಿ ಭಾರಿ ಮಳೆ ಹಾಗೂ ಬಲವಾದ ಗಾಳಿ ಬೀಸುವ ಸಾಧ್ಯತೆ ಇದೆ.

ಚಂಡಮಾರುತದ ಭೂಪ್ರವೇಶಕ್ಕೂ ಮುನ್ನ ಒಡಿಶಾದ ಗಜಪತಿ, ಕೊರಾಪುಟ್, ರಾಯಗಡ, ನಬರಂಗಪುರ, ಕಲಹಾಂಡಿ ಮತ್ತು ಗಂಜಾಂ ಜಿಲ್ಲೆಗಳನ್ನು ರೆಡ್ ಅಲರ್ಟ್ ವಲಯ ಎಂದು ಘೋಷಿಸಲಾಗಿದೆ.

ಈ ಮಧ್ಯೆ, ಚಂಡಮಾರುತ ಒಡಿಶಾ ಕರಾವಳಿಯತ್ತ ಸಾಗುತ್ತಿದ್ದಂತೆ, ಗಜಪತಿ ಜಿಲ್ಲೆಯಲ್ಲಿ ಅಧಿಕಾರಿಗಳು ಸುಮಾರು 1,500 ನಿವಾಸಿಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದ್ದಾರೆ. , 1,500ಕ್ಕೂ ಹೆಚ್ಚು ಜನರನ್ನು ಈಗಾಗಲೇ ಸ್ಥಳಾಂತರಿಸಲಾಗಿದ್ದು, ಪ್ರವಾಹದ ನೀರಿನಲ್ಲಿ ಯಾರೂ ಸಿಲುಕದಂತೆ ಜಿಲ್ಲಾಡಳಿತ ಕಟ್ಟುನಿಟ್ಟಿನ ಎಚ್ಚರಿಕೆ ವಹಿಸುವಂತೆ ರಾಜ್ಯ ಸರ್ಕಾರ ಸೂಚಿಸಿದೆ ಎಂದು ಒಡಿಶಾ ಸಚಿವ ಸುರೇಶ್ ಪೂಜಾರಿ ಹೇಳಿದ್ದಾರೆ.

ತಗ್ಗು ಪ್ರದೇಶಗಳಲ್ಲಿ ವಾಸಿಸುವ ಜನರನ್ನು ತಮ್ಮ ಗ್ರಾಮಗಳಿಗೆ ನೀರು ತಲುಪುವ ಮುನ್ನವೇ ಸಾಧ್ಯವಾದಷ್ಟು ಬೇಗ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಬೇಕು ಎಂದು ಅವರು ತಿಳಿಸಿದ್ದಾರೆ. ಅಪಾಯದಲ್ಲಿರುವ ಪ್ರದೇಶಗಳಲ್ಲಿ ಹಾವು ಕಡಿತಕ್ಕೆ ಬಳಸುವ ಆಂಟಿ–ವೆನಮ್ ಔಷಧಿಗಳು ಸೇರಿದಂತೆ ಅಗತ್ಯ ವೈದ್ಯಕೀಯ ಸೌಲಭ್ಯಗಳನ್ನು ಲಭ್ಯವಾಗುವಂತೆ ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

**380 ಅಗ್ನಿಶಾಮಕ ತಂಡಗಳು ಸನ್ನದ್ಧ**

ಚಂಡಮಾರುತದ ಹಿನ್ನೆಲೆಯಲ್ಲಿ ಒಡಿಶಾ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆ 380 ತಂಡಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಿದೆ. ಭಾರಿ ಉಪಕರಣಗಳು ಹಾಗೂ ಬಹುಉದ್ದೇಶದ ಅಗ್ನಿಶಾಮಕ ವಾಹನಗಳನ್ನು ಕೂಡ ನಿಯೋಜಿಸಲಾಗಿದೆ ಎಂದು ಐಜಿಪಿ ಡಾ. ಉಮಾಶಂಕರ್ ದಾಶ್ ತಿಳಿಸಿದ್ದಾರೆ.

ಆಳವಾದ ವಾಯುಭಾರ ಕುಸಿತವು ಪಶ್ಚಿಮ–ವಾಯವ್ಯ ದಿಕ್ಕಿನಲ್ಲಿ ಮುಂದುವರಿಯಲಿದ್ದು, ವಿಶಾಖಪಟ್ಟಣಂ ಮತ್ತು ಗೋಪಾಲಪುರ ನಡುವಿನ ಉತ್ತರ ಆಂಧ್ರ ಪ್ರದೇಶ ಹಾಗೂ ದಕ್ಷಿಣ ಒಡಿಶಾ ಕರಾವಳಿಯನ್ನು, ಕಲಿಂಗಪಟ್ಟಣಂನ ನೈರುತ್ಯ ಭಾಗದ ಸಮೀಪ ದಾಟುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.



**ದಕ್ಷಿಣ ಮತ್ತು ಕರಾವಳಿ ಒಡಿಶಾದಲ್ಲಿ ಭಾರಿ ಮಳೆ**

ಆಳವಾದ ವಾಯುಭಾರ ಕುಸಿತದ ಪರಿಣಾಮವಾಗಿ ನಿನ್ನೆಯಿಂದಲೇ ದಕ್ಷಿಣ ಮತ್ತು ಕರಾವಳಿ ಒಡಿಶಾದ ಹಲವು ಭಾಗಗಳಲ್ಲಿ ಭಾರಿ ಮಳೆಯಾಗಿದೆ. ಮುನ್ನೆಚ್ಚರಿಕಾ ಕ್ರಮವಾಗಿ ಅಧಿಕಾರಿಗಳು ಕನಿಷ್ಠ 5,000 ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದ್ದಾರೆ. ಚಂಡಮಾರುತ ಭೂಪ್ರವೇಶದ ಬಳಿಕ ಒಡಿಶಾದಲ್ಲಿ ಮಳೆಯ ತೀವ್ರತೆ ಮತ್ತಷ್ಟು ಹೆಚ್ಚಾಗಿದೆ. ಮಂಗಳವಾರದಿಂದಲೇ ರಾಜ್ಯದಲ್ಲಿ ಮಳೆಯಾಗುತ್ತಿದ್ದು, ಬೆಳಗ್ಗೆ 8.30ರವರೆಗೆ ಕಳೆದ 24 ಗಂಟೆಗಳಲ್ಲಿ ಕೊರಾಪುಟ್ ಜಿಲ್ಲೆಯ ಸೆಮಿಲಿಗುಡಾದಲ್ಲಿ ಗರಿಷ್ಠ 230 ಮಿಮೀ ಮಳೆ ದಾಖಲಾಗಿದೆ. ಇದೇ ಜಿಲ್ಲೆಯಲ್ಲಿ ಜೇಯ್ಪುರದಲ್ಲಿ 161 ಮಿಮೀ ಮಳೆಯಾಗಿದೆ ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.